ಬುಧವಾರ, ಮೇ 5, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 125 | ಪುಟ 10
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ತಾಯಂದಿರ ದಿನಕ್ಕೆ ವಿಶೇಷವಾದ ಗೌರವ ಅರ್ಪಿಸಲು ಅವರಿಗೆ ನೆರವಾಗುವ ಗ್ಯಾಜೆಟ್, ಎಲೆಕ್ಟ್ರಾನಿಕ್ ಉಪಕರಣಗಳನ್ನು ಗಿಫ್ಟ್ ನೀಡುವ ಮೂಲಕ ಸಂಭ್ರಮಿಸಬಹುದು.



ಖಾಸಗಿ ಆಸ್ಪತ್ರೆಗಳ ಹಾಸಿಗೆ ದರ ಪರಿಷ್ಕರಣೆ 8
ಆಳ-ಅಗಲ
ಪಶ್ಚಿಮ ಬಂಗಾಳ: ಸೆಣಸಿ ಗೆದ್ದ 'ಬಂಗಾಳ ಹುಲಿ'
'ಈಗಿನ ಆದ್ಯತೆ ಪ್ರಧಾನಿ ವಸತಿಯೇ?' 7

ಸೆನ್ಸೆಕ್ಸ್	ನಿಫ್ಟಿ	₹/$
48,253 ▼	14,496 ▼	73.85 ▲

ಆಮ್ಲಜನಕ: ಕೇಂದ್ರಕ್ಕೆ ಹೈಕೋರ್ಟ್ ವಿಭಾಗೀಯ ಪೀಠ ಸೂಚನೆ

ರಾಜ್ಯದ ಪಾಲು ಹೆಚ್ಚಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕಕ್ಕೆ ಪೂರೈಕೆಯಾಗುವ ಆಮ್ಲಜನಕದ ಪಾಲನ್ನು (ಕೋಟಾ) ತಾತ್ಕಾಲಿಕವಾಗಿ ಹೆಚ್ಚಿಸಲು ಸಾಧ್ಯವೆ ಎಂದು ಕೇಂದ್ರವನ್ನು ಪ್ರಶ್ನಿಸಿರುವ ಹೈಕೋರ್ಟ್, ಈ ಕುರಿತು ಬುಧವಾರವೇ ಪ್ರತಿಕ್ರಿಯೆ ಸಲ್ಲಿಸುವಂತೆ ತಾಕೀತು ಮಾಡಿದೆ.

ರಾಜ್ಯದಲ್ಲಿ ಆಮ್ಲಜನಕದ ತೀವ್ರ ಕೊರತೆಯಿಂದ ಕೋವಿಡ್ ರೋಗಿಗಳ ಚಿಕಿತ್ಸೆಗೆ ತೊಡಕಾಗಿರುವ ಕುರಿತು ಮಾಧ್ಯಮಗಳಲ್ಲಿ ವರದಿಗಳನ್ನು ಗಮನಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಅರವಿಂದ ಕುಮಾರ್ ಅವರಿದ್ದ ವಿಭಾಗೀಯ ಪೀಠ, ಕೋವಿಡ್‌ಗೆ ಸಂಬಂಧಿಸಿದ 19 ಅರ್ಜಿಗಳನ್ನು ಸ್ವಯಂಪ್ರೇರಿತವಾಗಿ ಮುಂಚಿತವಾಗಿ ವಿಚಾರಣೆಗೆ ಕೈಗೆತ್ತಿಕೊಂಡಿತು.

'ರಾಜ್ಯಕ್ಕೆ ಪೂರೈಕೆಯಾಗಬೇಕಾದ ಆಮ್ಲಜನಕದ ಪಾಲನ್ನು ಪ್ರತಿದಿನಕ್ಕೆ 802 ಟನ್‌ನಿಂದ 865 ಟನ್‌ಗೆ ಹೆಚ್ಚಿಸಲಾಗಿದೆ. ಆದರೆ, ಬುಧವಾರದ (ಮೇ 5) ವೇಳೆಗೆ ರಾಜ್ಯಕ್ಕೆ ನಿತ್ಯ 1,792 ಟನ್‌ಗಳಷ್ಟು ಆಮ್ಲಜನಕದ ಅಗತ್ಯವಿದೆ' ಎಂಬ ಮಾಹಿತಿಯನ್ನು ರಾಜ್ಯ ಸರ್ಕಾರ ನ್ಯಾಯಾಲಯಕ್ಕೆ ಸಲ್ಲಿಸಿತು.

ರಾಜ್ಯ ಸರ್ಕಾರದ ಮಾಹಿತಿಯನ್ನು ಪರಿಶೀಲಿಸಿದ ನ್ಯಾಯಪೀಠ, ಆಮ್ಲಜನಕ ಹಂಚಿಕೆಯ ಪ್ರಮಾಣವನ್ನು ತುರ್ತಾಗಿ ಹೆಚ್ಚಿಸಲು ಸಾಧ್ಯವೆ? ಎಂದು ಕೇಳಿತು. ಸಾಮಾನ್ಯ ಸಂದರ್ಭಗಳಲ್ಲಿ ಅನುಸರಿಸುವ ಎಲ್ಲ ಪ್ರಕ್ರಿಯೆಗಳನ್ನು ಬದಿಗಿಟ್ಟು ತೀರ್ಮಾನ ಕೈಗೊಳ್ಳುವ ಕುರಿತು ತನ್ನ ನಿಲುವನ್ನು ತಿಳಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿತು.



ನಿತ್ಯ 927 ಟನ್ ಕೊರತೆ

'ರಾಜ್ಯಕ್ಕೆ ನಿತ್ಯ 865 ಟನ್ ಆಮ್ಲಜನಕ ಹಂಚಿಕೆ ಮಾಡಲಾಗಿದೆ. ಆದರೆ, ರಾಜ್ಯದ ಬೇಡಿಕೆ ನಿತ್ಯ 1,792 ಟನ್‌ಗೆ ಏರಿಕೆಯಾಗಲಿದೆ ಎಂದು ಅಂದಾಜು ಮಾಡಲಾಗಿದೆ. ಈ ಪ್ರಕಾರ, ರಾಜ್ಯಕ್ಕೆ ನಿತ್ಯ 927 ಟನ್‌ಗಳಷ್ಟು ಕೊರತೆ ಉಂಟಾಗಲಿದೆ' ಎಂದು ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕೇಂದ್ರ ಸರ್ಕಾರಕ್ಕೆ ಬರೆದಿದ್ದ ಪತ್ರದಲ್ಲಿ ತಿಳಿಸಿದ್ದರು.

ರಾಜ್ಯಗಳಿಗೆ ಆಮ್ಲಜನಕದ ಹಂಚಿಕೆಯಾಗುತ್ತಿರುವ ಮಾದರಿಯಲ್ಲಿ ಜಿಲ್ಲಾವಾರು ಹಂಚಿಕೆಗೆ ಯಾವುದೇ ವ್ಯವಸ್ಥೆ ಇಲ್ಲ.

8ನೇ ಪುಟ ನೋಡಿ

ನ್ಯಾಯಾಂಗ ನಿಂದನೆ ದಾಖಲಿಸಬೇಕೇ: ಕೇಂದ್ರಕ್ಕೆ ದೆಹಲಿ ಹೈಕೋರ್ಟ್ ತರಾಟೆ

ನವದೆಹಲಿ: ರಾಷ್ಟ್ರ ರಾಜಧಾನಿಯಲ್ಲಿರುವ ಆಸ್ಪತ್ರೆಗಳಿಗೆ ಅಗತ್ಯವಾದ ಆಮ್ಲಜನಕ ಪೂರೈಸಲು ವಿಫಲವಾಗಿರುವ ಕೇಂದ್ರ ಸರ್ಕಾರದ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ಏಕೆ ದಾಖಲಿಸಿಕೊಳ್ಳಬಾರದು ಎಂದು ದೆಹಲಿ ಹೈಕೋರ್ಟ್ ಮಂಗಳವಾರ ಪ್ರಶ್ನಿಸಿದೆ. 'ನೀವು ನಿಮ್ಮ ತಲೆಯನ್ನು ಆಸ್ಟ್ರಿಚ್ ಪಕ್ಷಿಯಂತೆ ಮರಳಿನಲ್ಲಿ ಹೂತಿಡಬಹುದು. ಆದರೆ ನಾವು ಹಾಗೆ ಮಾಡಲಾಗದು' ಎಂದು ನ್ಯಾಯಮೂರ್ತಿಗಳಾದ ವಿಪಿನ್ ಸಂಘಿ ಮತ್ತು ರೇಖಾ ಪಲ್ಲಿ ಅವರ ಪೀಠವು ಹೇಳಿದೆ.

ದೆಹಲಿಗೆ ಪ್ರತಿ ದಿನ 700 ಟನ್ ಆಮ್ಲಜನಕ ಕೊಡಲಾಗದು ಎಂದು ಕೇಂದ್ರದ ಪರವಾಗಿ ವಾದಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಚೇತನ್ ಶರ್ಮಾ ಹೇಳಿದ್ದು ಪೀಠವನ್ನು ಕೆರಳಿಸಿತು.

'ನೀವು ಈ ನಗರದಲ್ಲಿಯೇ ವಾಸಿಸುತ್ತಿದ್ದೀರಿ ಮತ್ತು ಪರಿಸ್ಥಿತಿಯನ್ನು ನೋಡುತ್ತಿದ್ದೀರಿ. ಹಾಗಿದ್ದರೂ ನಿಮಗೆ ಗೊತ್ತಿಲ್ಲ. ನೀವೇನು ದಂತ ಗೋಪುರದಲ್ಲಿ ಇದ್ದೀರಾ' ಎಂದು ಪೀಠವು ಪ್ರಶ್ನಿಸಿತು.

ದಿನಕ್ಕೆ 700 ಟನ್ ಆಮ್ಲಜನಕ ಪೂರೈಸುವಂತೆ ಸುಪ್ರೀಂ ಕೋರ್ಟ್ ಈಗಾಗಲೇ ನಿರ್ದೇಶನ ನೀಡಿದೆ.

> ನೀವು ಕುರುಡಾದರೂ ನಾವು ಕುರುಡಾಗಲು ಆಗದು. ನಾವು ಕಣ್ಣು ಮುಚ್ಚಲಾಗದು. ಇದು ಅತ್ಯಂತ ಸಂವೇದನಾಶೂನ್ಯ ಮತ್ತು ದುರದೃಷ್ಟಕರ ಸ್ಥಿತಿ
> **ದೆಹಲಿ ಹೈಕೋರ್ಟ್**

ಈಗ ಹೈಕೋರ್ಟ್ ಕೂಡ ಅದನ್ನೇ ಹೇಳುತ್ತಿದೆ. ಏನಾದರೂ ಮಾಡಿ, ದೆಹಲಿಗೆ 700 ಟನ್ ಆಮ್ಲಜನಕ ಪೂರೈಸಿ ಎಂದು ನ್ಯಾಯಮೂರ್ತಿಗಳು ಹೇಳಿದರು.

'ಈಗ ನೀಡುತ್ತಿರುವಂತೆ 490 ಟನ್ ಅಲ್ಲ, ಪ್ರತಿ ದಿನ 700 ಟನ್ ಆಮ್ಲಜನಕ ಒದಗಿಸಬೇಕು ಎಂದು ಏಪ್ರಿಲ್ 30ರಂದು ವಿವರವಾದ ಆದೇಶವನ್ನು ಸುಪ್ರೀಂ ಕೋರ್ಟ್ ನೀಡಿದೆ. ನ್ಯಾಯಾಂಗ ನಿಂದನೆ ನಮ್ಮಲ್ಲಿರುವ ಕೊನೆಯ ಅಸ್ತ್ರ. ಆದರೆ, ಆ ವಿಚಾರ ನಮ್ಮ ತಲೆಯಲ್ಲಿ ಖಂಡಿತವಾಗಿಯೂ ಇದೆ. ಅಲ್ಲಿಯ ತನಕ ಹೋಗುವಂತೆ ಮಾಡಬೇಡಿ. ಈವರೆಗೆ ಆಗಿರುವುದು ಸಾಕಾಗಿದೆ. ಇದು ಕಾರ್ಯರೂಪಕ್ಕೆ ಬರಬೇಕಾದ ಮಾತು. ದೆಹಲಿಗೆ ದಿನಕ್ಕೆ 700 ಟನ್ ಆಮ್ಲಜನಕ ಪೂರೈಸುವ ವಿಚಾರದಲ್ಲಿ 'ಇಲ್ಲ' ಎಂಬುದನ್ನು ನಾವು ಕೇಳಿಸಿಕೊಳ್ಳುವುದೇ ಇಲ್ಲ' ಎಂದು ಹೈಕೋರ್ಟ್ ಹೇಳಿದೆ.

ಆಮ್ಲಜನಕ ಕೊರತೆ: ಮತ್ತೆ ಒಂಬತ್ತು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಕಾಲದಲ್ಲಿ ಆಮ್ಲಜನಕ ಸಿಗದೇ ರೋಗಿಗಳು ಮೃತಪಡುತ್ತಿರುವ ದುರಂತಗಳ ಸರಣಿ ಮುಂದುವರಿದಿದೆ. ರಾಜ್ಯದಲ್ಲಿ ಮಂಗಳವಾರ ಪ್ರತ್ಯೇಕ ಪ್ರಕರಣಗಳಲ್ಲಿ ಒಂಬತ್ತು ಮಂದಿ ಆಮ್ಲಜನಕದ ಕೊರತೆಯಿಂದಾಗಿ ಮೃತಪಟ್ಟಿದ್ದಾರೆ.

ಕಲಬುರ್ಗಿಯ ಅಫಜಲಪುರ ತಾಲ್ಲೂಕು ಆಸ್ಪತ್ರೆಯಲ್ಲಿ ನಾಲ್ವರು ಕೋವಿಡ್ ಸೋಂಕಿತರು ಮೃತಪಟ್ಟಿದ್ದರೆ, ಬೆಂಗಳೂರಿನಲ್ಲಿ ಇಬ್ಬರು ಹಾಗೂ ಬೆಳಗಾವಿಯಲ್ಲಿ ಮೂವರು ಅಸುನೀಗಿದ್ದಾರೆ.

'ಆರು ಆಮ್ಲಜನಕದ ಸಿಲಿಂಡರ್‌ಗಳನ್ನು ಅಳವಡಿಸಲಾಗಿತ್ತು. ನಾಲ್ಕು ರಾತ್ರಿ ಖಾಲಿಯಾಗಿದ್ದು, ರೋಗಿಗಳು ಬೆಡ್ ಮೇಲೇ ನರಳಾಡಿ ಕೊನೆಯುಸಿರೆಳೆದರು' ಎಂದು ಮೃತರ ಸಂಬಂಧಿಕರು ದೂರಿದರು. ಅಫಜಲಪುರ ಶಾಸಕ ಎಂ.ವೈ.ಪಾಟೀಲ ಅವರು, 'ಇಲ್ಲಿ ಫಿಜಿಷಿಯನ್‌ಗಳೇ ಇಲ್ಲ. ಅಗತ್ಯವಿರುವಷ್ಟು ಸಿಲಿಂಡರ್‌ಗಳು ಇಲ್ಲ. ಆಮ್ಲಜನಕದವಿಲ್ಲದೇ ಈ ಸಾವು ಸಂಭವಿಸಿವೆ' ಎಂದರು.

ಕೊರತೆ ಇರಲಿಲ್ಲ: 'ಕೋವಿಡ್‌ನಿಂದ ಆರೋಗ್ಯ ವಿಷಮಿಸಿದ್ದರಿಂದ ಸೋಮವಾರ ಮೂವರು ಹಾಗೂ ಮಂಗಳವಾರ ಒಬ್ಬ ರೋಗಿ ಮೃತಪಟ್ಟಿದ್ದಾರೆ. ಆಮ್ಲಜನಕದ ಕೊರತೆಯಿಂದ ಅಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಮುರುಗೇಶ ನಿರಾಣಿ ಹೇಳಿಕೆ ನೀಡಿದರು.

'ಸೋಂಕಿತ ನಾಲ್ವರ ಪರಿಸ್ಥಿತಿ ಗಂಭೀರವಾಗಿತ್ತು. ಆಮ್ಲಜನಕದ ಪ್ರಮಾಣ 75ಕ್ಕಿಂತ ಕಡಿಮೆ ಇತ್ತು. ಇಬ್ಬರಿಗೆ ಮಧುಮೇಹ ಇತ್ತು. ನಾವು ನಮ್ಮ ಕರ್ತವ್ಯ ಮಾಡಿದೆವು. ಆದರೂ ಚಿಕಿತ್ಸೆಗೆ ಸ್ಪಂದಿಸದೇ ಕೊನೆಯುಸಿರೆಳೆದರು' ಎಂದು ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಹಣಮಂತಪ್ಪ ಹಾಳಮಳ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

9ನೇ ಪುಟ ನೋಡಿ

ಮೇ 12 ರ ಬಳಿಕವೂ ಕಠಿಣ ಕರ್ಫ್ಯೂ ?

ಬೆಂಗಳೂರು: ಮೇ 12 ರ ಬಳಿಕ ಇನ್ನೂ 15 ದಿನಗಳ ಕಾಲ ಕಠಿಣ 'ಕರ್ಫ್ಯೂ' ಮುಂದುವರಿಸುವ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆದಿದ್ದು, ಇದೇ 10 ರಂದು ಮತ್ತೊಮ್ಮೆ ಸಭೆ ಸೇರಿ ತೀರ್ಮಾನ ತೆಗೆದುಕೊಳ್ಳಲು ನಿರ್ಧರಿಸಲಾಗಿದೆ.

'ಪೂರ್ಣ ಪ್ರಮಾಣದಲ್ಲಿ ಲಾಕ್‌ಡೌನ್ ಮಾಡುವಂತೆ ಸುಪ್ರೀಂಕೋರ್ಟ್ ಸೂಚಿಸಿದೆ. ಕೇಂದ್ರ ಸರ್ಕಾರ ಯಾವ ತೀರ್ಮಾನ ತೆಗೆದುಕೊಳ್ಳುತ್ತದೆ ಕಾದು ನೋಡೋಣ' ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು ಎಂದು ಮೂಲಗಳು ತಿಳಿಸಿವೆ.

' ಒಂದು ವೇಳೆ ಕೇಂದ್ರ ಸರ್ಕಾರ ಲಾಕ್‌ಡೌನ್ ಬಗ್ಗೆ ನಿರ್ಧಾರ ತೆಗೆದುಕೊಳ್ಳದೇ ಇದ್ದರೆ, ತಜ್ಞರ ಜತೆ ಸಭೆ ನಡೆಸಿ ಅವರ ಶಿಫಾರಸಿನಂತೆ ನಡೆದುಕೊಳ್ಳೋಣ. ಒಂದು ವೇಳೆ ಕಠಿಣ ಕರ್ಫ್ಯೂಗೆ ಶಿಫಾರಸು ಮಾಡಿದರೆ ತೀರ್ಮಾನ ತೆಗೆದುಕೊಳ್ಳಬಹುದು ಎಂದು ಸಭೆಯಲ್ಲಿ ನಿರ್ಧರಿಸಲಾಯಿತು' ಎಂದು ಮೂಲಗಳು ಹೇಳಿವೆ.

ರಾಜ್ಯದಲ್ಲೇ ಬಳಸಿಕೊಳ್ಳಲು ಒಪ್ಪಿಗೆ: ರಾಜ್ಯದಲ್ಲಿ ಉತ್ಪಾದನೆ ಆಗುವ ವೈದ್ಯಕೀಯ ಆಮ್ಲಜನಕವನ್ನು ರಾಜ್ಯದಲ್ಲೇ ಬಳಸಿಕೊಳ್ಳಲು ಗೃಹ ಸಚಿವ ಅಮಿತ್ ಶಾ ಅವರ ಜತೆ ಚರ್ಚೆ ನಡೆಸಿದ್ದು, ಇದಕ್ಕೆ ಅವರು ಒಪ್ಪಿಗೆ ನೀಡಿದ್ದಾರೆ.
ಅಲ್ಲದೆ, ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳು ಕಡಿಮೆ ಆಗುತ್ತಿರುವ ಕಾರಣ ಅಲ್ಲಿ ಜಿಂದಾಲ್ ಕಂಪನಿ ಉತ್ಪಾದಿಸುತ್ತಿರುವ ಆಮ್ಲಜನಕವನ್ನು ರಾಜ್ಯಕ್ಕೆ ಪಡೆಯಲು ಬೇಡಿಕೆ ಸಲ್ಲಿಸಿದ್ದೇವೆ. ನೆರೆಯ ರಾಜ್ಯಗಳಿಂದಲೂ ಪಡೆದುಕೊಳ್ಳಲಾಗುವುದು ಎಂದು ಯಡಿಯೂರಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

9ನೇ ಪುಟ ನೋಡಿ

ಕೋವಿಡ್: ದೇಶದಲ್ಲಿ 3.62 ಲಕ್ಷ ಪ್ರಕರಣ

ನವದೆಹಲಿ: ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ (ಮಧ್ಯರಾತ್ರಿ 12ರ ವರೆಗೆ) ಕೋವಿಡ್ ದೃಢಪಟ್ಟವರ ಸಂಖ್ಯೆ 3,62,649 ಇದ್ದು, 3,445 ಮಂದಿ ಮೃತಪಟ್ಟಿದ್ದಾರೆ. ಒಟ್ಟು ಪ್ರಕರಣಗಳ ಸಂಖ್ಯೆ 2,06,38,281 ಆಗಿದೆ. ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 34,83,997 ರಷ್ಟಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ
ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ-5

ಒಳ ಪುಟ
ರೋಗಿಗಳ ಸಾವು: ನ್ಯಾಯಾಂಗ ತನಿಖೆಗೆ ಆಗ್ರಹ 4

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ಝಣ ಝಣ ಕಾಂಚಾಣ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಆಮ್ಲಜನಕ ಪೂರೈಕೆ: ವಾಟ್ಸ್‌ಆ್ಯಪ್ ಗ್ರೂಪ್ ಚಾಟಿಂಗ್

ಮೈಸೂರು ಡಿಸಿ ಆಕ್ಷೇಪ ಬಹಿರಂಗ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಚಾಮರಾಜನಗರ ಜಿಲ್ಲಾಡಳಿತದ ಆಕ್ಸಿಜನ್ ವಾಟ್ಸ್ ಆ್ಯಪ್ ಗ್ರೂಪ್‌ನಲ್ಲಿ ನಡೆದ ಅಧಿಕಾರಿಗಳ ಚಾಟಿಂಗ್ ವೇಳೆ, ಅಧಿಕಾರಿಯೊಬ್ಬರು ಜಿಲ್ಲೆಗೆ ಆಮ್ಲಜನಕ ಪೂರೈಸಲು ಮೈಸೂರು ಜಿಲ್ಲಾಧಿಕಾರಿ ಆಕ್ಷೇಪಿಸಿದ್ದಾಗಿ ಹೇಳಿದ್ದು, ವೈದ್ಯಾಧಿಕಾರಿಗಳು ಚರ್ಚಿಸಿದ ಮಾಹಿತಿಯು ಈ ಭಾಗದ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಏ.27ರಂದು ನಡೆದ ಚರ್ಚೆಯಲ್ಲಿ, ವೈದ್ಯಾಧಿಕಾರಿಯೊಬ್ಬರು 'ಸರ್, ಇಂದು ನಡೆದ ಸಭೆಯಲ್ಲಿ ಮೈಸೂರು ಜಿಲ್ಲಾಧಿಕಾರಿ, ಚಾಮರಾಜನಗರಕ್ಕೆ ಆಮ್ಲಜನಕ ಪೂರೈಸುವುದಕ್ಕೆ ಆಕ್ಷೇಪಿಸಿದ್ದಾರೆ' ಎಂದಿದ್ದಾರೆ. ಹೀಗಾಗಿ, ಜಿಲ್ಲೆಯು ಎದುರಿಸುತ್ತಿರುವ ಆಮ್ಲಜನಕದ ಕೊರತೆಯ ಸಮಸ್ಯೆಯು ಕೇವಲ ಒಂದೆರಡು ದಿನಗಳದ್ದಲ್ಲ ಎಂಬುದು ಬಹಿರಂಗಗೊಂಡಿದೆ. ಇದರ ಹಿಂದೆಯೇ ವಿವಿಧ ಸಂಘಟನೆಗಳ ಕಾರ್ಯಕರ್ತರಿಂದ ಮೈಸೂರು ಜಿಲ್ಲಾಧಿಕಾರಿ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಇಲ್ಲಿನ ಆಸ್ಪತ್ರೆಯಲ್ಲಿ ದಾಖಲಾಗಿರುವ ರೋಗಿಗಳು ಆತಂಕಕ್ಕೆ ಒಳಗಾಗಿದ್ದಾರೆ.

ವಿಚಾರಣೆಗೆ ಹೈಕೋರ್ಟ್ ಒಲವು

ಬೆಂಗಳೂರು: ಚಾಮರಾಜನಗರದಲ್ಲಿ ಆಮ್ಲಜನಕದ ಕೊರತೆಯಿಂದ 24 ರೋಗಿಗಳ ಸಾವು ಪ್ರಕರಣ ಸಂಬಂಧಿಸಿದಂತೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ವಿಚಾರಣೆ ನಡೆಸಲು ಹೈಕೋರ್ಟ್ ವಿಭಾಗೀಯ ಪೀಠ ಒಲವು ತೋರಿದೆ. ಮಂಗಳವಾರ ಈ ಕುರಿತು ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಬಗ್ಗೆ ರಾಜ್ಯ ಸರ್ಕಾರದ ಪ್ರತಿಕ್ರಿಯೆ ಸಲ್ಲಿಸುವಂತೆ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವಡಗಿ ಅವರಿಗೆ ಸೂಚಿಸಿತು.

'ಇದು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ವಿಚಾರಣೆ ನಡೆಸಲು ಸೂಕ್ತ ಪ್ರಕರಣ ಎಂಬುದು ನಮ್ಮ ಅಭಿಪ್ರಾಯ. ಇದೊಂದೇ ಪ್ರಕರಣ ಅಲ್ಲ. ಇದೇ ರೀತಿಯ ಘಟನೆಗಳು ಬೇರೆ ಜಿಲ್ಲೆಗಳಿಂದಲೂ ವರದಿಯಾಗುತ್ತಿವೆ. ಈ ವಿಚಾರದಲ್ಲಿ ಅಡ್ವೊಕೇಟ್ ಜನರಲ್ ಅಭಿಪ್ರಾಯ ಆಲಿಸಲು ಬಯಸುತ್ತೇವೆ' ಎಂದು ನ್ಯಾಯಪೀಠ ಹೇಳಿತು.

ತುರ್ತು ಬಳಕೆಗಾಗಿ ಜಿಲ್ಲಾ ಕೇಂದ್ರಗಳಲ್ಲಿ ನಿಗದಿತ ಪ್ರಮಾಣದ ಆಮ್ಲಜನಕವನ್ನು ಕಾಯ್ದಿರಿಸಲು ಸಾಧ್ಯವೆ? ಎಂಬುದನ್ನೂ ಸ್ಪಷ್ಟಪಡಿಸುವಂತೆ ಸೂಚಿಸಿತು.

ಅಡ್ವೊಕೇಟ್ ಜನರಲ್ ಅವರು, ಆಮ್ಲಜನಕ ಹಂಚಿಕೆಗೆ ಸಂಬಂಧಿಸಿ ವೆಬ್ ಪೋರ್ಟಲ್ ಆರಂಭಿಸಲಾಗಿದೆ. ಅಲ್ಲಿಯೇ ಆಸ್ಪತ್ರೆಗಳು ಬೇಡಿಕೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಪಾರದರ್ಶಕವಾಗಿ ಹಂಚಿಕೆ ಪ್ರಕ್ರಿಯೆ ನಡೆಸುತ್ತಿದೆ ಎಂದು ಹೇಳಿದರು.

ಆಮ್ಲಜನಕ ಘಟಕ ಭರ್ತಿಯಾಗಿದೆ-ಡೀನ್: 'ಸದ್ಯ ಈಗ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ 180 ಆಮ್ಲಜನಕ ಸಿಲಿಂಡರ್‌ಗಳು ಇವೆ. 6 ಸಾವಿರ ಲೀಟರ್ ಸಾಮರ್ಥ್ಯದ ಘಟಕವನ್ನು ಮಂಗಳವಾರ ಭರ್ತಿ ಮಾಡಲಾಗಿದೆ' ಎಂದು ವೈದ್ಯಕೀಯ ಕಾಲೇಜಿನ ಡೀನ್ ಡಾ.ಸಂಜೀವ್ ಹೇಳಿದರು.

9ನೇ ಪುಟ ನೋಡಿ

ಐಪಿಎಲ್ ಟೂರ್ನಿ ಮುಂದೂಡಿಕೆ

ನವದೆಹಲಿ (ಪಿಟಿಐ): ಕೋವಿಡ್ ಹಾವಳಿಯ ಮುಂದೆ ಕೊನೆಗೂ ಮಂಡಿಯೂರಿದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಯು ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯನ್ನು ಅನಿರ್ದಿಷ್ಟಾವಧಿಯವರೆಗೆ ಮುಂದೂಡಿದೆ.

'ಟೂರ್ನಿಯನ್ನು ಸದ್ಯಕ್ಕೆ ಸ್ಥಗಿತಗೊಳಿಸಿದ್ದೇವೆ. ಮುಂದೆ ಸೂಕ್ತವಾದ ಸಮಯದಲ್ಲಿ ಮುಂದುವರಿಸುವ ಕುರಿತು ಯೋಚಿಸುತ್ತೇವೆ. ಆದರೆ ಈ ತಿಂಗಳು ಪಂದ್ಯಗಳ ಆಯೋಜನೆ ಸಾಧ್ಯವಿಲ್ಲ' ಎಂದು ಐಪಿಎಲ್ ಆಡಳಿತ ಸಮಿತಿ ಮುಖ್ಯಸ್ಥ ಬ್ರಿಜೇಶ್ ಪಟೇಲ್ ಮಂಗಳವಾರ ತಿಳಿಸಿದ್ದಾರೆ.

'ಐಪಿಎಲ್ ಆಡಳಿತ ಸಮಿತಿ ಮತ್ತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಪದಾಧಿಕಾರಿಗಳು ತುರ್ತು ಸಭೆ ನಡೆಸಲಾಯಿತು. ಪಂದ್ಯಗಳ ಮುಂದೂಡಿಕೆಯ ಕುರಿತು ಒಮ್ಮತದ ತೀರ್ಮಾನ ಕೈಗೊಳ್ಳಲಾಯಿತು' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. 10

ದ್ವಿತೀಯ ಪಿಯು ಪರೀಕ್ಷೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಇದೇ 24ರಿಂದ ಆರಂಭವಾಗಬೇಕಿದ್ದ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಗಳನ್ನು ರಾಜ್ಯ ಸರ್ಕಾರ ಮುಂದೂಡಿದೆ.

ಅಲ್ಲದೆ, ದ್ವಿತೀಯ ಪಿಯು ಪರೀಕ್ಷೆಗಳ ನಂತರ ನಡೆಸಲು ಉದ್ದೇಶಿಸಿದ್ದ ಪ್ರಥಮ ಪಿಯು ಪರೀಕ್ಷೆಗಳನ್ನು ರದ್ದುಪಡಿಸಲಾಗಿದೆ. ಈ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ತೇರ್ಗಡೆ ಮಾಡಲು ತೀರ್ಮಾನಿಸಿದೆ.

ಇಲಾಖೆಯ ಅಧಿಕಾರಿಗಳ ಜೊತೆ ಮಂಗಳವಾರ ಚರ್ಚಿಸಿದ ಬಳಿಕ ಈ ವಿಷಯ ತಿಳಿಸಿದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್, 'ದ್ವಿತೀಯ ಪಿಯು ಪರೀಕ್ಷೆಗಳ ದಿನಾಂಕಗಳನ್ನು ಮರು ನಿಗದಿ ಮಾಡಲಾಗುವುದು. ಪರೀಕ್ಷೆಗಳು ಆರಂಭವಾಗುವುದಕ್ಕೆ 15-20 ದಿನಗಳ ಮೊದಲೇ ವಿದ್ಯಾರ್ಥಿಗಳಿಗೆ ತಿಳಿಸಲಾಗುವುದು' ಎಂದರು.

8ನೇ ಪುಟ ನೋಡಿ

ಜೆಇಇ (ಮೇನ್ಸ್) ಮುಂದೂಡಿಕೆ

ನವದೆಹಲಿ: ಮೇ 24ರಿಂದ 28ರವರೆಗೆ ನಡೆಯಬೇಕಿದ್ದ ಜೆಇಇ (ಮೇನ್ಸ್) ಅನ್ನು ಕೋವಿಡ್-19 ಹಿನ್ನೆಲೆಯಲ್ಲಿ ಮುಂದೂಡಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮಂಗಳವಾರ ತಿಳಿಸಿದೆ.

ಏಪ್ರಿಲ್ ತಿಂಗಳ ಪರೀಕ್ಷೆಯನ್ನೂ ಮುಂದೂಡಲಾಗಿತ್ತು. ಈ ಎರಡೂ ಪರೀಕ್ಷೆಗಳ ಮುಂದಿನ ದಿನಾಂಕವನ್ನು ಮುಂದೆ ತಿಳಿಸಲಾಗುವುದು ಎಂದು ಹೇಳಿದೆ.

> ದ್ವಿತೀಯ ಪಿಯುಸಿ ಪರೀಕ್ಷೆಗಳನ್ನು ಮುಂದೂಡಿರುವುದರಿಂದ ಮನೆಯಿಂದಲೇ ಕೆಲಸ ಮಾಡುವಂತೆ ಉಪನ್ಯಾಸಕರಿಗೆ ಸೂಚಿಸಲಾಗಿದೆ
> **ಎಸ್. ಸುರೇಶ್‌ಕುಮಾರ್**
> ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

ಚಿನಕುರಳಿ
ಪ್ರಕಾಶ್ ಶೆಟ್ಟಿ



ದುಡ್ಡು ಕೊಟ್ಟರೆ ಸಿಗುತ್ತೆ ಹಾಸಿಗೆ: ಇದು ಬಿಬಿಎಂಪಿ 'ಹೇಸಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪೀಡಿತರಿಗೆ ಹಾಸಿಗೆ, ಆಮ್ಲಜನಕ ಸಿಗದೇ ಜನ ಸಾಯುತ್ತಿದ್ದು, ಬೆಂಗಳೂರು ಎಂದರೆ ಜನ ಬೆಚ್ಚಿ ಬೀಳುವ ಸ್ಥಿತಿ ಇದೆ. ಹಾಸಿಗೆ ಇಲ್ಲ ಎಂಬ ಆತಂಕದಲ್ಲಿ ಜನ ದಿನ ದೂಡುತ್ತಿದ್ದರೆ, ಹಣ ಕೊಟ್ಟವರಿಗೆ ಬಿಬಿಎಂಪಿ ಹೆಸರಿನಲ್ಲೇ ಹಾಸಿಗೆ ಕಾಯ್ದಿರಿಸುವ ಬ್ರಹ್ಮಾಂಡ ಭ್ರಷ್ಟಾಚಾರದ ಕರಾಳಮುಖ ಬಯಲಿಗೆ ಬಂದಿದೆ.

ಬಿಜೆಪಿಯವರೇ ಆಗಿರುವ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಸತೀಶ ರೆಡ್ಡಿ, ಎಲ್.ಎ. ರವಿ ಸುಬ್ರಹ್ಮಣ್ಯ ಹಾಗೂ ಉದಯ್ ಗರುಡಾಚಾರ್ ಈ ಅವ್ಯವಹಾರವನ್ನು ಬಯಲಿಗೆಳೆದಿದ್ದಾರೆ. ಬಿಬಿಎಂಪಿ ದಕ್ಷಿಣ ವಲಯದ ವಾರ್ ರೂಂಗೆ ಮಂಗಳವಾರ ಭೇಟಿ ನೀಡಿದ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಬಿ.ಯು.ನಂಬರ್ (ಬೆಂಗಳೂರು ನಗರ ಕೋವಿಡ್ ಸಂಖ್ಯೆ) ಪಡೆದು ಬಿಬಿಎಂಪಿ ಮೂಲಕ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಹಾಸಿಗೆಗಳೇ ಸಿಗುತ್ತಿಲ್ಲ. ಆದರೆ ದುಡ್ಡು ಕೊಟ್ಟರೆ ಎಷ್ಟು ಹಾಸಿಗೆಗಳನ್ನು ಬೇಕಾದರೂ ಕಾಯ್ದಿರಿಸಲಾಗುತ್ತದೆ.

ಈ ಅವ್ಯವಹಾರ ಪತ್ತೆ ಹಚ್ಚಿದ ಜನಪ್ರತಿನಿಧಿಗಳು ಈ ಕುರಿತ ದಾಖಲೆಗಳನ್ನು ಬಿಡುಗಡೆ ಮಾಡಿದರು. ಸರ್ಕಾರಿ ವ್ಯವಸ್ಥೆಯಲ್ಲಿ ಏನೆಲ್ಲ ಅಕ್ರಮ ನಡೆಯುತ್ತಿವೆ, ಬಡಜನರಿಗೆ ಏಕೆ ಸಕಾಲದಲ್ಲಿ ಹಾಸಿಗೆಗಳು ಸಿಗುತ್ತಿಲ್ಲ ಎಂಬುದನ್ನು ಎಳೆ ಎಳೆಯಾಗಿ ಬಿಚ್ಚಿಟ್ಟರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ತೇಜಸ್ವಿ ಸೂರ್ಯ, 'ಒಂದು ತಿಂಗಳ ಅವಧಿಯಲ್ಲಿ 10 ಸಾವಿರಕ್ಕೂ ಅಧಿಕ ಕೋವಿಡ್ ಸೋಂಕಿತರಿಗೆ ಹಾಸಿಗೆ ಹಂಚಿಕೆ ಮಾಡಿರುವುದನ್ನು ಕೂಲಂಕಷವಾಗಿ ಪರಿಶೀಲಿಸಿದ್ದೇವೆ. ಹಾಸಿಗೆ ಹಂಚಿಕೆಯಲ್ಲಿ ಭಾರಿ ಅವ್ಯವಹಾರ ನಡೆದಿರುವುದು ಈ ವೇಳೆ ಕಂಡುಬಂದಿದೆ' ಎಂದು ಹೇಳಿದರು.

8ನೇ ಪುಟ ನೋಡಿ

'ಉನ್ನತ ಮಟ್ಟದ ತನಿಖೆ ನಡೆಸಿ'

'ಹಾಸಿಗೆ ಪಡೆಯಲು ರೋಗಿಗಳ ಬಂಧುಗಳು ಶಾಸಕರು, ಸಂಸದರಲ್ಲದೇ ಗುರುತು ಪರಿಚಯ ಇಲ್ಲದವರಲ್ಲಿ ಅಂಗಲಾಚುತ್ತಿದ್ದಾರೆ. ಹಾಸಿಗೆ ಸಿಗದೆ ಜನ ಸಾಯುತ್ತಿದ್ದಾರೆ. ಹಾಸಿಗೆ ಬ್ಲಾಕ್ ಮಾಡುವುದು ಕೇವಲ ಭ್ರಷ್ಟಾಚಾರ ಅಲ್ಲ; ಅದು ಕೊಲೆ. ಇದರಲ್ಲಿ ಭಾಗಿಯಾದವರೆಲ್ಲ ರಣಹದ್ದುಗಳು. ಇದನ್ನು ನಡೆಸುವವರು ಹುಳಬಿದ್ದು ಸಾಯಲಿದ್ದಾರೆ. ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು. ಅಧಿಕಾರಿಗಳ ತಲೆದಂಡ ಆಗಬೇಕು' ಎಂದು ತೇಜಸ್ವಿಸೂರ್ಯ ಒತ್ತಾಯಿಸಿದರು.

ಯಾವ ರೀತಿ ಅಕ್ರಮ?

- ಕೋವಿಡ್ ಸೋಂಕಿನ ಲಕ್ಷಣ ಇಲ್ಲದ ವ್ಯಕ್ತಿ ಹೆಸರಿನಲ್ಲಿ ಹಾಸಿಗೆ ಹಂಚಿಕೆ ಮಾಡಿ ಅದನ್ನು ಇನ್ನೊಬ್ಬ ವ್ಯಕ್ತಿಯ ಬಳಕೆಗೆ ನೀಡಲಾಗಿದೆ.
- ಮನೆಯಲ್ಲೇ ಪ್ರತ್ಯೇಕ ವಾಸದಲ್ಲಿರುವ ಸೋಂಕಿತೆಯ ಹೆಸರಿನಲ್ಲಿ ಐಸಿಯು ಹಾಸಿಗೆ ಬ್ಲಾಕ್ ಮಾಡಲಾಗಿದೆ. ಆ ವಿಚಾರ ಆ ಮಹಿಳೆಗೇ ಗೊತ್ತಿಲ್ಲ.
- ಒಬ್ಬ ಮಹಿಳೆಯ ಹೆಸರಲ್ಲಿ ಮೂರು ಆಸ್ಪತ್ರೆಗಳಲ್ಲಿ ಹಾಸಿಗೆ ಕಾಯ್ದಿರಿಸಲಾಗಿದೆ. ಆಕೆಗೆ ಹಾಸಿಗೆಯ ಅಗತ್ಯವೂ ಇರಲಿಲ್ಲ, ಈ ವಿಷಯವೂ ಆ ರೋಗಿಯ ಕಡೆಯವರಿಗೆ ತಿಳಿದಿರಲಿಲ್ಲ.
- ಹಾಸಿಗೆ ಅಗತ್ಯವೇ ಇಲ್ಲದ ಇನ್ನೊಬ್ಬ ಮಹಿಳೆ ಹೆಸರಿನಲ್ಲಿ ಐಸಿಯು ಹಾಸಿಗೆ ಕಾಯ್ದಿರಿಸಲಾಗಿದೆ.
- ಒಬ್ಬ ಮಹಿಳೆಗೆ ಒಂದೇ ಆಸ್ಪತ್ರೆಯಲ್ಲಿ ಎರಡು ಬಾರಿ ಎಚ್‌ಡಿಯು ಹಾಸಿಗೆ ಕಾಯ್ದಿರಿಸಲಾಗಿದೆ. ಆದರೆ, ಆ ಮಹಿಳೆ ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಿಬಿಎಂಪಿ ಹಾಸಿಗೆ ಕಾಯ್ದಿರಿಸಿರುವ ವಿಚಾರವೇ ಮಹಿಳೆಯ ಕಡೆಯವರಿಗೆ ತಿಳಿದಿಲ್ಲ.
- ಕೆಲವು ರೋಗಿಗಳು ಹಾಸಿಗೆ ಕಾಯ್ದಿರಿಸಿದ ತಕ್ಷಣವೇ ಆಸ್ಪತ್ರೆಗೆ ದಾಖಲಾಗಿದ್ದಾರೆ. ಇದು ಆಸ್ಪತ್ರೆ ಹಾಗೂ ಆರೋಗ್ಯ ಮಿತ್ರ ಸಿಬ್ಬಂದಿಯ ಅಕ್ರಮ ನಂಟಿಗೆ ಉದಾಹರಣೆ.

ಇನ್ನಷ್ಟು ಸುದ್ದಿಗಳು 3

ಆಸ್ಪತ್ರೆಗಳಿಗೆ ಅಲೆದಾಟ; ಅಪಘಾತದ ಗಾಯಾಳು ಸಾವು

ಬೆಂಗಳೂರು: ಅಪಘಾತದಲ್ಲಿ ಗಾಯಗೊಂಡಿದ್ದ ಶ್ರೀನಿವಾಸ್ (54) ಎಂಬುವರು ಮೃತಪಟ್ಟಿದ್ದು, ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡಿದರೂ ಹಾಸಿಗೆ ಹಾಗೂ ಸೂಕ್ತ ಚಿಕಿತ್ಸೆ ಸಿಗದಿರುವುದೇ ಸಾವಿಗೆ ಕಾರಣವೆಂಬ ಆರೋಪ ಕೇಳಿಬಂದಿದೆ.

'ರಾಮಮೂರ್ತಿನಗರ ಬಳಿಯ ಕಲ್ಕೆರೆಯ ಶ್ರೀನಿವಾಸ್, ಫ್ರಾಬ್ರಿಕೇಷನ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಸೋಮವಾರ ಸಂಜೆ ದ್ವಿಚಕ್ರ ವಾಹನದಲ್ಲಿ ಹೊರವರ್ತುಲ ರಸ್ತೆಯಲ್ಲಿ ಹೆಬ್ಬಾಳ ಕಡೆ ಹೊರಟಿದ್ದರು. ನಿಯಂತ್ರಣ ತಪ್ಪಿ ದ್ವಿಚಕ್ರ ವಾಹನ ಉರುಳಿಬಿದ್ದಿತ್ತು' ಎಂದು ಬಾಣಸವಾಡಿ ಸಂಚಾರ ಪೊಲೀಸರು ಹೇಳಿದರು.

'ಅವರ ತಲೆ ಹಾಗೂ ಎಡ ಭಾಗಕ್ಕೆ ತೀವ್ರ ಪೆಟ್ಟು ಬಿದ್ದಿತ್ತು' ಎಂದರು.

ಆಸ್ಪತ್ರೆಗಳ ಅಲೆದಾಟ: 'ನನ್ನನ್ನು ಬದುಕಿಸಿ' ಎನ್ನುತ್ತಿದ್ದ ಶ್ರೀನಿವಾಸ್ ಅವರನ್ನು ವಾಹನದಲ್ಲಿ ಸ್ಪೆಷಲಿಸ್ಟ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ, ಆ ಆಸ್ಪತ್ರೆಯಲ್ಲಿ ಕೊರೊನಾ ಸೋಂಕಿತರಿಂದ ಹಾಸಿಗೆಗಳು ಭರ್ತಿಯಾಗಿದ್ದವು. ಹಾಸಿಗೆ 'ಇಲ್ಲವೆಂದು ವೈದ್ಯರು ತಿಳಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಉಸಿರಾಡುತ್ತಿದ್ದ ಶ್ರೀನಿವಾಸ್ ಅವರನ್ನು ಅಲ್ಲಿಂದ ಅಂಬೇಡ್ಕರ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿಯೂ ಹಾಸಿಗೆ 'ಇಲ್ಲವೆಂದು ಉತ್ತರ ಸಿಕ್ಕಿತ್ತು. ಬಳಿಕ ಪುನಃ ಸ್ಪೆಷಲಿಸ್ಟ್ ಆಸ್ಪತ್ರೆಗೆ ಕರೆತರಲಾಗಿತ್ತು. ಅಷ್ಟರಲ್ಲೇ ಶ್ರೀನಿವಾಸ್ ಪ್ರಾಣ ಹೋಗಿತ್ತು. ಅವರು ಮೃತಪಟ್ಟಿರುವುದಾಗಿ ಸ್ಪೆಷಲಿಸ್ಟ್ ಆಸ್ಪತ್ರೆ ವೈದ್ಯರೇ ಖಚಿತಪಡಿಸಿದರು' ಎಂದೂ ಮೂಲಗಳು ತಿಳಿಸಿವೆ.

'ಚಿಕಿತ್ಸೆ ಸಿಗುವುದು ಮುಖ್ಯ': 'ಶ್ರೀನಿವಾಸ್ ಅವರು ಹೆಲ್ಮೆಟ್ ಧರಿಸಿದ್ದರು. ಆದರೆ, ದ್ವಿಚಕ್ರ ವಾಹನವನ್ನು ವೇಗವಾಗಿ ಚಲಾಯಿಸಿದ್ದೇ ಅಪಘಾತಕ್ಕೆ ಕಾರಣ. ತೀವ್ರ ಗಾಯಗೊಂಡ ವ್ಯಕ್ತಿ ಬದುಕುತ್ತಾರೋ, ಸಾಯುತ್ತಾರೋ ಗೊತ್ತಿಲ್ಲ. ಆದರೆ, ಅವರಿಗೆ ಮೊದಲು ಚಿಕಿತ್ಸೆ ಸಿಗುವುದು ಮುಖ್ಯವಾಗುತ್ತದೆ' ಎಂದು ಪೊಲೀಸ್ ಸಿಬ್ಬಂದಿ ಹೇಳಿದರು.

ನಿಮ್ಮನ್ನೇ ನಂಬಿದ್ದೇನೆ; ಸಂಕಷ್ಟದಿಂದ ಜನರನ್ನು ಪಾರು ಮಾಡಿ: ಬಿಎಸ್‌ವೈ

ಐವರು ಹಿರಿಯ ಸಚಿವರಿಗೆ ಕೊರತೆ ನೀಗಿಸುವ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಮ್ಲಜನಕ, ರೆಮ್‌ಡಿಸಿವಿರ್ ಚುಚ್ಚುಮದ್ದು, ಹಾಸಿಗೆ ಸಮಸ್ಯೆಗಳನ್ನು ಹೋಗಲಾಡಿಸಿ, ಜನರಲ್ಲಿ ವಿಶ್ವಾಸ ಮೂಡಿಸಲು ಮುಂದಾಗಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು, ಪ್ರಮುಖ ಕೊರತೆಗಳ ನಿವಾರಣೆಯ ಹೊಣೆಯನ್ನು ಐವರು ಹಿರಿಯ ಸಚಿವರಿಗೆ ವಹಿಸಲು ನಿರ್ಧರಿಸಿದ್ದಾರೆ.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಯಡಿಯೂರಪ್ಪ ಈ ವಿಷಯ ತಿಳಿಸಿದರು.

'ಎಲ್ಲ ಸಚಿವರು ಬುಧವಾರದಿಂದ (ಮೇ 5) ತಮಗೆ ಉಸ್ತುವಾರಿ ನೀಡಿರುವ ಜಿಲ್ಲೆಗಳಿಗೆ ಹೋಗಿ ಸಮಸ್ಯೆ ಬಗೆಹರಿಸಲು ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಅವರಿಗೆ ಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ' ಎಂದು ಅವರು ತಿಳಿಸಿದರು.

ಆಮ್ಲಜನಕ, ರೆಮ್‌ಡಿಸಿವಿರ್, ಹಾಸಿಗೆ ಸಮಸ್ಯೆಗಳೇ ಹೆಚ್ಚಾಗಿರುವುದರಿಂದ ಅವುಗಳನ್ನು ಸಮರ್ಥವಾಗಿ ನಿಭಾಯಿಸಲು ಮತ್ತು ಆರೋಗ್ಯ ಸಚಿವರ ಮೇಲಿನ ಹೊರೆ ಇಳಿಸಲು ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. 'ಇದರಿಂದ ಕೋವಿಡ್ ನಿರ್ವಹಣೆ ಕಾರ್ಯ ತ್ವರಿತ-ಗೊಳಿಸಲು ಸಾಧ್ಯ. ಈ ಕಾರಣಕ್ಕಾಗಿ ಐದು ಸಚಿವರಿಗೆ ಉಸ್ತುವಾರಿ ನೀಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ನಿಮ್ಮನ್ನೇ ನಂಬಿದ್ದೇನೆ': 'ರಾಜ್ಯದಲ್ಲಿ ಪರಿಸ್ಥಿತಿ ಕೈಮೀರುತ್ತಿದೆ. ನಾನು ಸಂಪೂರ್ಣ ನಿಮ್ಮನ್ನೇ ನಂಬಿದ್ದೇನೆ. ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಿ. ರಾಜ್ಯದ ಜನರನ್ನು ಸಂಕಷ್ಟದಿಂದ ಪಾರು ಮಾಡಬೇಕು ಅಷ್ಟೆ' ಎಂದು ಸಚಿವ ಸಂಪುಟ ಸಭೆಯಲ್ಲಿ ಯಡಿಯೂರಪ್ಪ ಹೇಳಿದರೆಂದು ಮೂಲಗಳು ತಿಳಿಸಿವೆ.

'ಸಾಮಾಜಿಕ ಜಾಲತಾಣಗಳಲ್ಲಿ, ಮಾಧ್ಯಮಗಳಲ್ಲಿ ಏನೆಲ್ಲ ಬರುತ್ತಿದೆ ಎಂಬುದನ್ನು ನೋಡಿದ್ದೀರಿ. ನಿಮಗೆ ಜಿಲ್ಲೆಗಳ ಉಸ್ತುವಾರಿ ನೀಡಿದ್ದೇನೆ. ಎಲ್ಲವನ್ನೂ ಮರೆತು ಕೋವಿಡ್ ನಿರ್ವಹಣೆಯನ್ನು ಸಮರದಂತೆ ಮಾಡಬೇಕು. ನೀವೆಲ್ಲರೂ ಹಿರಿಯರು, ಅನುಭವಿಗಳು ಇದ್ದೀರಿ, ದಕ್ಷತೆಯಿಂದ ಮಾಡಲು ಶಕ್ತರು ಎಂದು ನಂಬಿದ್ದೇನೆ' ಎಂದರು.

'ಚಾಮರಾಜನಗರದ ಘಟನೆಯಿಂದ ತುಂಬಾ ನೋವಾಗಿದೆ. ಜನರ ಆಕ್ರೋಶಕ್ಕೆ ಏನು ಉತ್ತರ ಹೇಳಲಿ? ಮಾಜಿ ಸ್ಪೀಕರ್ ರಮೇಶ್ ಕುಮಾರ್ ಅವರು ನನಗೆ ಪತ್ರ ಬರೆದಿದ್ದಾರೆ. ಈ ಘಟನೆಗೆ ನಾವೆಲ್ಲರೂ ಜವಾಬ್ದಾರರು' ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಮುಖ ಸಚಿವರಿಗೆ ಜವಾಬ್ದಾರಿ

- **ಆಮ್ಲಜನಕ ಉಸ್ತುವಾರಿ:** ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಅವರಿಗೆ ವೈದ್ಯಕೀಯ ಆಮ್ಲಜನಕ ನಿರ್ವಹಣೆಯ ಉಸ್ತುವಾರಿ
- **ರೆಮ್‌ಡಿಸಿವಿರ್, ಪ್ರಮುಖ ಔಷಧಗಳು:** ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರಿಗೆ ರೆಮ್‌ಡಿಸಿವಿರ್ ಮತ್ತು ಪ್ರಮುಖ ಔಷಧ ಸರಬರಾಜು ಜವಾಬ್ದಾರಿ. ಅಂತಿಮ ವರ್ಷದಲ್ಲಿರುವ ವೈದ್ಯಕೀಯ ಮತ್ತು ನರ್ಸಿಂಗ್ ವಿದ್ಯಾರ್ಥಿಗಳನ್ನು ಕೋವಿಡ್ ಕಾರ್ಯದಲ್ಲಿ ತೊಡಗಿಸುವುದು.
- **ಖಾಸಗಿ ಆಸ್ಪತ್ರೆಗಳು ಮತ್ತು ಹಾಸಿಗೆ ಸಮಸ್ಯೆ:** ಗೃಹ ಸಚಿವ ಬಸವರಾಜ ಬೊಮ್ಮಾಯಿ ಮತ್ತು ಕಂದಾಯ ಸಚಿವ ಆರ್. ಅಶೋಕ ಅವರು ಖಾಸಗಿ ಆಸ್ಪತ್ರೆಗಳು ಹಾಗೂ ಸರ್ಕಾರಿ, ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ಕೋವಿಡ್ ರೋಗಿಗಳಿಗೆ ಆಮ್ಲಜನಕ ಸಹಿತ ಹಾಸಿಗೆ ಪಡೆಯುವುದು
- **ಕೋವಿಡ್ ವಾರ್‌ರೂಮ್:** ಅರಣ್ಯ ಸಚಿವ ಅರವಿಂದ ಲಿಂಬಾವಳಿ ಅವರಿಗೆ ಕೋವಿಡ್ ವಾರ್ ರೂಮ್ ಮತ್ತು ಕಾಲ್‌ಸೆಂಟರ್ ಜವಾಬ್ದಾರಿ

ಮುಖ್ಯಮಂತ್ರಿ ಸಲಹೆಗಾರರಾಗಿ ಪ್ರಶಾಂತ್ ಪ್ರಕಾಶ್ ನೇಮಕ

ಬೆಂಗಳೂರು: ಮುಖ್ಯಮಂತ್ರಿಯವರ (ನೀತಿ ನಿರೂಪಣೆ ಮತ್ತು ಕಾರ್ಯತಂತ್ರ) ಸಲಹೆಗಾರರನ್ನಾಗಿ ಪ್ರಶಾಂತ್ ಪ್ರಕಾಶ್ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

'ಇವರು ಕರ್ನಾಟಕ ನವೋದ್ಯಮ ವಿಷನ್ ಗ್ರೂಪ್‌ನ ಅಧ್ಯಕ್ಷರಾಗಿದ್ದಾರೆ. ರಾಜ್ಯದಲ್ಲಿ ನವೋದ್ಯಮಗಳು ಬೇರು ಬಿಟ್ಟು ಹೆಮ್ಮರವಾಗಿ ಬೆಳೆಯಲು ಇವರು ಪ್ರಮುಖ ಕಾರಣಕರ್ತರು. ರಾಜ್ಯ ವಿವಿಧ ರೀತಿಯಲ್ಲಿ ಸಂಕಷ್ಟದಲ್ಲಿ ಸಾಗುತ್ತಿರುವ ಕಾರಣ ದಿಟ್ಟ ದೆಸೆ ನೀಡುವಲ್ಲಿ ಇವರು ಸರ್ಕಾರ ನೆರವಾಗಲಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ದಿವಂಗತ ಕೆ.ಹಿ.ಶಂಕರೇಗೌಡ ಅವರ ಕುಟುಂಬದವರಾಗಿದ್ದು, ಹೊಸಕೋಟೆ ಸಂಸದ ಬಿ.ಎನ್. ಬಚ್ಚೇಗೌಡ ಅವರ ಹತ್ತಿರದ ಸಂಬಂಧಿ ಎಂದು ಮೂಲಗಳು ಹೇಳಿವೆ.



ಮಂತ್ರದ ರಾಜಕಾರಣಿ

ಗೋಕರ್ಣ: ಸಮಿತಿ ರಚಿಸಿ ಆದೇಶ

ಕಾರವಾರ: ಗೋಕರ್ಣದ ಮಹಾಬಲೇಶ್ವರ ದೇವಸ್ಥಾನದ ಆಡಳಿತ ನಿರ್ವಹಣೆಗೆ ಎಂಟು ಸದಸ್ಯರ ಸಮಿತಿಯನ್ನು ರಚಿಸಿ ರಾಜ್ಯ ಸರ್ಕಾರವು ಮಂಗಳವಾರ ಆದೇಶಿಸಿದೆ. ಅಲ್ಲದೇ ಆಡಳಿತವನ್ನು ರಾಮಚಂದ್ರಾಪುರ ಮಠದಿಂದ ತಕ್ಷಣವೇ ವಶಕ್ಕೆ ಪಡೆದುಕೊಳ್ಳುವಂತೆ ಸಮಿತಿಗೆ ಸೂಚಿಸಿದೆ.

ದೇವಸ್ಥಾನದ ಆಡಳಿತ ನಿರ್ವಹಣೆ ವಿವಾದಕ್ಕೆ ಸಂಬಂಧಿಸಿದಂತೆ ಏ.19ರಂದು ಸುಪ್ರೀಂಕೋರ್ಟ್ ಮಧ್ಯಂತರ ಆದೇಶ ನೀಡಿತ್ತು. ಅದರ ಪ್ರಕಾರ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ಅವರ ನೇತೃತ್ವದಲ್ಲಿ ಮೇಲ್ವಿಚಾರಣಾ ಸಮಿತಿ ರಚಿಸಲು ಸೂಚಿಸಿತ್ತು.

ಸಮಿತಿಯಲ್ಲಿ ಇರುವವರು: ಬಿ.ಎನ್.ಶ್ರೀಕೃಷ್ಣ (ಅಧ್ಯಕ್ಷ), ಕುಮಟಾ ಉಪ ವಿಭಾಗಾಧಿಕಾರಿ (ಕಾರ್ಯದರ್ಶಿ), ಉತ್ತರ ಕನ್ನಡ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಸ್ಥಳೀಯ ಉಪಾಧಿವಂತರಾದ ದತ್ತಾತ್ರೇಯ ನಾರಾಯಣ ಭಟ್ಟ ಹಿರೇಗಂಗೆ, ಮಹಾಬಲ ಉಪಾಧ್ಯ, ತಜ್ಞರು ಮತ್ತು ವಿದ್ವಾಂಸರಾದ ಹೊಸ ಹೆರವಟ್ಟದ ಮುರಳೀಧರ ಪ್ರಭು, ಗೋಕರ್ಣದ ವಿದ್ವಾನ್ ಪರಮೇಶ್ವರ ಸುಬ್ರಹ್ಮಣ್ಯ ಭಟ್ಟ ಮಾರ್ಕಾಂಡೆ (ಸದಸ್ಯರು) ಅವರನ್ನು ಸಮಿತಿಗೆ ನೇಮಿಸಲಾಗಿದೆ.

ದೇವಸ್ಥಾನದ ಆಡಳಿತ, ಸ್ಥಿರ, ಚರ ಆಸ್ತಿಗಳನ್ನು ಕೂಡಲೇ ಹಸ್ತಾಂತರಿಸಲು ಆದೇಶದಲ್ಲಿ ಸೂಚಿಸಲಾಗಿದೆ. ಪ್ರಕರಣದ ಇತ್ಯರ್ಥವಾಗುವ ತನಕವೂ ದೇವಸ್ಥಾನದ ಸಂಪೂರ್ಣ ವ್ಯವಹಾರಗಳನ್ನು ಸಮಿತಿಯೇ ನೋಡಿಕೊಳ್ಳಲಿದೆ.

ದೇಗುಲದ ಆಡಳಿತ ಹಸ್ತಾಂತರದ ಆದೇಶ ಪ್ರಕಟವಾದ ದಿನದಿಂದ 15 ದಿನಗಳಲ್ಲಿ ಸಮಿತಿಯನ್ನು ರಚಿಸುವಂತೆ ಸುಪ್ರೀಂಕೋರ್ಟ್ ನೀಡಿದ್ದ ಗಡುವು ಸೋಮವಾರಕ್ಕೆ ಅಂತ್ಯವಾಗಿತ್ತು. ಅದರೂ ಸಮಿತಿ ರಚನೆಯಾಗಿರಲಿಲ್ಲ.

ಬಗ್ಗೆ ಶ್ರೀ ಕ್ಷೇತ್ರ ಗೋಕರ್ಣ ರಕ್ಷಣಾ ಸಮಿತಿಯ ಪದಾಧಿಕಾರಿಗಳು ಮಂಗಳವಾರ ಸಭೆ ನಡೆಸಿ ಅಸಮಾಧಾನ ವ್ಯಕ್ತಪಡಿಸಿದ್ದರು.

ಆಮ್ಲಜನಕ: ಮೇಲ್ವಿಚಾರಣೆಗೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕಿತರ ಚಿಕಿತ್ಸೆಗೆ ನಿತ್ಯ ಆಮ್ಲಜನಕದ ಸಿಲಿಂಡರ್ ಪೂರೈಕೆಗೆ ಎಷ್ಟು ಬೇಡಿಕೆ ಇದೆ, ಪೂರೈಕೆ ಎಷ್ಟಾಗಿದೆ ಮತ್ತು ಪೂರೈಕೆಗೆ ಎಷ್ಟು ಬಾಕಿ ಇದೆ ಎಂಬುದರ ಮೇಲ್ವಿಚಾರಣೆಗಾಗಿ ಪಾಲಿಕೆಯ ಮುಖ್ಯ ಆಯುಕ್ತ ಗೌರವ್ ಗುಪ್ತ ಸಮಿತಿ ರಚಿಸಿದ್ದಾರೆ.

ಆಮ್ಲಜನಕ ಪೂರೈಕೆ ಸಂಬಂಧ ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯವು ಬೆಂಗಳೂರು ಮತ್ತು ಸುತ್ತ-ಮುತ್ತಲಿನ ಪ್ರತಿಯೊಂದು ಆಮ್ಲಜನಕ ಮರುಪೂರಣ ಸಂಸ್ಥೆಗಳಿಗೆ ನೋಡಲ್ ಅಧಿಕಾರಿಗಳನ್ನು ಹಾಗೂ ಶಿಬಿರ ಅಧಿಕಾರಿಯನ್ನು ನೇಮಿಸಬೇಕು. ಆಮ್ಲಜನಕ ಪೂರೈಕೆ ಸಂಸ್ಥೆಯಲ್ಲಿರುವ ದಾಸ್ತಾನು ಮತ್ತು ಪೂರೈಕೆ ಕುರಿತು ನಿತ್ಯ ವರದಿ ಮಾಡಬೇಕು ಎಂದು ಸೂಚನೆ ನೀಡಿತ್ತು. ಹಾಗಾಗಿ ಪಾಲಿಕೆಯ ಎಲ್ಲ ವಲಯ ಆಯುಕ್ತರು ಮತ್ತು ಜಂಟಿ ಆಯುಕ್ತರು ತಮ್ಮ ವಲಯ ವ್ಯಾಪ್ತಿಗೆ ಒಳಪಡುವ ಎಲ್ಲ ಆಸ್ಪತ್ರೆಗಳಿಗೆ ಕಂದಾಯ ಅಥವಾ ಎಂಜಿನಿಯರಿಂಗ್ ವಿಭಾಗದಿಂದ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸುವಂತೆ ಮುಖ್ಯ ಆಯುಕ್ತರು ನಿರ್ದೇಶನ ನೀಡಿದ್ದಾರೆ.

ಆಮ್ಲಜನಕದ ಒಟ್ಟು ದಾಸ್ತಾನು, ಆಸ್ಪತ್ರೆಗಳಿಂದ ಸ್ವೀಕರಿಸಿದ ಬೇಡಿಕೆ ಪ್ರಮಾಣ, ಪೂರೈಸಿದ ಪ್ರಮಾಣ ಮತ್ತು ದಾಸ್ತಾನು ಖಾಲಿಯಾಗಿರುವ ಬಗ್ಗೆ ಪ್ರತಿಯೊಬ್ಬ ನೋಡಲ್ ಅಧಿಕಾರಿ ವರದಿ ನೀಡಬೇಕು ಎಂದು ಸೂಚನೆ ನೀಡಿದ್ದಾರೆ.

'ಸಣ್ಣ ಆಸ್ಪತ್ರೆಗಳು ಆಮ್ಲಜನಕ ಸಿಲಿಂಡರ್ ಮೇಲೆ ಅವಲಂಬಿತವಾಗಿದ್ದಾರೆ. ಈ ಹಿಂದೆ ಒಂದು ಸಿಲಿಂಡರ್ ವಾರಗಟ್ಟಲೆ ಬರುತ್ತಿತ್ತು. ಈಗ ಬೇಡಿಕೆ ಹೆಚ್ಚಿದ್ದರಿಂದ ದಿನಕ್ಕೆ ಮೂರು ಸಿಲಿಂಡರ್ ಬಳಸಬೇಕಿದೆ. ಆಸ್ಪತ್ರೆಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ರೋಗಿಗಳನ್ನು ದಾಖಲಿಸಿಕೊಳ್ಳಬೇಕು. ನಾವು ಪರಿಶೀಲಿಸಿದಾಗ ಕೆಲವು ಆಸ್ಪತ್ರೆಗಳು ಸಾಮರ್ಥ್ಯಕ್ಕಿಂತ ಹೆಚ್ಚು ರೋಗಿಗಳನ್ನು ದಾಖಲಿಸಿಕೊಂಡಿದ್ದವು. ಆಸ್ಪತ್ರೆಗೆ ಎಷ್ಟು ರೋಗಿಗಳನ್ನು ದಾಖಲಿಸಿಕೊಳ್ಳುವ ಸಾಮರ್ಥ್ಯ ಇದೆ ಎಂಬುದನ್ನು ತಿಳಿಯಲು ಬಿಬಿಎಂಪಿ ಸರ್ವೆ ನಡೆಸಲಿದೆ' ಎಂದು ಗೌರವ್ ಗುಪ್ತ ತಿಳಿಸಿದರು.

'ನಗರದಲ್ಲಿರುವ ಆಮ್ಲಜನಕ ಪೂರೈಕೆ ಕಂಪನಿಗಳ ಬಳಿಯೂ ಸಿಬ್ಬಂದಿ ನಿಯೋಜನೆ ಮಾಡಲಿದ್ದೇವೆ. ಪ್ರತಿ ಘಟಕದಲ್ಲಿ ಎಷ್ಟು ಆಮ್ಲಜನಕ ಲಭ್ಯವಿದೆ, ಎಷ್ಟು ಬಿಡುಗಡೆಯಾಗಿದೆ, ಎಲ್ಲಿಗೆ ಪೂರೈಕೆ ಆಗಿದೆ ಎಂಬ ಬಗ್ಗೆ ಅವರು ನಿಗಾ ಇಡಲಿದ್ದಾರೆ' ಎಂದರು.

'ರೆಮ್‌ಡಿಸಿವಿರ್ ತರಿಸಲು ಚೀಟಿ ಬರೆಯದಿರಿ'

'ಸರ್ಕಾರಿ ಆಸ್ಪತ್ರೆಗಳಲ್ಲಿ ರೆಮ್‌ಡಿಸಿವಿರ್ ಔಷಧ ಕೊರತೆ ಇಲ್ಲ. ಖಾಸಗಿ ಆಸ್ಪತ್ರೆಗಳಿಗೆ ಈ ಔಷಧ ಬೇಡಿಕೆಗೆ ಅವಶ್ಯಕತೆಗೆ ಅನುಗುಣವಾಗಿ ಅವರು ಸರ್ಕಾರದ ಪೋರ್ಟಲ್‌ನಲ್ಲಿ ಬೇಡಿಕೆ ವಿವರವನ್ನು ನಿತ್ಯ ಅಪ್‌ಲೋಡ್ ಮಾಡಬೇಕು. ರೋಗಿಗಳ ಬಂಧುಗಳಿಗೆ ಔಷಧ ಚೀಟಿ ಬರೆದುಕೊಟ್ಟು ಅವರಿಂದ ಔಷಧ ತರಿಸುವುದು ಸರಿಯಾದ ವ್ಯವಸ್ಥೆ ಅಲ್ಲ. ಇದನ್ನು ಕೈಬಿಡಬೇಕು' ಎಂದು ಗೌರವ ಗುಪ್ತ ಹೇಳಿದರು.

ಕರ್ಫ್ಯೂ; ನಗರ ತೊರೆಯುತ್ತಿರುವ ವಲಸೆ ಕಾರ್ಮಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ಫ್ಯೂ ಜಾರಿಯಾಗಿದ್ದರಿಂದ ಬದುಕಿನ ಆರ್ಥಿಕ ಚಟುವಟಿಕೆಗಳು ಬಂದ್ ಆಗಿದ್ದು, ಅದನ್ನೇ ನಂಬಿಕೊಂಡಿದ್ದ ಹೊರ ರಾಜ್ಯದ ವಲಸೆ ಕಾರ್ಮಿಕರು ತಂಡೋಪತಂಡವಾಗಿ ತಮ್ಮೂರಿನತ್ತ ಹೊರಟಿದ್ದಾರೆ.

ಮೆಜೆಸ್ಟಿಕ್ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹಾಗೂ ಯಶವಂತಪುರ ರೈಲು ನಿಲ್ದಾಣಗಳಿಗೆ ನಿತ್ಯವೂ ಸಾವಿರಾರು ಕಾರ್ಮಿಕರು ಬರುತ್ತಿದ್ದಾರೆ. ಉತ್ತರ ಪ್ರದೇಶ, ಮಧ್ಯಪ್ರದೇಶ, ಅಸ್ಸಾಂ, ಒಡಿಶಾ ಹಾಗೂ ಇತರೆಡೆ ರೈಲುಗಳು ಸಂಚರಿಸುತ್ತಿವೆ.

ಮಕ್ಕಳು, ವೃದ್ಧರ ಸಮೇತ ವಾಸವಿದ್ದ ಕುಟುಂಬಗಳು, ಗಂಟುಮೂಟೆ ಸಮೇತ ನಿಲ್ದಾಣಕ್ಕೆ ಬರುತ್ತಿದ್ದಾರೆ. ಈ ಹಿಂದೆ ಎಲ್ಲರೂ ಗುಂಪು ಗುಂಪಾಗಿ ನಿಲ್ದಾಣಕ್ಕೆ ಬರುತ್ತಿದ್ದರು. ಇದೀಗ ನಿಲ್ದಾಣದಲ್ಲಿ ಭದ್ರತೆ ಬಿಗಿಗೊಳಿಸಲಾಗಿದ್ದು, ಅಂತರ ಕಾಯ್ದುಕೊಂಡೇ ಪ್ರಯಾಣಿಕರನ್ನು ಒಳಗೆ ಕಳುಹಿಸಲಾಗುತ್ತಿದೆ. ಜೊತೆಗೆ ರೈಲು ಹತ್ತುವ ವೇಳೆಯಲ್ಲೂ ಅಂತರ ಪಾಲಿಸುವಂತೆ ರೈಲ್ವೆ ಪೊಲೀಸರು ಸೂಚನೆ ನೀಡುತ್ತಿದ್ದಾರೆ.

ಬಿಹಾರದ ಕಾರ್ಮಿಕ ಬಿಜು, 'ನಗರದಲ್ಲಿ ಕೆಲಸವೇ ಇಲ್ಲ. ಕೆಲಸವಿಲ್ಲದಿದ್ದರೆ ಊಟವೂ ಕಷ್ಟ. ಹೀಗಾಗಿಯೇ ನಮ್ಮೂರಿಗೆ ಹೊರಟಿದ್ದೇವೆ' ಎಂದರು.



ಕೋವಿಡ್ ಲಸಿಕೆ ಪಡೆಯಲು ನಗರದ ಹಗ್ಗನಹಳ್ಳಿ ಮುಖ್ಯರಸ್ತೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೇರಿರುವ ಜನರು –ಪ್ರಜಾವಾಣಿ ಚಿತ್ರ

ದೂರು ದಾಖಲಿಸಲು ಸಹಾಯವಾಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಡಿಕಲ್ ಸ್ಟೋರ್‌ಗಳಲ್ಲಿ ಮುಖಗವಸು, ಸ್ಯಾನಿಟೈಸರ್ ಮತ್ತು ಆಕ್ಸಿಮೀಟರ್‌ಗಳನ್ನು ನಿಗದಿತ ದರಕ್ಕಿಂತ ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಿರುವವರ ವಿರುದ್ಧ ದೂರು ದಾಖಲಿಸಲು ಕಾನೂನು ಮಾಪನಶಾಸ್ತ್ರ ಇಲಾಖೆಯು ಸಹಾಯವಾಣಿ ತೆರೆದಿದೆ.

ಕಾನೂನು ಮಾಪನಶಾಸ್ತ್ರ ಇಲಾಖೆಯ ದೂರವಾಣಿ ಸಂಖ್ಯೆ 08022253500 ಹಾಗೂ ಬೆಂಗಳೂರಿನ ಇ-ಮಾಪನ ಸಹಾಯವಾಣಿ 08022373500, 8310756754 ಅಥವಾ 6362207873ಗೆ ಕರೆ ಮಾಡಬಹುದು. ಇ-ಮೇಲ್ ವಿಳಾಸ kar.lmdhelpdesk@gmail.com ಮೂಲಕವೂ ದೂರು ದಾಖಲಿಸಬಹುದು ಎಂದು ಇಲಾಖೆಯ ನಿಯಂತ್ರಕರ ಪ್ರಕಟಣೆ ತಿಳಿಸಿದೆ.

ಬಾಡಿಗೆ ಜಾಹೀರಾತು: ವಂಚನೆ

ಬೆಂಗಳೂರು: ಮನೆ ಬಾಡಿಗೆ ನೀಡಲು ಜಾಲತಾಣದಲ್ಲಿ ಜಾಹೀರಾತು ನೀಡಿದ್ದ ನಗರದ ನಿವಾಸಿಯೊಬ್ಬರಿಗೆ ಕರೆ ಮಾಡಿದ್ದ ಸೈಬರ್ ವಂಚಕ, ಕ್ಯೂ ಆರ್ ಕೋಡ್ ಕಳುಹಿಸಿ ₹ 98 ಸಾವಿರ ವಂಚಿಸಿದ್ದಾನೆ.

ಜೆ.ಪಿ.ನಗರ 6ನೇ ಹಂತದ ನಿವಾಸಿ ವಂಚನೆ ಬಗ್ಗೆ ದಕ್ಷಿಣ ವಿಭಾಗ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ. 'ಮನೆ ಬಾಡಿಗೆ ನೀಡಲು ಮ್ಯಾಜಿಕ್ ಬ್ರಿಕ್ಸ್ ಡಾಟ್ ಕಾಮ್ ಜಾಲತಾಣದಲ್ಲಿ ಜಾಹೀರಾತು ನೀಡಿದ್ದೆ. ಅದನ್ನು ನೋಡಿ ಕರೆ ಮಾಡಿದ್ದ ಆರೋಪಿತ, 'ನಿಮ್ಮ ಮನೆಯನ್ನು ಬಾಡಿಗೆ ಪಡೆಯುತ್ತೇನೆ. ಠೇವಣಿ ಹಣವನ್ನು ನಿಮ್ಮ ಬ್ಯಾಂಕ್ ಖಾತೆಗೆ ಕಳುಹಿಸುತ್ತೇನೆ. ನಾನು ಕಳುಹಿಸುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ' ಎಂದಿದ್ದ. ಅತನ ಮಾತು ನಂಬಿ ಸ್ಕ್ಯಾನ್ ಮಾಡಿದ್ದೆ. ಹಂತ ಹಂತವಾಗಿ ನನ್ನ ಬ್ಯಾಂಕ್ ಖಾತೆಯಿಂದ ₹ 98 ಸಾವಿರ ಕಡಿತವಾಗಿದೆ' ಎಂದು ದೂರಿನಲ್ಲಿ ನಿವಾಸಿ ಹೇಳಿದ್ದಾರೆ.

ನಿಧನ ವಾರ್ತೆ


ಲಕ್ಷ್ಮಣ್



ಬೆಂಗಳೂರು: ಹೆಬ್ಬಾಳದ ಚೋಳನಾಯಕನಹಳ್ಳಿಯ ನಿವಾಸಿ ಲಕ್ಷ್ಮಣ್ (46) ಅನಾರೋಗ್ಯದಿಂದ ಮಂಗಳವಾರ ಬೆಳಿಗ್ಗೆ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಚೋಳನಾಯಕನಹಳ್ಳಿ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ಆರ್. ಮಂಜುನಾಥ್



ಬೆಂಗಳೂರು: ನಗರದ ಕೆಲ ಬ್ಯಾಂಕ್‌ಗಳಲ್ಲಿ ಮಾನ್ಯತೆ ಪಡೆದ ಮೌಲ್ಯಮಾಪಕರಾಗಿ ಕೆಲಸ ಮಾಡುತ್ತಿದ್ದ ಬಿ.ಆರ್. ಮಂಜುನಾಥ್ (52) ಅವರು ಇತ್ತೀಚೆಗೆ ನಿಧನರಾದರು.

ಅವರಿಗೆ ಇಬ್ಬರು ಮಕ್ಕಳಿದ್ದಾರೆ.

ಏಕಾಂಬರಂ



ಬೆಂಗಳೂರು: ನಗರದ ಕಂಟೋನ್ಮೆಂಟ್ ಪ್ರದೇಶದ ಪತ್ರಿಕಾ ವಿತರಕರಾದ್ದ ಏಕಾಂಬರಂ (78) ನಿಧನ ಹೊಂದಿದರು.

ಅವರು 52 ವರ್ಷಗಳಿಂದ ಪತ್ರಿಕಾ ವಿತರಕರಾಗಿದ್ದರು.

ಅಪಘಾತದಲ್ಲಿ ಗಾಯಗೊಂಡಿದ್ದ ಎ.ಸಿ ಸಾವು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ವಾಯುವಿಹಾರ ನಡೆಸುತ್ತಿದ್ದ ವೇಳೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದು ಗಂಭೀರವಾಗಿ ಗಾಯಗೊಂಡಿದ್ದ ಬೆಂಗಳೂರು ಉಪವಿಭಾಗಾಧಿಕಾರಿ ವಿ.ಪ್ರಸನ್ನ (52) ಚಿಕಿತ್ಸೆ ಫಲಿಸದೇ ಬೆಂಗಳೂರಿನ ಆಸ್ಟರ್ ಸಿಎಂಐ ಆಸ್ಪತ್ರೆಯಲ್ಲಿ ಮಂಗಳವಾರ ಮೃತಪಟ್ಟಿದ್ದಾರೆ.



ವಿ.ಪ್ರಸನ್ನ

ನಗರದ ತುರುವನೂರು ರಸ್ತೆಯಲ್ಲಿ ಸೋಮವಾರ ನಸುಕಿನಲ್ಲಿ ವಾಯುವಿಹಾರ ನಡೆಸುತ್ತಿದ್ದಾಗ ಈ ಅಪಘಾತ ಸಂಭವಿಸಿತ್ತು. ತಲೆ ಬಲವಾದ ಪೆಟ್ಟು ಬಿದ್ದ ಪರಿಣಾಮ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕರೆದೊಯ್ಯಲಾಗಿತ್ತು.

ಎಂಎಸ್ಸಿ ಪದವೀಧರ: ಚಿತ್ರದುರ್ಗ ತಾಲ್ಲೂಕಿನ ಕಡಬನಕಟ್ಟೆ ಗ್ರಾಮದ ಪ್ರಸನ್ನ ಅವರು 1970ರ ಜ.14ರಂದು ಜನಿಸಿದ್ದರು. ರಸಾಯನ ವಿಜ್ಞಾನದಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎಸ್ಸಿ ಪದವಿಯನ್ನು ಚಿತ್ರದುರ್ಗದ ಪದಕದೊಂದಿಗೆ ಪೂರ್ಣಗೊಳಿಸಿದ್ದರು. ಬೆಂಗಳೂರಿನ ನೆಲಮಂಗಲದಲ್ಲಿ ಉಪತಹಶೀಲ್ದಾರರಾಗಿ ಸೇವೆ ಸಲ್ಲಿಸಿದ್ದರು. ಕರ್ನಾಟಕ ಲೋಕಸೇವಾ ಆಯೋಗದ ಪರೀಕ್ಷೆ ಬರೆದ ಅವರು, ಆಡಳಿತಾತ್ಮಕ ಸೇವೆಗೆ ಸೇರಿದರು. ಸೇವೆಯ ಬಹುದಿನಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಕಳೆದಿದ್ದರು.

ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ 2006ರ ಏ.15ರಂದು ತಹಶೀಲ್ದಾರ್ ಆಗಿ ಸೇವೆ ಆರಂಭಿಸಿದರು. ಮಧುಗಿರಿ ತಾಲ್ಲೂಕು, ಉಡುಪಿ ಹಾಗೂ ಮಂಗಳೂರು ಜಿಲ್ಲೆಯಲ್ಲಿ ಕೆಲಸ ಮಾಡಿದ್ದಾರೆ. 2019ರ ಸೆಪ್ಟೆಂಬರ್‌ನಲ್ಲಿ ಚಿತ್ರದುರ್ಗ ಉಪವಿಭಾಗಾಧಿಕಾರಿಯಾಗಿದ್ದರು. ಗ್ರಾಮ ಪಂಚಾಯಿತಿ ಚುನಾವಣೆ ಸಂದರ್ಭದಲ್ಲಿ ಸಾಗರಕ್ಕೆ ವರ್ಗಾವಣೆಯಾಗಿ, ಮತ್ತೆ ಮರಳಿದ್ದರು.

ಅಂಗಾಂಗ ದಾನ: 'ಪ್ರಸನ್ನ ಅವರ ಅಂಗಾಂಗ ದಾನ ಮಾಡುವ ಇಚ್ಛೆ ಹೊಂದಿದ್ದರು. ಈ ಬಗ್ಗೆ ಹಲವು ಬಾರಿ ಪತ್ನಿಯೊಂದಿಗೆ ಮಾತನಾಡಿದ್ದರು. ಅವರ ಇಚ್ಛೆಯಂತೆ ಅಂಗಾಂಗ ದಾನ ಮಾಡಲಾಗಿದೆ' ಎಂದು ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ಮಾಹಿತಿ ನೀಡಿದರು.

ಗೌರವ: ಪೊಲೀಸ್ ಗೌರವದೊಂದಿಗೆ ಅಂತ್ಯಕ್ರಿಯೆ ನಡೆಸುವಂತೆ ಸರ್ಕಾರ ಸೂಚನೆ ನೀಡಿದೆ. ಅಂತ್ಯಕ್ರಿಯೆ ಸ್ಥಳ ಇನ್ನೂ ನಿಗದಿಯಾಗಿಲ್ಲ.

ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘ ಮನವಿ

'ಗ್ರಾಹಕರಿಗೆ ಪಾರ್ಸೆಲ್ ಖರೀದಿಗೆ ಅವಕಾಶ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೋಟೆಲ್‌ಗಳಲ್ಲಿ ಪಾರ್ಸೆಲ್ ಸೇವೆಗೆ ಅವಕಾಶ ಇದ್ದರೂ ಖರೀದಿಗೆ ಬರಲು ಗ್ರಾಹಕರಿಗೆ ಅನುಮತಿ ಇಲ್ಲ. ಬೆಳಿಗ್ಗೆ 10ರ ನಂತರವೂ ಗ್ರಾಹಕರು ಹೋಟೆಲ್‌ಗಳಿಗೆ ಬರಲು ಅವಕಾಶ ಕಲ್ಪಿಸಬೇಕು' ಎಂದು ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘ (ಕೆಎಸ್‌ಎಚ್‌ಎ) ಮನವಿ ಮಾಡಿದೆ.

ಈ ಸಂಬಂಧ ಸಂಘದ ನಿಯೋಗ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್ ಅವರನ್ನು ಮಂಗಳವಾರ ಭೇಟಿಯಾಗಿ ಮನವಿ ಸಲ್ಲಿಸಿದೆ.

'ಕರ್ಫ್ಯೂ ವೇಳೆ ಅಗತ್ಯ ಸೇವೆಯಡಿ ಹೋಟೆಲ್‌ಗಳಲ್ಲಿ ಪಾರ್ಸೆಲ್ ತೆಗೆದುಕೊಳ್ಳಲು ಸರ್ಕಾರವೇ ಅನುಮತಿ ನೀಡಿದೆ. ಆದರೆ, ಬೆಳಿಗ್ಗೆ 10 ಗಂಟೆಯ ಬಳಿಕ ಸಾರ್ವಜನಿಕರ ಸಂಚಾರಕ್ಕೆ ಅನುಮತಿ ಇಲ್ಲ. ಊಟ ತರಲೆಂದು ಬರುವವರನ್ನು ಪೊಲೀಸರು ತಡೆಯುತ್ತಾರೆ. ಈ ಪರಿಸ್ಥಿತಿಯಲ್ಲಿ ಹೋಟೆಲ್‌ಗಳಲ್ಲಿ ಪಾರ್ಸೆಲ್‌ಗೆ ಅವಕಾಶ ನೀಡಿ ಏನು ಪ್ರಯೋಜನ?' ಎಂದು ಸಂಘದ ಅಧ್ಯಕ್ಷ ಚಂದ್ರಶೇಖರ ಹೆಬ್ಬಾರ್ ಪ್ರಶ್ನಿಸಿದರು.



ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘದ ಪದಾಧಿಕಾರಿಗಳು ಎನ್.ಮಂಜುನಾಥ ಪ್ರಸಾದ್ ಅವರಿಗೆ ಮನವಿ ಸಲ್ಲಿಸಿದರು

'ಕರ್ಫ್ಯೂ ವೇಳೆ ಆಹಾರ ಪೂರೈಸುವ ಸಂಸ್ಥೆಗಳಿಗೆ ಮಾತ್ರ ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಅವರಿಂದಲೇ ಆಹಾರ ತರಿಸಿಕೊಳ್ಳಿ' ಎಂದು ಪೊಲೀಸರು ಹಸಿದ ಗ್ರಾಹಕರನ್ನು ಗದರುತ್ತಾರೆ. ಎಲ್ಲ ಹೋಟೆಲ್‌ಗಳು ಆಹಾರ ಪೂರೈಸುವ ಸಂಸ್ಥೆಗಳೊಂದಿಗೆ ಸಂಯೋಜನೆಯಾಗಿಲ್ಲ. ಗ್ರಾಮೀಣ ಭಾಗದಲ್ಲಿ ಆಹಾರ ಪೂರೈಕೆ ಜಾಲವೂ ಇಲ್ಲ' ಎಂದು ವಿವರಿಸಿದರು.

'ನಿರ್ಮಾಣ ಕೆಲಸಗಳಲ್ಲಿ ತೊಡಗಿರುವ ಕಾರ್ಮಿಕರಿಗೆ ಈಗ ಆಹಾರ ಸಿಗದಂತಾಗಿದೆ. ಅವರಿಗೂ ಆಹಾರದ ಸಮಸ್ಯೆಯಾಗುತ್ತಿದೆ. ಬಡವರಿಗೆ ಆನ್‌ಲೈನ್ ಮೂಲಕ ಆಹಾರ ತರಿಸಿಕೊಳ್ಳುವುದು ಕಷ್ಟಕರ. ಹಾಗಾಗಿ, ಆಹಾರ ಪಾರ್ಸೆಲ್ ಖರೀದಿಗೆ ಬರುವವರಿಗೆ ಕರ್ಫ್ಯೂ ವೇಳೆ ಅವಕಾಶ ನೀಡಬೇಕು. ಅವರಿಗೆ ಯಾವುದೇ ತಡೆ ಇರಬಾರದು' ಎಂದೂ ಮನವಿ ಮಾಡಿದರು.

ಸೋಂಕಿತರ ಸಂಬಂಧಿಕರ ಹೆಸರಿನಲ್ಲಿ ಜಯನಗರ ಪೊಲೀಸರ ಕಾರ್ಯಾಚರಣೆ • ಪ್ರಕರಣದ ತನಿಖೆ ಸಿಸಿಬಿಗೆ

ಹಾಸಿಗೆ ಬ್ಲಾಕ್ ದಂಧೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೀವ್ರ ಲಕ್ಷಣಗಳಿಲ್ಲದ ಕೊರೊನಾ ಸೋಂಕಿತರ ಹೆಸರಿನಲ್ಲಿ ಆಸ್ಪತ್ರೆಗಳಲ್ಲಿ ಹಾಸಿಗೆ ಬ್ಲಾಕ್ ಮಾಡಿಸಿ, ಅದೇ ಹಾಸಿಗೆಯನ್ನೇ ಬೇರೊಬ್ಬರಿಗೆ ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದ ಜಾಲವನ್ನು ಜಯನಗರ ಪೊಲೀಸರು ಭೇದಿಸಿದ್ದು, ಜಾಲದಲ್ಲಿದ್ದ ಮಹಿಳೆ ಸೇರಿ ಇಬ್ಬರನ್ನು ಬಂಧಿಸಿದ್ದಾರೆ.

'ಬೇಗೂರು ನಿವಾಸಿ ನೇತ್ರಾವತಿ (42) ಹಾಗೂ ರೋಹಿತ್‌ಕುಮಾರ್ (32) ಬಂಧಿತರು. ಅವರ ಜೊತೆಗಿದ್ದ ಕೆಲವರು ತಲೆಮರೆಸಿಕೊಂಡಿದ್ದಾರೆ. ಅವರೆಲ್ಲರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಮಿಷನರ್ ಸೂಚನೆಯಂತೆ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ನೇತ್ರಾವತಿ



ರೋಹಿತ್ ಕುಮಾರ್

'ಸಾಮಾಜಿಕ ಕಾರ್ಯಕರ್ತೆ ಎಂದು ಹೇಳಿಕೊಳ್ಳುತ್ತಿದ್ದ ನೇತ್ರಾವತಿ, ನೆರೆಮನೆಯ ರೋಹಿತ್ ಕುಮಾರ್ ಹಾಗೂ ಹಲವರ ಜೊತೆ ಸೇರಿ ಈ ದಂಧೆ ನಡೆಸುತ್ತಿದ್ದಳು. ಕೊರೊನಾ ಸೋಂಕಿತರ ನೆರವಿಗಾಗಿ ವಾಟ್ಸ್‌ಆ್ಯಪ್ ಗ್ರೂಪ್ ಮಾಡಿದ್ದ ಆರೋಪಿ, ರೋಗಿಗಳನ್ನು ಒಂದೆಡೆ ಸೇರಿಸಿ ವೈಯಕ್ತಿಕ ಮಾಹಿತಿಗಳನ್ನೆಲ್ಲ ಪಡೆದು ಕೃತ್ಯಕ್ಕೆ ಬಳಸಿಕೊಂಡಿದ್ದಳು'

'ಆರೋಪಿ ನೇತ್ರಾವತಿ, ಜಯನಗರದ ಎರಡು ಖಾಸಗಿ ಆಸ್ಪತ್ರೆಯಲ್ಲಿ ತಲಾ ₹ 50 ಸಾವಿರಕ್ಕೆ ಎರಡು ಹಾಸಿಗೆಗಳನ್ನು ಮಾರಾಟ ಮಾಡಿದ್ದಳು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಸೋಂಕಿತರ ಸಂಬಂಧಿಕರ ವೇಷದಲ್ಲಿ ಜಯನಗರ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ' ಎಂದೂ ಅಧಿಕಾರಿ ತಿಳಿಸಿದರು.

ಬ್ಯಾಂಕ್ ಖಾತೆಗೆ ಹಣ ಜಮೆ: 'ಖಾಸಗಿ ಆಸ್ಪತ್ರೆಯಲ್ಲಿ ಬಿಬಿಎಂಪಿ ಕೋಟಾದಡಿ ಹಾಸಿಗೆ ಕೊಡಿಸುವುದಾಗಿ ಸೋಂಕಿತರಿಗೆ ಆರೋಪಿಗಳು ಭರವಸೆ ನೀಡುತ್ತಿದ್ದರು. ಅಷ್ಟು ಸುಲಭವಾಗಿ ಹಾಸಿಗೆ ಸಿಗುವುದಿಲ್ಲವೆಂದು ಸೋಂಕಿತರನ್ನು ಹಾಗೂ ಅವರ ಸಂಬಂಧಿಕರನ್ನು ಹೆದರಿಸುತ್ತಿದ್ದ ಆರೋಪಿಗಳು, 'ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡರೆ ಹಾಸಿಗೆ ಸಿಗುವುದು ಕಷ್ಟ. ಹೀಗಾಗಿ, ನಮ್ಮ ಬಳಿಯೇ ಕೆಲ ಹಾಸಿಗೆಗಳು ಖಾಲಿ ಇವೆ. ಹಣ ಕೊಟ್ಟರೆ ಹಾಸಿಗೆ ಕೊಡಿಸಲಾಗುವುದು' ಎನ್ನುತ್ತಿದ್ದರು' ಎಂಬುದಾಗಿ ಪೊಲೀಸ್ ಅಧಿಕಾರಿ ಹೇಳಿದರು.

'ಜೀವ ಉಳಿಸಿಕೊಳ್ಳುವುದಕ್ಕಾಗಿ ಸೋಂಕಿತರು, ಆರೋಪಿಗಳು ಕೇಳಿದಷ್ಟು ಹಣವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡುತ್ತಿದ್ದರು. ನಂತರ ಆರೋಪಿಗಳು, ಸೋಂಕಿತರಿಗೆ ಹಾಸಿಗೆ ವ್ಯವಸ್ಥೆ ಮಾಡುತ್ತಿದ್ದರು. ಇಬ್ಬರೂ ಆರೋಪಿಗಳನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದರೆ ಮತ್ತಷ್ಟು ಮಾಹಿತಿ ಸಿಗಬಹುದು' ಎಂದೂ ತಿಳಿಸಿದರು.

'ಮದರಸಾಕ್ಕೆ ನೇಮಕ ಮಾಡ್ಕೊಂಡಿದ್ದೀರಾ?'

ಬೆಂಗಳೂರು: ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಸತೀಶ ರೆಡ್ಡಿ, ಎಲ್.ಎ.ರವಿ ಸುಬ್ರಹ್ಮಣ್ಯ, ಉದಯ್ ಗರುಡಾಚಾರ್ ಅವರು ಬಿಬಿಎಂಪಿಯ ದಕ್ಷಿಣ ವಲಯದ ವಾರ್ ರೂಂ ಪರಿಶೀಲನೆ ನಡೆಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಈ ವಿಡಿಯೊದಲ್ಲಿ ಸಂಸದ ತೇಜಸ್ವಿ ಸೂರ್ಯ ಅವರು ವಾರ್ ರೂಂ ಸಿಬ್ಬಂದಿಯ ಹೆಸರನ್ನು ಒಂದೊಂದಾಗಿ ಓದಿದ್ದಾರೆ (ಎಲ್ಲ ಮುಸ್ಲಿಂ ಹೆಸರುಗಳು) 'ಇವರನ್ನು ನೇಮಿಸಿದ್ದು ಯಾರು' ಎಂದು ಪ್ರಶ್ನಿಸಿದ್ದಾರೆ.

'ನಾವು ಅರ್ಜಿ ಕರೆದಿದ್ದೆವು. ಅರ್ಜಿ ಹಾಕಿದವರನ್ನು ಆಯ್ಕೆ ಮಾಡಿದ್ದೇವೆ' ಎಂದು ವಲಯ ಆಯುಕ್ತರಾದ ತುಳಸಿ ಮದ್ದಿನೇನಿ ಸಮಜಾಯಿಷಿ ನೀಡಲು ಯತ್ನಿಸಿದಾಗ ಶಾಸಕರು ಮಧ್ಯಪ್ರವೇಶಿಸಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಎಲ್.ಎ.ರವಿ ಸುಬ್ರಹ್ಮಣ್ಯ, 'ಇವರನ್ನೆಲ್ಲ ಮದರಸಾಕ್ಕೆ ನೇಮಕ ಮಾಡಿಕೊಂಡಿದ್ದೀರಾ ಅಥವಾ ಕಾರ್ಪೊರೇಷನ್‌ಗಾ. ನೀವು ಮಾಡುವ ಅವ್ಯವಹಾರಕ್ಕೆ ಬೀದಿ ಬೀದಿಲಿ ಜನ ನಮಗೆ ಉಗಿಯುತ್ತಿದ್ದಾರೆ' ಎಂದು ಏರುಧ್ವನಿಯಲ್ಲಿ ಅಧಿಕಾರಿಗಳನ್ನು ಪ್ರಶ್ನಿಸಿದ್ದಾರೆ.

'ನಾವು ಸಾಕಷ್ಟು ಅಧ್ಯಯನ ಮಾಡಿ ಸಾಕಷ್ಟು ಮಾಹಿತಿ ಕಲೆ ಹಾಕಿಯೇ ಬಂದಿದ್ದೇವೆ. ಯಾವ ಯಾವ ಹಾಸಿಗೆಗೆ ಎಷ್ಟು ದುಡ್ಡು ತೆಗೆದುಕೊಂಡಿದ್ದಾರೆ, ಯಾವ ಯಾವ ಹಾಸಿಗೆ ಯಾವ ರೀತಿ ಬ್ಲಾಕ್ ಮಾಡಿದ್ದಾರೆ ಎಂಬ ಸಂಪೂರ್ಣ ವಿವರ ಪಡೆದುಕೊಂಡೇ ಬಂದಿದ್ದೇವೆ. ಇದಕ್ಕೆಲ್ಲ ಸಾಕ್ಷ್ಯಗಳೂ ಇವೆ' ಎಂದರು.

ಸತೀಶ ರೆಡ್ಡಿ, 'ನೀವು ಏನು ಭಾವಿಸಿದ್ದೀರಿ. ದಾರಿಯಲ್ಲಿ ಹೋಗುವವರನ್ನು ಕೂರಿಸಿ ಹಾಸಿಗೆ ಬ್ಲಾಕ್ ಮಾಡುವ ದಂಧೆ ಮಾಡುತ್ತಿದ್ದೀರಿ. ಉದ್ದೇಶಪೂರ್ವಕವಾಗಿ ಈ ರೀತಿ ಮಾಡಿದ್ದೀರಿ. ನಾವೆಲ್ಲ ಬಿಜೆಪಿ ಶಾಸಕರೇ. ಇಷ್ಟು ದಿನ ತಾಳ್ಮೆಯಿಂದ ಕಾದೆವು. ಇನ್ನೆಷ್ಟು ದಿನ ತಾಳ್ಮೆ ವಹಿಸಲು ಸಾಧ್ಯ. ಬೆಂಗಳೂರಿನವರೆಲ್ಲ ಸತ್ತು ಹೋದರೆ ಜನ ಶಾಪ ಹಾಕುವುದು ನಮಗೇ. ಇವೆಲ್ಲವನ್ನು ಕಂಡೂ ಸುಮ್ಮನಿರಬೇಕಾ' ಎಂದು ಪ್ರಶ್ನಿಸಿದ್ದಾರೆ.

ತೇಜಸ್ವಿ ಸೂರ್ಯ, 'ಇಲ್ಲಿ ಯಾರಾದರೂ ಎಂಬಿಬಿಎಸ್ ರಿಪೋರ್ಟಿಂಗ್ ಅಧಿಕಾರಿಗಳು ಇದ್ದಾರೆಯೇ. ಹೋಂ ಕ್ವಾರಂಟೈನ್ ಬಗ್ಗೆ ಮಾಹಿತಿ ನೀಡಲು ಎಂಬಿಬಿಎಂಎಸ್ ವೈದ್ಯರು ಇರಬೇಕಾ, ಬಿಡಿಎಸ್, ಬಿಎಎಂಎಸ್, ಯುನಾನಿ ವೈದ್ಯರು ಇರಬೇಕಾ' ಎಂದು ಪ್ರಶ್ನಿಸಿದ್ದಾರೆ.

'ತಪ್ಪಿತಸ್ಥರ ವಿರುದ್ಧ ಕ್ರಮ'

ಬೆಂಗಳೂರು: 'ಹಾಸಿಗೆ ಬ್ಲಾಕಿಂಗ್' ಅವ್ಯವಹಾರವನ್ನು ಸಂಸದ ತೇಜಸ್ವಿ ಸೂರ್ಯ ಬಯಲಿಗೆಳೆದಿದ್ದಾರೆ. ಅವರನ್ನು ಕರೆಸಿ ಮಾಹಿತಿ ಪಡೆಯುತ್ತೇನೆ. ಮುಖ್ಯ ಕಾರ್ಯದರ್ಶಿಯವರ ಜತೆ ಚರ್ಚಿಸಿ ಅಕ್ರಮದಲ್ಲಿ ಭಾಗಿಯಾದವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ರೆಮ್‌ಡಿಸಿವಿರ್, ಹಾಸಿಗೆ ಹಂಚಿಕೆ, ಅವ್ಯವಹಾರ, ಅಕ್ರಮ ನಡೆಯುತ್ತಿರುವುದು ಗಮನಕ್ಕೆ ಬಂದಿದೆ. ಅಕ್ರಮ ಮಾಡಿದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಮತ್ತು ಅಧಿಕಾರಿಗಳನ್ನು ಅಮಾನತು ಮಾಡಲಾಗುವುದು ಎಂದು ಅವರು ಹೇಳಿದರು.

ದಕ್ಷಿಣ ವಲಯ ವಾರ್ ರೂಂ 17 ಸಿಬ್ಬಂದಿ ವಜಾ

ಬೆಂಗಳೂರು: ಕೋವಿಡ್ ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಹಂಚಿಕೆ ಮಾಡುವುದರ ಹಿಂದೆ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ಆರೋಪ ಕೇಳಿಬಂದ ಬಳಿಕ ಬಿಬಿಎಂಪಿಯು, ದಕ್ಷಿಣ ವಲಯದ ವಾರ್ ರೂಂನಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ 17 ಸಿಬ್ಬಂದಿಯನ್ನು ವಜಾ ಮಾಡಿದೆ.

'ವಾರ್ ರೂಂನಲ್ಲಿ ಡೇಟಾ ಎಂಟ್ರಿ ಕೆಲಸ ಮಾಡುತ್ತಿದ್ದ 17 ಸಿಬ್ಬಂದಿ ಬಗ್ಗೆ ಸಂಸದರು ಹಾಗೂ ಶಾಸಕರು ಆರೋಪ ಮಾಡಿದ್ದಾರೆ. ಅವರನ್ನೆಲ್ಲ ಕೆಲಸದಿಂದ ತೆಗೆದಿದ್ದೇವೆ' ಎಂದು ದಕ್ಷಿಣ ವಲಯ ಆಯುಕ್ತರಾದ ತುಳಸಿ ಮದ್ದಿನೇನಿ 'ಪ್ರಜಾವಾಣಿ'ಗೆ ತಿಳಿಸಿದರು.

'ಸಂಸದರು ಮತ್ತು ಶಾಸಕರು ಮಾಡಿರುವ ಆರೋಪಗಳು ಕೇವಲ ದಕ್ಷಿಣ ವಲಯಕ್ಕೆ ಸಂಬಂಧಿಸಿದ್ದಲ್ಲ. ಅವರು ಕೊಟ್ಟಿರುವ ದಾಖಲೆಗಳಲ್ಲಿ ದಕ್ಷಿಣ ವಲಯಕ್ಕೆ ಸಂಬಂಧಿಸಿದ್ದು ಎರಡು ಮೂರು ಮಾತ್ರ. ಆರೋಪದ ಆ ಬಗ್ಗೆ ದಾಖಲೆ ಒದಗಿಸಿದರೆ ಮುಖ್ಯ ಆಯುಕ್ತರು ತನಿಖೆ ನಡೆಸಲಿದ್ದಾರೆ. ಆರೋಪಗಳು ತನಿಖೆಯಲ್ಲಿ ಸಾಬೀತಾದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ' ಎಂದರು.

'ಹಾಸಿಗೆ ಕಾಯ್ದಿರಿಸುವ ಕುರಿತು ತನಿಖೆ ನಡೆಸುವ ಹೊಣೆಯನ್ನು ಸರ್ಕಾರ ಪೊಲೀಸರಿಗೆ ವಹಿಸಿದೆ. ಅವರೇ ತನಿಖೆ ನಡೆಸಲಿದ್ದಾರೆ. ಹಾಸಿಗೆ ಕಾಯ್ದಿರಿಸಿದ್ದು ಯಾರು, ಆ ಸಂದರ್ಭದಲ್ಲಿ ತಂತ್ರಾಂಶದ ಲಾಗಿನ್ ಐಡಿ ಯಾರ ನಿಯಂತ್ರಣದಲ್ಲಿತ್ತು, ಲಾಗಿನ್ ಆಗಿದ್ದವರು ಯಾರು, ರೋಗಿಗಳ ಕಡೆಯವರು ಯಾರಿಗೆ ದುಡ್ಡು ಕೊಟ್ಟಿದ್ದಾರೆ, ತೆಗೊಂಡಿದ್ದು ಯಾರು ಎಂಬ ಆಯಾಮದಲ್ಲೂ ತನಿಖೆ ಆಗಬೇಕಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ವಾರ್ ರೂಮ್ ಸಿಬ್ಬಂದಿಯೂ ಭಾಗಿ

'ಕೊರೊನಾ ವಾರ್ ರೂಮ್ ಹಾಗೂ ಖಾಸಗಿ ಆಸ್ಪತ್ರೆ ಸಿಬ್ಬಂದಿ ಜೊತೆ ಶಾಮೀಲಾಗಿ ಆರೋಪಿಗಳು ಕೃತ್ಯ ಎಸಗುತ್ತಿದ್ದರು. ಆರೋಪಿಗಳ ಜೊತೆ ಸಂಪರ್ಕವಿಟ್ಟುಕೊಂಡಿದ್ದ ಕೆಲವರು, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ತಲೆಮರೆಸಿಕೊಂಡಿದ್ದಾರೆ' ಎಂದೂ ಪೊಲೀಸ್ ಅಧಿಕಾರಿ ಮಾಹಿತಿ ನೀಡಿದರು.

'ಪ್ರಕರಣದ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗ ಮಾಹಿತಿ ನೀಡಲಾಗಿದೆ. ವಾರ್ ರೂಮ್‌ನಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಮಾಹಿತಿಯನ್ನೂ ಕೋರಲಾಗಿದೆ. ಇದೀಗ ಪ್ರಕರಣ ಸಿಸಿಬಿಗೆ ವರ್ಗವಾಗಿದ್ದರಿಂದ ಎಲ್ಲ ದಾಖಲೆಗಳನ್ನೂ ಸಿಸಿಬಿ ಅಧಿಕಾರಿಗಳಿಗೆ ಹಸ್ತಾಂತರ ಮಾಡಲಾಗುವುದು' ಎಂದೂ ಅಧಿಕಾರಿ ಹೇಳಿದರು.

ನ್ಯಾಯಾಂಗ ತನಿಖೆಗೆ ಆಗ್ರಹ

ಬೆಂಗಳೂರು: 'ಬಿಬಿಎಂಪಿ ವಾರ್‌ರೂಂಗಳು ಹಾಸಿಗೆ ಬ್ಲಾಕ್ ದಂಧೆಯಲ್ಲಿ ತೊಡಗಿದ್ದು, ಸಾವಿರಾರು ಹಾಸಿಗೆಗಳನ್ನು ಅಕ್ರಮವಾಗಿ ಕಾಯ್ದಿರಿಸಿರುವ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕು' ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮಿತಿ ಆಗ್ರಹಿಸಿದೆ.

'ಸತ್ಯವನ್ನು ಬಯಲಿಗೆಳೆಯಲು ನ್ಯಾಯಾಂಗ ತನಿಖೆಯೊಂದೇ ಮಾರ್ಗ. ಆಸ್ಪತ್ರೆಗಳಲ್ಲಿ ದಾಖಲಾದ ಮತ್ತು ಬಿಡುಗಡೆಯಾದ ರೋಗಿಗಳ ಪಟ್ಟಿಯ ಜೊತೆ ಆಸ್ಪತ್ರೆಗಳಲ್ಲಿ ಲಭ್ಯವಿರುವ ಹಾಸಿಗೆಗಳ ವಿವರಗಳನ್ನು ನೀಡಬೇಕು' ಎಂದು ಸಂಘಟನೆಯ ರಾಜ್ಯ ಸಮಿತಿ ಅಧ್ಯಕ್ಷೆ ದೇವಿ ಒತ್ತಾಯಿಸಿದರು.

ಸರ್ಕಾರಿ ಆಸ್ಪತ್ರೆಗಳಿಗೆ ಕೆಎಂಎಫ್‌ನಿಂದ 200 ಹಾಸಿಗೆ

ಬೆಂಗಳೂರು: ಕೆಎಂಎಫ್ ವತಿಯಿಂದ ₹1 ಕೋಟಿ ವೆಚ್ಚದಲ್ಲಿ 200 ಆಮ್ಲಜನಕ ಸಹಿತ ಹಾಸಿಗೆಗಳನ್ನು ಪೂರೈಕೆ ಮಾಡಲು ತೀರ್ಮಾನಿಸಲಾಗಿದೆ ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ತಿಳಿಸಿದ್ದಾರೆ.

ಬೆಂಗಳೂರಿನ ಕೆಎಂಎಫ್ ಪ್ರಧಾನ ಕಚೇರಿಯಲ್ಲಿ ಮಂಗಳವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

ರಾಜ್ಯದಲ್ಲಿ ಕೋವಿಡ್ ಸೋಂಕು ವ್ಯಾಪಕವಾಗುತ್ತಿದೆ. ಸೋಂಕಿತರಿಗೆ ನೆರವಿಗೆ ಧಾವಿಸಲು 200 ಆಮ್ಲಜನಕ ಸಹಿತ ಹಾಸಿಗೆಗಳನ್ನು ನೀಡಲಾಗುವುದು. ಇದಕ್ಕಾಗಿ ಹಾಸಿಗೆ, ಸಿಲಿಂಡರ್ ಮತ್ತು ಆಮ್ಲಜನಕ ಉತ್ಪಾದನೆಗೆ ಕಂಪನಿಯೊಂದಕ್ಕೆ ಟೆಂಡರ್ ನೀಡಲಾಗುವುದು. ಇವುಗಳನ್ನು ಸರ್ಕಾರಿ ಆಸ್ಪತ್ರೆಗೆ ನೀಡಲಾಗುವುದು. ಬಡ ರೋಗಿಗಳಿಗೆ ಉಚಿತವಾಗಿ ಸೇವೆ ನೀಡಬೇಕು. ಒಂದು ತಿಂಗಳಲ್ಲಿ ಪೂರೈಕೆ ಮಾಡಲಾಗುವುದು ಎಂದರು.

ಲಾಭದಲ್ಲಿ ಕೆಎಂಎಫ್: ಕೆಎಂಎಫ್ 2020–21 ನೇ ಸಾಲಿನಲ್ಲಿ ₹170 ಕೋಟಿ ನಿವ್ವಳ ಲಾಭ ಗಳಿಸಿದೆ. ಪ್ರತಿನಿತ್ಯ 81.50 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಕೋವಿಡ್ ಸಂದರ್ಭದಲ್ಲಿ 28 ಲಕ್ಷ ಲೀಟರ್ ಹಾಲನ್ನು ಪುಡಿಯಾಗಿ ಪರಿವರ್ತಿಸುವ ಕಾರ್ಯ ನಡೆದಿದೆ ಎಂದು ಅವರು ಹೇಳಿದರು.

ಸುಮಾರು 52 ಲಕ್ಷ ಲೀಟರ್ ಹಾಲಿನಿಂದ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ಕೋವಿಡ್‌ನಂತಹ ಸಂಕಷ್ಟದ ಸಂದರ್ಭದಲ್ಲೂ ರೈತರಿಂದ ಹಾಲನ್ನು ತಪ್ಪದೇ ಸಂಗ್ರಹಿಸಲಾಗುತ್ತಿದೆ. ರೈತರಿಗೆ ತೊಂದರೆ ಆಗದಂತೆ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು.

ನಗರದ 910 ಪೊಲೀಸರಿಗೆ ಕೋವಿಡ್

ಬೆಂಗಳೂರು: ನಗರದ 910 ಪೊಲೀಸರಿಗೆ ಎರಡನೇ ಅಲೆಯಲ್ಲಿ ಕೊರೊನಾ ಸೋಂಕು ತಗುಲಿದ್ದು, ಆ ಪೈಕಿ 11 ಪೊಲೀಸರು ಮೃತಪಟ್ಟಿದ್ದಾರೆ.

ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ನಗರದಲ್ಲಿ ಕರ್ಫ್ಯೂ ಜಾರಿ ಮಾಡಲಾಗಿದ್ದು, ಪೊಲೀಸರು ಪ್ರಾಣದ ಹಂಗು ತೊರೆದು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆದರೆ, ಕೆಲ ಸಾರ್ವಜನಿಕರು ಅನಗತ್ಯವಾಗಿ ರಸ್ತೆಯಲ್ಲಿ ಓಡಾಡುತ್ತಿದ್ದಾರೆ.

'ಮೇ 3ರವರೆಗೆ 910 ಪೊಲೀಸರು ಸೋಂಕಿತರಾಗಿದ್ದಾರೆ. ಅದರಲ್ಲಿ 159 ಮಂದಿ ಸೂಕ್ತ ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಚಾಲ್ತಿಯಲ್ಲಿ 740 ಸೋಂಕಿತರು ಇದ್ದಾರೆ. ಅದರಲ್ಲಿ 704 ಮಂದಿ ಹೋಂ ಐಸೋಲೇಷನ್‌ನಲ್ಲಿದ್ದಾರೆ. ಒಬ್ಬರು ಮಾತ್ರ ತೀವ್ರ ನಿಗಾ ಘಟಕದಲ್ಲಿದ್ದು, 34 ಮಂದಿ ಸಾಮಾನ್ಯ ವಾರ್ಡ್‌ನಲ್ಲಿದ್ದಾರೆ. ಬಹುತೇಕರು ಲಸಿಕೆ ಪಡೆದುಕೊಂಡಿದ್ದರು' ಎಂದೂ ಮೂಲಗಳು ತಿಳಿಸಿವೆ.

100 ಬಡ ಕುಟುಂಬಕ್ಕೆ ತಲಾ ₹1 ಲಕ್ಷ ಪರಿಹಾರ: ಸೋಮಶೇಖರ್ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಶವಂತಪುರ ಕ್ಷೇತ್ರ ವ್ಯಾಪ್ತಿಯಲ್ಲಿ ಆರ್ಥಿಕವಾಗಿ ಹಿಂದುಳಿದ ಕುಟುಂಬದಲ್ಲಿ ಯಾರಾದರೂ ಕೋವಿಡ್‌ನಿಂದ ಮೃತಪಟ್ಟರೆ ಆ ಕುಟುಂಬಕ್ಕೆ ವೈಯಕ್ತಿಕವಾಗಿ ₹1 ಲಕ್ಷ ಪರಿಹಾರ ನೀಡುತ್ತೇನೆ' ಎಂದು ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಮಂಗಳವಾರ ಮಾತನಾಡಿದ ಅವರು, 'ಮೊದಲ ಹಂತದಲ್ಲಿ 100 ಬಡ ಕುಟುಂಬಗಳಿಗೆ ನೆರವು ನೀಡಲು ಉದ್ದೇಶಿಸಲಾಗಿದೆ. ಈಗಾಗಲೇ 90 ಕುಟುಂಬದವರು ಹೆಸರು ನೋಂದಾಯಿಸಿಕೊಂಡಿದ್ದು ಎಲ್ಲ ಕುಟುಂಬಗಳಿಗೆ ಪರಿಹಾರ, ಆಹಾರದ ಪೊಟ್ಟಣ ಹಾಗೂ ಔಷಧ ಸಾಮಗ್ರಿ ಒದಗಿಸಲಾಗುವುದು. ಚಿಕಿತ್ಸೆ ಫಲನೀಡದೇ ಮೃತಪಟ್ಟರೆ ಅಂತಹ ಸಂತ್ರಸ್ತ ಕುಟುಂಬದ ನೆರವಿಗೆ ನಿಲ್ಲಲು ಈ ಯೋಜನೆ ರೂಪಿಸಿದ್ದೇನೆ' ಎಂದು ವಿವರಿಸಿದರು.



ಸೋಂಕು ನಿವಾರಕ ದ್ರಾವಣ ಸಿಂಪಡಣೆ ಕಾರ್ಯಕ್ಕೆ ಸೋಮಶೇಖರ್ ಚಾಲನೆ ನೀಡಿದರು

'ನನ್ನ ಕ್ಷೇತ್ರ ವ್ಯಾಪ್ತಿಯ ಐದು ವಾರ್ಡ್‌ಗಳ ಪ್ರತಿ ಬೀದಿಯಲ್ಲೂ ಸೋಂಕು ನಿವಾರಕ ದ್ರಾವಣ ಸಿಂಪಡಿಸಲಾಗುತ್ತದೆ. ಇದಕ್ಕೆ ತಗಲುವ ವೆಚ್ಚವನ್ನೂ ನಾನೇ ಭರಿಸುತ್ತೇನೆ. ಇದಕ್ಕಾಗಿ ಐದು ವಾಹನಗಳ ವ್ಯವಸ್ಥೆ ಮಾಡಲಾಗಿದೆ' ಎಂದರು.

'ಪಾಸಿಟಿವ್ ಆದವರ ಮನೆಗಳನ್ನೂ ಉಚಿತವಾಗಿ ಸ್ಯಾನಿಟೈಸ್ ಮಾಡಿ ಕೊಡುವ ಕಾರ್ಯಕ್ರಮ ರೂಪಿಸಲಾಗಿದೆ. ಕೋವಿಡ್ ಸೋಂಕಿಗೊಳಪಟ್ಟು ಚಿಕಿತ್ಸೆ ಪಡೆಯುತ್ತಿರುವ ಕುಟುಂಬದವರು, ಇಲ್ಲವೇ ಗುಣಮುಖ ಹೊಂದಿದ ಕುಟುಂಬದವರು ಮನವಿ ಮಾಡಿದರೆ, ಅವರ ಮನೆಗೂ ಸ್ಯಾನಿಟೈಸ್ ಮಾಡಿಸಿಕೊಡಲಾಗುವುದು. ಆ ಖರ್ಚನ್ನು ಸಹ ನಾನೇ ಭರಿಸಲಿದ್ದೇನೆ' ಎಂದರು.

ಕೇರ್ ಸೆಂಟರ್: ಚನ್ನೇನಹಳ್ಳಿ ಜನ ಸೇವಾ ವಿದ್ಯಾಕೇಂದ್ರದಲ್ಲಿ ಆರಂಭವಾಗಲಿರುವ 100 ಹಾಸಿಗೆಗಳ ಕೋವಿಡ್ ಕೇರ್ ಸೆಂಟರ್‌ಗೆ ಸರ್ಕಾರದಿಂದ ಎಲ್ಲ ನೆರವು ಹಾಗೂ ಸೌಲಭ್ಯ ಕೊಡಿಸುವುದಾಗಿ ಸೋಮಶೇಖರ್ ತಿಳಿಸಿದರು.

ಕೋವಿಡ್: ಒಂದೇ ದಿನ 292 ಮಂದಿ ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕು ದೃಢ ಪ್ರಮಾಣವು ಶೇ 29.03ಕ್ಕೆ ಏರಿಕೆಯಾಗಿದೆ. ಇದೇ ವೇಳೆ ಸೋಂಕಿನ ತೀವ್ರತೆಗೆ ಸಾವಿಗೀಡಾಗುವವರ ಸಂಖ್ಯೆ ಕೂಡ ಹೆಚ್ಚಳ ಕಂಡಿದ್ದು, ಬೆಂಗಳೂರಿನಲ್ಲಿ 132 ಮಂದಿ ಸೇರಿದಂತೆ ರಾಜ್ಯದಲ್ಲಿ 292 ಮಂದಿ ಮೃತಪಟ್ಟಿರುವುದು ಮಂಗಳವಾರ ಖಚಿತಪಟ್ಟಿದೆ.

24 ಗಂಟೆಗಳ ಅವಧಿಯಲ್ಲಿ 44,631 ಮಂದಿ ಸೋಂಕಿತರಾಗಿದ್ದಾರೆ. 7 ಜಿಲ್ಲೆಗಳಲ್ಲಿ ಸಾವಿರಕ್ಕೂ ಅಧಿಕ ಪ್ರಕರಣಗಳು ದೃಢಪಟ್ಟಿವೆ. ಈ ತಿಂಗಳು ಕೇವಲ ನಾಲ್ಕು ದಿನಗಳಲ್ಲಿಯೇ 1.67 ಲಕ್ಷ ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಪರಿಣಾಮ ಸಕ್ರಿಯ ಪ್ರಕರಣಗಳ ಸಂಖ್ಯೆ ಗಣನೀಯ ಏರಿಕೆ ಕಂಡಿದ್ದು, ಸದ್ಯ 4.64 ಲಕ್ಷ ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಈವರೆಗೆ ಸೋಂಕಿತರಾದವರ ಸಂಖ್ಯೆ 16.90 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 1.53 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಗದಗದಲ್ಲಿ (191) ಕನಿಷ್ಠ ಹಾಗೂ ಬೆಂಗಳೂರಿನಲ್ಲಿ (20,870) ಗರಿಷ್ಠ ಪ್ರಕರಣಗಳು ವರದಿಯಾಗಿವೆ. ಮೈಸೂರು (2,293), ಹಾಸನ (2,278), ತುಮಕೂರು (1,636), ಮಂಡ್ಯ (1,506), ಬಳ್ಳಾರಿ (1,280), ಕಲಬುರ್ಗಿ (1,162) ಜಿಲ್ಲೆಯಲ್ಲಿಯೂ ಅಧಿಕ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಕೊರೊನಾ ಸೋಂಕಿತರಲ್ಲಿ 24,714 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಚೇತರಿಸಿಕೊಂಡವರ ಸಂಖ್ಯೆ 12.10 ಲಕ್ಷ ದಾಟಿದೆ.

ಕೋವಿಡ್ ಮರಣ ಪ್ರಮಾಣ ದರ ಶೇ 0.65ರಷ್ಟಿದೆ. ರಾಜ್ಯದ 26 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬಳ್ಳಾರಿಯಲ್ಲಿ 27 ಮಂದಿ, ಶಿವಮೊಗ್ಗದಲ್ಲಿ 15 ಮಂದಿ, ತುಮಕೂರಿನಲ್ಲಿ 14 ಮಂದಿ, ಮೈಸೂರಿನಲ್ಲಿ 10 ಮಂದಿ, ಚಾಮರಾಜನಗರ ಹಾಗೂ ಬಾಗಲಕೋಟೆಯಲ್ಲಿ ತಲಾ 8 ಮಂದಿ ಸಾವಿಗೀಡಾಗಿದ್ದಾರೆ. ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಸಂಖ್ಯೆ 16,538ಕ್ಕೆ ಏರಿಕೆಯಾಗಿದೆ.

ಐವರು ಕೋವಿಡ್ ರೋಗಿಗಳ ಏಕಾಏಕಿ ಸಾವು

ಹುಬ್ಬಳ್ಳಿ: ಇಲ್ಲಿನ ಭಾಣಜಿ ಖಿಮಜಿ ಲೈಫ್ ಲೈನ್ ಆಸ್ಪತ್ರೆ ಯಲ್ಲಿ ಮಂಗಳವಾರ ಸಂಜೆ ಐವರು ಕೋವಿಡ್ ರೋಗಿಗಳು ಮೃತಪಟ್ಟಿದ್ದಾರೆ.

ಐವರು ಮೃತಪಟ್ಟಿರುವುದನ್ನು ಖಚಿತ ಪಡಿಸಿದ ಜಿಲ್ಲಾ ಆರೋಗ್ಯಾಧಿಕಾರಿ ಯಶವಂತ ಮದಿನಕರ, ಆಸ್ಪತ್ರೆಯಲ್ಲಿ ಆಮ್ಲಜನಕ ಇದೆ ಎಂದು ಪರಿಶೀಲಿಸಿ ಖಚಿತಪಡಿಸಿಕೊಂಡಿರುವೆ. ಆಮ್ಲಜನಕ ಕಾನ್ಸ್ ಟ್ರೇಟರ್ ಸಹ ಇವೆ ಎಂದು ಸ್ಪಷ್ಟಪಡಿಸಿದರು.

ಮೃತರಲ್ಲಿ ವಯಸ್ಸಾದವರು ಹಾಗೂ ತೀವ್ರತರವಾಗಿ ಬಾಧಿತರಾಗಿದ್ದವರು ಇದ್ದರು ಎಂದು ಆಸ್ಪತ್ರೆಯವರು ತಿಳಿಸಿದ್ದಾರೆ, ಪ್ರಕರಣದ ತನಿಖೆಗೆ ತಜ್ಞರ ಸಮಿತಿ ರಚನೆ ಮಾಡಲಾಗುವುದು ಎಂದು ತಿಳಿಸಿದರು.

ಒಂದೂವರೆ ಗಂಟೆಯಲ್ಲಿ ಐವರು ಏಕಾಏಕಿ ಮೃತರಾಗಿದ್ದಾರೆ. ಜಿಲ್ಲಾ ಡೆಟ್ ಆಡಿಟ್ ಸಮಿತಿಯಿಂದ ಪ್ರತಿ ಸಾವಿನ ಬಗೆಗೆ ವಿಚಾರಣೆ ನಡೆಸಲಾಗುವುದು. ಆ ನಂತರವಷ್ಟೇ ಸಾವಿಗೆ ಕಾರಣ ಗೊತ್ತಾಗಬಹುದು ಎಂದರು.

ಆಮ್ಲಜನಕ ಕೊರತೆ ಇದೆ ಎಂದು ಆಸ್ಪತ್ರೆ ಸಿಬ್ಬಂದಿ ಮಾತನಾಡುತ್ತಿದ್ದರು. ಈಗ ಯಾವುದೇ ತೊಂದರೆ ಇರಲಿಲ್ಲ ಎನ್ನುತ್ತಿದ್ದಾರೆ ಎಂದು ಮೃತರೊಬ್ಬರ ಸಂಬಂಧಿ ಸವಿತಾ ಅಳಲು ತೋಡಿಕೊಂಡರು.

ಆಸ್ಪತ್ರೆಯವರು ಪ್ರತಿಕ್ರಿಯೆಗೆ ನಿರಾಕರಿಸಿದರು.


ನಗರದ ಕೋವಿಡ್ ಅಂಕಿ–ಅಂಶ

8,40,274	ಒಟ್ಟು ಪ್ರಕರಣಗಳು (8,19,404 ನಿನ್ನೆಯ ವಿವರ)
3,01,712	ಸಕ್ರಿಯ ಪ್ರಕರಣಗಳು
5,31,716	ಗುಣಮುಖರಾದವರು
6,845	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	20,870
ಗುಣಮುಖ	13,946
ಸಾವು	132

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್



'ಕಷ್ಟ ನುಂಗಿ ಧೈರ್ಯ ತುಂಬುತ್ತೇವೆ'

ಶುಶ್ರೂಷಕರ ಅಂತರಂಗ

ಬೆಂಗಳೂರು: 'ಇಡೀ ದಿನ ಆಸ್ಪತ್ರೆಯಲ್ಲಿಯೇ ಇದ್ದು, ಕೋವಿಡ್ ಪೀಡಿತರಿಗೆ ಸೇವೆ ಒದಗಿಸಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದೊಂದು ವರ್ಷದಿಂದ ರಜೆ ಪಡೆಯದೆಯೇ ಕಾರ್ಯನಿರ್ವಹಿಸುತ್ತಿದ್ದು, ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ರಾತ್ರಿ 3 ಗಂಟೆ ಮಾತ್ರ ನಿದ್ದೆ ಮಾಡಲು ಸಾಧ್ಯವಾಗುತ್ತಿದೆ. ನಮಗೆ ಎಷ್ಟೇ ಕಷ್ಟಗಳು ಎದುರಾದರೂ ಸೋಂಕಿತರಿಗೆ ಆರೈಕೆಯಲ್ಲಿ ಸಮಸ್ಯೆಯಾಗದಂತೆ ನೋಡಿಕೊಂಡು, ಧೈರ್ಯ ತುಂಬುತ್ತಿದ್ದೇವೆ.'

'ಕಳೆದ ವರ್ಷ ಕೋವಿಡ್ ಕಾಣಿಸಿಕೊಂಡ ಬಳಿಕ ಸರ್.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಕೂಡ ಚಿಕಿತ್ಸೆ ಪ್ರಾರಂಭಿಸಲಾಯಿತು. ಹೆಚ್ಚಾಗಿ ವಿದೇಶದಿಂದ ಬಂದು ಸೋಂಕಿತರಾದವರು ಪ್ರಾರಂಭಿಕ ದಿನಗಳಲ್ಲಿ ದಾಖಲಾಗುತ್ತಿದ್ದರು. ಅವರು ಉನ್ನತ ದರ್ಜೆಯ ಸೇವೆಗಳನ್ನು ಬಯಸುತ್ತಿದ್ದರು. ರಾತ್ರಿ ಬಿರಿಯಾನಿ ತಂದುಕೊಟ್ಟ ಉದಾಹರಣೆಗಳು ಇವೆ. ಆದರೆ, ಹಾಸಿಗೆ ಸಮಸ್ಯೆ, ರೋಗಿಗಳ ದಟ್ಟಣೆ ಅಷ್ಟಾಗಿ ಇರುತ್ತಿರಲಿಲ್ಲ. ಎರಡನೇ ಅಲೆ ಕಾಣಿಸಿಕೊಂಡ ಬಳಿಕ ನಾವು ಸಂಪೂರ್ಣ ಹೈರಾಣಾಗಿದ್ದು, ವಾರದ ಎಲ್ಲ ದಿನಗಳು ಸೇವೆ ಸಲ್ಲಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.'



ಡಿ. ನವೀನ್ ರಾಜ್

'ಬೆಳಿಗ್ಗೆ 7 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಆಸ್ಪತ್ರೆಯಲ್ಲಿಯೇ ಇದ್ದು, ರೋಗಿಗಳನ್ನು ನೋಡಿಕೊಳ್ಳಬೇಕಾಗಿದೆ. ಮನೆಗೆ ಹೋದ ಬಳಿಕವೂ ದೂರವಾಣಿ ಕರೆಗಳು ಬರುವುದರಿಂದ ಸದಾ ರೋಗಿಗಳು ಹಾಗೂ ಆಸ್ಪತ್ರೆಯ ಬಗ್ಗೆಯೇ ಚಿಂತಿಸುತ್ತೇವೆ. ಈಗ ಆಸ್ಪತ್ರೆಗೆ ಬರುವ ರೋಗಿಗಳು ಗಂಭೀರವಾಗಿ ಅಸ್ವಸ್ಥರಾಗಿರುತ್ತಿದ್ದು, ಕೆಲವರ ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿರುತ್ತದೆ. ಹೀಗಾಗಿ, ಸದಾ ಜಾಗೃತರಾಗಿ ಇರುವ ಜತೆಗೆ ಹೆಚ್ಚಿನ ಕಾಳಜಿ ವಹಿಸಬೇಕಿದೆ. ಇದರಿಂದಾಗಿ ಊಟ–ತಿಂಡಿ ಮಾಡಲು ಕೂಡ ಸಾಧ್ಯವಾಗುತ್ತಿಲ್ಲ.'

'ವ್ಯಕ್ತಿಯು ಬದುಕುಳಿಯದಿದ್ದಲ್ಲಿ ನಮ್ಮ ಬಳಿ ಕುಟುಂಬದ ಸದಸ್ಯರು ಗಲಾಟೆ ಮಾಡುತ್ತಾರೆ. ಕೆಲವರು ಹಲ್ಲೆಗೆ ಕೂಡ ಮುಂದಾಗುತ್ತಾರೆ. ಆಗ ಮನಸ್ಸಿಗೆ ಬೇಸರವಾಗುತ್ತದೆ. ರೋಗಿಯು ಚಿಕಿತ್ಸೆಗೆ ಫಲಿಸದೇ ಮೃತಪಟ್ಟಾಗ ನಮ್ಮ ಕಣ್ಣೀರ ಕಟ್ಟೆ ಕೂಡ ಒಡೆಯುತ್ತದೆ. ವೈಯಕ್ತಿಕ ಸುರಕ್ಷಾ ಸಾಧನ (ಪಿಪಿಇ ಕಿಟ್) ಧರಿಸಿ 12 ಗಂಟೆ ಸೇವೆ ಸಲ್ಲಿಸಬೇಕಾಗುತ್ತದೆ. ಕೆಲ ವೈದ್ಯರು, ಶುಶ್ರೂಷಕರು ಕೋವಿಡ್ ಪೀಡಿತರಾಗುತ್ತಿರುವುದರಿಂದ ಇರುವ ಸಿಬ್ಬಂದಿಯೇ ಪರಿಸ್ಥಿತಿಯನ್ನು ನಿಭಾಯಿಸಬೇಕಾಗಿದೆ. ನಮ್ಮ ವೈಯಕ್ತಿಕ ಆರೋಗ್ಯ ಸಂಪೂರ್ಣ ಕಡೆಗಣಿಸಿದ್ದು, ಮನೆ, ಕುಟುಂಬವನ್ನು ಮರೆಯುತ್ತಿದ್ದೇವೆ.'

ಪರಿಚಯ

ಹೆಸರು: ಡಿ. ನವೀನ್ ರಾಜ್
ಊರು: ಬೆಂಗಳೂರು
ವೃತ್ತಿ: ಶುಶ್ರೂಷಕ ಅಧಿಕಾರಿ
ಸೇವೆ: 16 ವರ್ಷ
ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆ: ಸರ್.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ, ಬೆಂಗಳೂರು

ಕೆ.ಆರ್.ಆಸ್ಪತ್ರೆ ಆಮ್ಲಜನಕ ಘಟಕದಲ್ಲಿ ತಪ್ಪಿದ ಅನಾಹುತ

ಮೈಸೂರು: ಮೈಸೂರಿನ ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಸ್ಥಾಪಿಸಿರುವ ಲಿಕ್ವಿಡ್ ಆಮ್ಲಜನಕ ಘಟಕದಲ್ಲಿ ಮಂಗಳವಾರ ರಾತ್ರಿ ಉಂಟಾದ ತೊಡಕಿನಿಂದ ಸಂಭವಿಸಬಹುದಾಗಿದ್ದ ಅನಾಹುತವನ್ನು ಅಗ್ನಿಶಾಮಕ ದಳದ ಸಿಬ್ಬಂದಿ ತಪ್ಪಿಸಿದ್ದಾರೆ.

ಘಟಕದಲ್ಲಿ ದ್ರವರೂಪದ ಆಮ್ಲಜನಕ ಅನಿಲವಾಗಿ ಪರಿವರ್ತನೆಗೊಳ್ಳುವ ಸಮಯದಲ್ಲಿ ಪೈಪುಗಳಲ್ಲಿ ಕೆಲವೊಮ್ಮೆ ಮಂಜುಗಡ್ಡೆಯಾಗಿ ಮಾರ್ಪಾಡು ಆಗುತ್ತದೆ. ಈ ಪರಿಸ್ಥಿತಿಯಿಂದಾಗಿ ಮಂಗಳವಾರ ರಾತ್ರಿ ಏಳೂವರೆ ಗಂಟೆ ಸುಮಾರಿಗೆ ಅನಿಲ ಸರಬರಾಜು ಆಗುವ ಪೈಪುಗಳು ಬ್ಲಾಕ್ ಆಗಿದ್ದವು. ಇದರಿಂದ ಆಮ್ಲಜನಕ ಪೂರೈಕೆಯಲ್ಲಿ ಸಮಸ್ಯೆ ಕಾಣಿಸಿಕೊಂಡು ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ತಕ್ಷಣವೇ ಈ ಸಂಬಂಧ ಎಚ್ಚೆತ್ತುಕೊಂಡ ಆಸ್ಪತ್ರೆ ವೈದ್ಯರು ಹಾಗೂ ಸಿಬ್ಬಂದಿ, ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದಾರೆ. ಮೂರು ಅಗ್ನಿಶಾಮಕ ವಾಹನಗಳು ಸ್ಥಳಕ್ಕೆ ಧಾವಿಸಿವೆ. ಅಗ್ನಿಶಾಮಕ ಸಿಬ್ಬಂದಿ ಯಂತ್ರಕ್ಕೆ ನೀರು ಹಾಯಿಸಿ ಮಂಜುಗಡ್ಡೆಯ ರೂಪದಲ್ಲಿದ್ದ ಆಮ್ಲಜನಕವನ್ನು ಕರಗುವಂತೆ ಮಾಡಿದ್ದಾರೆ. ಸತತ ಎರಡು ಗಂಟೆ ಕಾರ್ಯಾಚರಣೆ ನಡೆಸಿದರು. ಕೆ.ಆರ್. ಆಸ್ಪತ್ರೆಯಲ್ಲಿ 500ಕ್ಕೂ ಅಧಿಕ ಕೋವಿಡ್ ಹಾಗೂ ಇತರ ರೋಗಿಗಳು ಇದ್ದಾರೆ.

'30 ಸಾವಿರ ಲೀಟರ್ ಆಮ್ಲಜನಕ ಸಂಗ್ರಹ ಸಾಮರ್ಥ್ಯದ ಘಟಕದಿಂದ ಆಸ್ಪತ್ರೆಯಲ್ಲಿನ ರೋಗಿಗಳಿಗೆ ಪೈಪುಗಳಲ್ಲಿ ಆಮ್ಲಜನಕ ಪೂರೈಸಲಾಗುತ್ತದೆ. ಆ ಪೈಪುಗಳಲ್ಲಿ ಮಂಜುಗಡ್ಡೆಯಾಗಿ ಮಾರ್ಪಾಡಾಗಿತ್ತು. ಪೈಪುಗಳು ಬ್ಲಾಕ್ ಆಗುವುದರಿಂದ ಆಮ್ಲಜನಕ ಪೂರೈಕೆಯಲ್ಲೂ ವ್ಯತ್ಯಯ ಉಂಟಾಗುತ್ತದೆ. ಹೀಗಾಗಿ, ಅಗ್ನಿಶಾಮಕದಳಕ್ಕೆ ಮಾಹಿತಿ ನೀಡಲಾಯಿತು. ಮೂರು ಟ್ಯಾಂಕ್ ನೀರು ಹಾಯಿಸಿ ಸಹಜ ಸ್ಥಿತಿಗೆ ತಂದರು. ಯಾವುದೇ ಅನಾಹುತ ಸಂಭವಿಸಿಲ್ಲ' ಎಂದು ಮೈಸೂರು ವೈದ್ಯಕೀಯ ಕಾಲೇಜಿನ ನಿರ್ದೇಶಕ ಡಾ.ಸಿ.ಪಿ.ನಂಜರಾಜ್ 'ಪ್ರಜಾವಾಣಿಗೆ' ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಕೋವಿಡ್: ವಾಯುಪಡೆಯಿಂದ ಆಸ್ಪತ್ರೆ ಸ್ಥಾಪನೆ

ಬೆಂಗಳೂರು: ಭಾರತೀಯ ವಾಯುಪಡೆಯು (ಐಎಎಫ್) ಕೋವಿಡ್ ಪೀಡಿತರ ಚಿಕಿತ್ಸೆಗಾಗಿಯೇ ಜಾಲಹಳ್ಳಿಯಲ್ಲಿರುವ ವಾಯುನೆಲೆಯಲ್ಲಿ 100 ಹಾಸಿಗೆ ಸಾಮರ್ಥ್ಯದ ಸುಸಜ್ಜಿತ ಆಸ್ಪತ್ರೆ ಸ್ಥಾಪಿಸಲು ಮುಂದಾಗಿದೆ.

'ಆಮ್ಲಜನಕ ಸಾಂದ್ರಕ ಸೌಲಭ್ಯವಿರುವ 20 ಹಾಸಿಗೆಗಳು ಈಗಾಗಲೇ ಸಿದ್ಧವಿದ್ದು ಇದೇ 6ರಿಂದ ಬಳಕೆಗೆ ಮುಕ್ತವಾಗಲಿವೆ. ರಾಜ್ಯ ಸರ್ಕಾರವು ವೈದ್ಯಕೀಯ ಆಮ್ಲಜನಕ ಲಭ್ಯತೆಯನ್ನು ಖಾತರಿಪಡಿಸಿದ ಬಳಿಕ ಉಳಿದ 80 ಹಾಸಿಗೆಗಳ ವ್ಯವಸ್ಥೆ ಮಾಡಲಾಗುವುದು. ಇವು ಇದೇ 20ರಿಂದ ಬಳಕೆಗೆ ಲಭ್ಯವಾಗುವ ನಿರೀಕ್ಷೆ ಇದೆ. 100ರ ಪೈಕಿ 10 ಹಾಸಿಗೆಗಳು ಐಸಿಯು ಸೌಲಭ್ಯ ಒಳಗೊಂಡಿರಲಿವೆ. 40 ಹಾಸಿಗೆಗಳು ಪೈಪ್ ಮೂಲಕ ಆಮ್ಲಜನಕ ಪೂರೈಸುವ ಸೌಲಭ್ಯ ಹೊಂದಿರಲಿವೆ' ಎಂದು ಐಎಎಫ್ ತಿಳಿಸಿದೆ.



ನರಸೀಪುರದ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂದೆ ರಾಗಿ ಹುಬ್ಬಲು

ಆಸ್ಪತ್ರೆ ಮುಂದೆ ಅಶುಚಿ: ಆಕ್ರೋಶ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕು ನರಸೀಪುರ ತೋಪಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ಹೊರ ಆವರಣ ಅಶುಚಿತ್ವದಿಂದ ಕೂಡಿದೆ ಎಂದು ರೋಗಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ

ಆಸ್ಪತ್ರೆ ಆವರಣದಲ್ಲಿ ಜಿಲ್ಲಾ ಪಂಚಾಯಿತಿ ಅನುದಾನದಲ್ಲಿ ಕಾಂಕ್ರೀಟ್ ಹಾಕಲಾಗಿದ್ದು, ಅದನ್ನು ಕ್ಯೂರಿಂಗ್ ಮಾಡಲು ರಾಗಿ ಹುಬ್ಬಲು ಹಾಕಲಾಗಿದೆ. ಕಾಮಗಾರಿ ಮುಗಿದು ತಿಂಗಳುಗಳೇ ಕಳೆದಿದ್ದು, ಶುಚಿ ಮಾಡುವುದು ಬಿಟ್ಟು ಅಲ್ಲೇ ಬಿಟ್ಟಿದ್ದಾರೆ. ಇದರಿಂದ ಆಸ್ಪತ್ರೆ ಹೊರ ಆವರಣ ಗಲೀಜಾಗಿ ಹೋಗಿದೆ.

ಮಳೆ ಬಂದಾಗ ಹುಬ್ಬಲು ನೆನೆದು ಆಸ್ಪತ್ರೆಗೆ ಬರುವ ರೋಗಿಗಳು ಹಾಗೂ ಸಾರ್ವಜನಿಕರು ಜಾರಿ ಬೀಳುತ್ತಿದ್ದಾರೆ. ದ್ವಿಚಕ್ರ ವಾಹನಗಳು ಸ್ಕಿಡ್ ಆಗಿದ್ದು ಇದೆ ಅನ್ನುತ್ತಾರೆ ಸ್ಥಳೀಯರು.

ಕೋವಿಡ್: ಪರೀಕ್ಷೆ ವಿಳಂಬದಿಂದ ಸಮಸ್ಯೆ: ಡಾ. ಮೋಹಿತ್

ಬೆಂಗಳೂರು: 'ಎಸ್ಸೆಸ್ಸೆಲ್ಸಿ ಪರೀಕ್ಷೆ ಎದುರಿಸುವ ಅಭ್ಯರ್ಥಿಗಳು 5 ನಿಮಿಷ ತಡವಾಗಿ ಪರೀಕ್ಷಾ ಕೊಠಡಿಗಳಿಗೆ ಹೋದಲ್ಲಿ ಅವಸರದಿಂದ ಉತ್ತರಗಳನ್ನು ಮರೆತು, ಆತ್ಮಸ್ಥೈರ್ಯ ಕಳೆದುಕೊಳ್ಳುವ ಸಾಧ್ಯತೆಗಳಿರುತ್ತವೆ. ಕೋವಿಡ್ ಕಾಯಿಲೆ ವಿಚಾರವಾಗಿ ಕೂಡ ಕೆಲವರು ತಡವಾಗಿ ಪರೀಕ್ಷೆ ಮಾಡಿಸಿಕೊಂಡು, ಸಮಸ್ಯೆ ತಂದೊಡ್ಡಿಕೊಳ್ಳುತ್ತಿದ್ದಾರೆ' ಎಂದು ಖ್ಯಾತ ಹೃದಯ ಶಸ್ತ್ರಚಿಕಿತ್ಸಕ ಡಾ. ಮೋಹಿತ್ ಶರ್ಮಾ ತಿಳಿಸಿದರು.



ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರವು ಆನ್‌ಲೈನ್‌ನಲ್ಲಿ ಮಂಗಳವಾರ ಆಯೋಜಿಸಿದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕೋವಿಡ್ ವಿಚಾರವಾಗಿ ಅನಗತ್ಯವಾಗಿ ಭಯ ಸೃಷ್ಟಿಸಿ, ಅದಕ್ಕೆ ಹಾಲೆರೆಯಲಾಗುತ್ತಿದೆ. ಕೋವಿಡ್ ಪೀಡಿತರಲ್ಲಿ ಶೇ 85ರಷ್ಟು ಮಂದಿಗೆ ಮನೆಯ ಆರೈಕೆಯೇ ಸಾಕಾಗುತ್ತದೆ. ಶೇ 10 ರಷ್ಟು ಮಂದಿಗೆ ವೈದ್ಯರ ಸಮಾಲೋಚನೆ ಅಗತ್ಯವಿರಲಿದೆ. ಇನ್ನುಳಿದ ಶೇ 5 ರಷ್ಟು ಮಂದಿಗೆ ಮಾತ್ರ ಆಸ್ಪತ್ರೆ ಚಿಕಿತ್ಸೆ ಅಗತ್ಯ. ಅವರಲ್ಲಿ ಶೇ 3ರಷ್ಟು ಮಂದಿಗೆ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆಗಳನ್ನು ಒದಗಿಸಬೇಕಾಗುತ್ತದೆ. ಕೋವಿಡ್ ಕಾಯಿಲೆಯ ಬಗ್ಗೆ ಸಾಮೂಹಿಕವಾಗಿ ನಕಾರಾತ್ಮಕತೆಯನ್ನು ಬಿಂಬಿಸಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ವಿಶ್ವ ಆರೋಗ್ಯ ಸಂಸ್ಥೆಯು 'ಕೋವಿಡ್ ಜಾಗತಿಕ ಸಾಂಕ್ರಾಮಿಕ ಕಾಯಿಲೆ' ಎಂದು ಘೋಷಿಸಿ, ಸಣ್ಣ ಅಕ್ಷರಗಳಲ್ಲಿ 'ಇದು ಭಯಪಡುವ ಕಾಯಿಲೆಯಲ್ಲ. ಮನೆಯಲ್ಲಿಯೂ ಚೇತರಿಸಿಕೊಳ್ಳಬಹುದು' ಎಂದು ಹೇಳಿದೆ. ದೇಶದಲ್ಲಿ ಕೋವಿಡ್‌ಗೆ ಈವರೆಗೆ 2.22 ಲಕ್ಷ ಮಂದಿ ಮೃತಪಟ್ಟಿದ್ದಾರೆ. ಅದೇ ಹೃದಯ ಕಾಯಿಲೆಗೆ ವರ್ಷಕ್ಕೆ 40 ಲಕ್ಷಕ್ಕೂ ಅಧಿಕ ಮಂದಿ ಸಾವಿಗೀಡಾಗುತ್ತಿದ್ದಾರೆ' ಎಂದರು.

'ರೆಮ್‌ಡಿಸಿವಿರ್ ಕೆಲವರಿಗೆ ಮಾತ್ರ ಅಗತ್ಯ'

'ಕೋವಿಡ್ ಕಾಣಿಸಿಕೊಂಡ ಬಳಿಕ ಕಳೆದ ವರ್ಷ ಮುಖಗವಸು, ಸ್ಯಾನಿಟೈಸರ್ ಕೊರತೆಯಾಗಿ, ಕಾಳಸಂತೆಯಲ್ಲಿ ಮಾರಾಟವಾಗುತ್ತಿತ್ತು. ಆದರೆ, ಈಗ ಅವುಗಳು ಗಲ್ಲಿ ಗಲ್ಲಿಯಲ್ಲಿ ಸಿಗುತ್ತಿವೆ. ಸದ್ಯ ಎದುರಾಗಿರುವ ಆಮ್ಲಜನಕದ ಸಮಸ್ಯೆ ಸಹ ಮುಂದಿನ ಎರಡು ತಿಂಗಳಲ್ಲಿ ಪರಿಹಾರವಾಗಲಿದೆ. ಅದೇ ರೀತಿ, 'ರೆಮ್‌ಡಿಸಿವಿರ್' ಔಷಧವು ಎಲ್ಲರಿಗೂ ಅಗತ್ಯವಿಲ್ಲ. ಕೋವಿಡೇತರ ಸಮಸ್ಯೆಗಳನ್ನು ಎದುರಿಸುತ್ತಿರುವ ವೃದ್ಧರಿಗೆ ಸೋಂಕು ತಗುಲಿದಲ್ಲಿ ಬೇಕಾಗುತ್ತದೆ. ವೈರಾಣುಗಳನ್ನು ನಾಶಪಡಿಸಿ, ಪ್ರತಿಕಾಯಗಳನ್ನು ಅಭಿವೃದ್ಧಿಪಡಿಸಲು ಇದು ಸಹಕಾರಿ' ಎಂದು ಹೇಳಿದರು.

ಲೋಪ ಸರಿಪಡಿಸಲು ಸಾಹಿತಿಗಳ ಒತ್ತಾಯ

'ಕೋವಿಡ್: ಸಾವಿಗೆ ಸರ್ಕಾರವೇ ಹೊಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಕಾಯಿಲೆಗೆ ಚಿಕಿತ್ಸೆ ಸಿಗದೆಯೇ ಮೃತಪಡುವವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಇದಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರವೇ ನೇರ ಹೊಣೆ. ಜನಪ್ರತಿನಿಧಿಗಳು ಟೊಳ್ಳು ರಾಜಕಾರಣವನ್ನು ಬಿಟ್ಟು, ಸಮಸ್ಯೆಗಳ ನಿವಾರಣೆಗೆ ಶೀಘ್ರ ಕ್ರಮ ಕೈಗೊಳ್ಳಬೇಕು' ಎಂದು ನಾಡಿನ ಸಾಹಿತಿಗಳು ಹಾಗೂ ಸಂಸ್ಕೃತಿ ಚಿಂತಕರು ಒತ್ತಾಯಿಸಿದ್ದಾರೆ.

ಈ ಸಂಬಂಧ ಅವರು ಜಂಟಿ ಪ್ರಕಟಣೆ ಬಿಡುಗಡೆ ಮಾಡಿದ್ದು, ಎಸ್.ಜಿ. ಸಿದ್ಧರಾಮಯ್ಯ, ಜಿ.ಕೆ. ಗೋವಿಂದ ರಾವ್, ಕೆ. ಮರುಳಸಿದ್ದಪ್ಪ, ಮುಖ್ಯಮಂತ್ರಿ ಚಂದ್ರು, ಹಿ.ಶಿ. ರಾಮಚಂದ್ರೇಗೌಡ, ಕಾಳೇಗೌಡ ನಾಗವಾರ, ಆರ್.ಕೆ. ಹುಡಗಿ, ರುದ್ರಪ್ಪ ಹನಗವಾಡಿ, ಬಿ.ಟಿ. ಲಲಿತಾ ನಾಯಕ್, ವಸುಂಧರಾ ಭೂಪತಿ, ಕೆ. ಷರೀಫಾ ಹಾಗೂ ಜಿ. ಶರಣಪ್ಪ ಅವರು ವೈದ್ಯಕೀಯ ವ್ಯವಸ್ಥೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಚಾಮರಾಜನಗರದಲ್ಲಿ ಆಮ್ಲಜನಕ ಸಿಗದೆಯೇ 24 ಮಂದಿ ಮೃತಪಟ್ಟಿದ್ದಾರೆ. ದಿನವೂ ಕೊರೊನಾ ಸೋಂಕಿತರು ಚಿಕಿತ್ಸೆಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ ನಡೆಸಬೇಕಾದ ಪರಿಸ್ಥಿತಿ ಇದೆ. ಇನ್ನೊಂದೆಡೆ ಹಾಸಿಗೆ ಸಿಕ್ಕರೂ ಸರಿಯಾದ ಶುಶ್ರೂಷೆ ಇಲ್ಲದೆಯೇ ರೋಗಿಗಳು ಸಮಸ್ಯೆ ಎದುರಿಸುತ್ತಿದ್ದಾರೆ. ಲಸಿಕೆ ಕೂಡ ಸರಿಯಾಗಿ ಸಿಗುತ್ತಿಲ್ಲ. ಮೃತರ ಅಂತ್ಯ ಸಂಸ್ಕಾರ ನಡೆಸಲು ಸ್ಮಶಾನಗಳಲ್ಲಿ ಕೂಡ ಸರತಿ ಸಾಲಿನಲ್ಲಿ ಕಾಯಬೇಕಾಗಿದೆ. ಈ ನಡುವೆ ಅಲ್ಲಿ ಉಚಿತವಾಗಿ ತಿಂಡಿ ಹಂಚುವ ನಗುಮೊಗದ ರಾಷ್ಟ್ರೀಯ ಹಾಗೂ ರಾಜ್ಯ ನಾಯಕರ ಜಾಹೀರಾತು ಫಲಕಗಳು ಮೆರೆದಾಟ ನಡೆಸುತ್ತಿವೆ. ಇದು ಕರ್ನಾಟಕದ ಬೇಜವಾಬ್ದಾರಿ ಆಡಳಿತ ವ್ಯವಸ್ಥೆಯ ಒಂದು ಮುಖ' ಎಂದು ತಿಳಿಸಿದ್ದಾರೆ.

ಸರ್ಕಾರದಿಂದ ಹಸಿ ಸುಳ್ಳು: ಸಿದ್ದರಾಮಯ್ಯ ವಾಗ್ದಾಳಿ • ಸರ್ಕಾರವೇ ಐಸಿಯುನಲ್ಲಿದೆ –ಡಿಕೆಶಿ ಟೀಕೆ

ರೋಗಿಗಳ ಸಾವು: ನ್ಯಾಯಾಂಗ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ



ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಂಗಳವಾರ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ರೋಗಿಗಳ ಸಂಬಂಧಿಕರೊಂದಿಗೆ ಮಾತುಕತೆ ನಡೆಸಿದರು

ಚಾಮರಾಜನಗರ: 'ಇಲ್ಲಿನ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಸಿಗದೇ ಭಾನುವಾರ ರಾತ್ರಿ ಮೃತಪಟ್ಟ ಕೋವಿಡ್ ರೋಗಿಗಳ ಸಂಖ್ಯೆಯ ಬಗ್ಗೆ ಸರ್ಕಾರ ಹಸಿ ಹಸಿ ಸುಳ್ಳು ಹೇಳುತ್ತಿದೆ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಆರೋಗ್ಯ ಸಚಿವರ ನಡೆಯನ್ನೂ ತರಾಟೆಗೆ ತೆಗೆದುಕೊಂಡರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಅವರೊಂದಿಗೆ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದ ಅವರು, ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

'ಆಮ್ಲಜನಕದ ಕೊರತೆಯಿಂದ 28 ಮಂದಿ ಮೃತಪಟ್ಟಿದ್ದಾರೆ. ಈ ಬಗ್ಗೆ ಆರೋಗ್ಯ ಸಚಿವ ಕೆ.ಸುಧಾಕರ್ ಸುಳ್ಳು ಹೇಳುತ್ತಿದ್ದಾರೆ. ಕೋವಿಡ್ ಎರಡನೇ ಅಲೆ ಬಂದ ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಸುರೇಶ್‌ಕುಮಾರ್ ಒಂದು ಸಭೆಯನ್ನೂ ಮಾಡಿಲ್ಲ. ಮುಖ್ಯಮಂತ್ರಿ ಹಾಗೂ ಈ ಸಚಿವದ್ವಯರು ಘಟನೆಯ ಹೊಣೆ ಹೊತ್ತುಕೊಳ್ಳಬೇಕು. ಜನರ ಜೀವ ಉಳಿಸಲು ಆಗದ ಮೇಲೆ ಕುರ್ಚಿ ಬಿಟ್ಟು ಕೆಳಗಿಳಿಯಬೇಕು; ಈ ಕ್ಷಣವೇ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು.

ಇದಕ್ಕೂ ಮುನ್ನ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮಾಹಿತಿ ಪಡೆದರು. 'ಸತ್ಯವನ್ನು ಮುಚ್ಚಿಡಬೇಡಿ' ಎಂದು ರೇಗಿದರು. ಇದರಿಂದ ಚಾಮರಾಜನಗರ ವೈದ್ಯಕೀಯ ಕಾಲೇಜಿನ ಡೀನ್ ಸಂಜೀವ್ ರೆಡ್ಡಿ ತಡಬಡಾಯಿಸಿದರು.

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾಧಿಕಾರಿಗಳು ಬೇರೆ ಬೇರೆ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಘಟನೆ ಕುರಿತು ನ್ಯಾಯಾಂಗ ತನಿಖೆ ಅಥವಾ ಸ್ವತಂತ್ರ ತನಿಖಾ ಸಂಸ್ಥೆಯಿಂದ ವಿಚಾರಣೆ ನಡೆಯಬೇಕು ಎಂದು ಒತ್ತಾಯಿಸಿದರು.

₹ 25 ಲಕ್ಷ ಪರಿಹಾರಕ್ಕೆ ಆಗ್ರಹ: 'ಸರ್ಕಾರವೇ ಐಸಿಯು ನಲ್ಲಿದ್ದು, ಅದಕ್ಕೇ ಆಮ್ಲಜನಕ ಇಲ್ಲ. ಮೃತಪಟ್ಟವರ ಕುಟುಂಬಗಳಿಗೆ ತಲಾ ₹ 25 ಲಕ್ಷ ಪರಿಹಾರ ನೀಡಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಾಗ್ದಾಳಿ ನಡೆಸಿದರು.

'ಸಚಿವರು ಸುಳ್ಳು ಹೇಳುತ್ತಿದ್ದಾರೋ, ಸತ್ಯ ಹೇಳುತ್ತಿದ್ದಾರೋ ಎಂದು ಅನುಮಾನ ಇತ್ತು. ಇಲ್ಲಿಗೆ ಬಂದ ಮೇಲೆ 28 ಮಂದಿ ಮೃತಪಟ್ಟಿರುವುದು ಗೊತ್ತಾಯಿತು. ಇವರೆಲ್ಲರ ಸಾವಿಗೂ ಸರ್ಕಾರವೇ ಕಾರಣ' ಎಂದು ಆರೋಪಿಸಿದರು.

ಮೈಸೂರು ಡಿ.ಸಿ ವಿರುದ್ಧ ಪ್ರತಿಭಟನೆ: ಆಸ್ಪತ್ರೆ ಆವರಣದಲ್ಲಿ ಶ್ಯಾಮ್‌ಮುರಳಿ ಎಂಬುವವರು ಮಂಗಳವಾರ ಮೈಸೂರು ಜಿಲ್ಲಾಧಿಕಾರಿ ವಿರುದ್ಧ ಏಕಾಂಗಿಯಾಗಿ ಪ್ರತಿಭಟಿಸಿದರು. ಪ್ರತಿಭಟನೆ ಕೈಬಿಡುವಂತೆ ತನಿಖಾಧಿಕಾರಿ ಶಿವಯೋಗಿ ಕಳಸದ, ಜಿಲ್ಲಾಧಿಕಾರಿ ಎಂ.ಆರ್.ರವಿ ಅವರು ಮನವಿ ಮಾಡಿದರೂ ಸ್ಪಂದಿಸಲಿಲ್ಲ. ಒಂದು ಹಂತದಲ್ಲಿ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿಕೊಳ್ಳುವ ಬೆದರಿಕೆ ಒಡ್ಡಿದ್ದರು.

ಇಬ್ಬರೂ ಜಿಲ್ಲಾಧಿಕಾರಿಗಳನ್ನು ಅಮಾನತುಪಡಿಸಿ: ಸಾ.ರಾ.ಮಹೇಶ್

ಮೈಸೂರು: 'ಚಾಮರಾಜನಗರದ ಕೋವಿಡ್ ರೋಗಿಗಳ ಸಾವಿಗೆ ಸಂಬಂಧಿಸಿದಂತೆ ಮೈಸೂರು ಮತ್ತು ಚಾಮರಾಜನಗರದ ಜಿಲ್ಲಾಧಿಕಾರಿಗಳ ಹಾಗೂ ಸಹಾಯಕ ಔಷಧ ನಿಯಂತ್ರಕರನ್ನು ಅಮಾನತು ಮಾಡಬೇಕು' ಎಂದು ಜೆಡಿಎಸ್ ಶಾಸಕ ಸಾ.ರಾ.ಮಹೇಶ್ ಮಂಗಳವಾರ ಇಲ್ಲಿ ಆಗ್ರಹಿಸಿದರು.

'ಉಭಯ ಜಿಲ್ಲೆಗಳ ಜಿಲ್ಲಾಧಿಕಾರಿಗಳ ನಡುವಿನ ಸಮನ್ವಯದ ಕೊರತೆಯಿಂದಲೇ ದುರಂತ ಸಂಭವಿಸಿದೆ. ಎರಡೂ ಜಿಲ್ಲೆಗಳ ಜಿಲ್ಲಾಧಿಕಾರಿಗಳನ್ನು ಅಮಾನತು ಮಾಡದೆ ಏನು ತನಿಖೆ ಮಾಡುತ್ತೀರಿ?' ಎಂದು ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿ, ಸರ್ಕಾರದ ವಿರುದ್ಧ ಕಿಡಿ ಕಾರಿದರು.

'ಘಟನೆಯಲ್ಲಿ ಮೂವರು ಸತ್ತಿದ್ದಾರೆ ಎಂದು ಆರೋಗ್ಯ ಸಚಿವರು ಹೇಳಿದ್ದಾರೆ. ಅದು ಸಾಧ್ಯವೇ? ಚಾಮರಾಜನಗರದ ಆಸ್ಪತ್ರೆಗೆ ಮೈಸೂರಿನಿಂದ ಆಮ್ಲಜನಕ ಪೂರೈಕೆಯಾಗಿಲ್ಲ, ಮೈಸೂರಿನ ಔಷಧ ನಿಯಂತ್ರಕರು ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರದಿರುವುದು ದೊಡ್ಡ ಲೋಪ' ಎಂದರು.

ಪ್ರಾಥಮಿಕ ಹಂತದಲ್ಲಿ ತನಿಖೆ: ಕಳಸದ

ಪ್ರಕರಣದ ವಿಚಾರಣಾಧಿಕಾರಿ ಶಿವಯೋಗಿ ಕಳಸದ ಅವರು, 'ತನಿಖೆ ಪ್ರಾಥಮಿಕ ಹಂತದಲ್ಲಿದೆ. ಎಲ್ಲ ಆಯಾಮಗಳಿಂದಲೂ ತನಿಖೆ ನಡೆಸಲಾಗುತ್ತಿದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ಜಿಲ್ಲಾಸ್ಪತ್ರೆಯ ಎಲ್ಲಾ ಮಾಹಿತಿಗಳನ್ನೂ ಪಡೆಯಲಾಗಿದೆ. ವಿಚಾರಣೆ ಪ್ರಾಥಮಿಕ ಹಂತದಲ್ಲಿದ್ದು ಹೆಚ್ಚು ಮಾತನಾಡುವುದಿಲ್ಲ. ವರದಿ ನೀಡಲು ಮೂರು ದಿನದ ಅವಕಾಶವಿದೆ' ಎಂದು ತಿಳಿಸಿದರು.

ವಿವಿಧೆಡೆ ಮಳೆ: ಸಿಡಿಲು ಬಡಿದು ಎಂಟು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮಂಗಳವಾರವೂ ಮಳೆ ಮುಂದುವರಿದಿದೆ. ಸಿಡಿಲು ಬಡಿದು ಪ್ರತ್ಯೇಕ ಪ್ರಕರಣಗಳಲ್ಲಿ ಮಹಿಳೆಯೊಬ್ಬರು ಸೇರಿದಂತೆ ಎಂಟು ಮಂದಿ ಮೃತಪಟ್ಟಿದ್ದಾರೆ. ಬಳ್ಳಾರಿ ಜಿಲ್ಲೆ ಕೂಡ್ಲಿಗಿಯಲ್ಲಿ ನಾಲ್ವರು, ದಾವಣಗೆರೆ ಜಿಲ್ಲೆಯಲ್ಲಿ ಮೂವರು ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಒಬ್ಬರು ಮೃತಪಟ್ಟಿದ್ದಾರೆ.

ಕೂಡ್ಲಿಗಿ ತಾಲ್ಲೂಕಿನಲ್ಲಿ ಸಿಡಿಲು ಬಡಿದು ನೆಲಬೊಮ್ಮನಹಳ್ಳಿಯ ಚಿನ್ನಪ್ಪ (40), ವೀರಣ್ಣ (50), ಎಂ.ಬಿ. ಅಯ್ಯನಹಳ್ಳಿಯ ಬಿ. ಪತ್ರೆಪ್ಪ (43), ಹರವದಿ ಗ್ರಾಮದ ರಾಜಶೇಖರ(32) ಮೃತರಾದವರು.

ದಾವಣಗೆರೆ ತಾಲ್ಲೂಕು ಮಾಯಕೊಂಡ ಸಮೀಪ ಹುಚ್ಚವ್ವನಹಳ್ಳಿ ಕೆರೆ ಏರಿಯ ಮೇಲೆ ಸಿಡಿಲು ಬಡಿದು ಹುಚ್ಚವ್ವನಹಳ್ಳಿ ಗ್ರಾಮದ ರವಿಕುಮಾರ್ (32), ರಮೇಶ (30) ಮೃತಪಟ್ಟವರು. ಹೊನ್ನಾಳಿ ತಾಲ್ಲೂಕಿನ ಮಾದೇನಹಳ್ಳಿ ಬಳಿ ಕುರಿಗಾಹಿ ಚಿತ್ರಲಿಂಗಪ್ಪ (25) ಮೃತಪಟ್ಟಿದ್ದಾರೆ. ಇವರು ಮೂಲತಃ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಗಿಣ್ಣಪ್ಪನ ಹಟ್ಟಿ ಗ್ರಾಮದವರು.

ಯಾದಗಿರಿ ಜಿಲ್ಲೆಯ ವಿವಿಧೆಡೆ ಮಳೆಯಾಗಿದ್ದು, ಸೈದಾಪುರ ಸಮೀಪದ ಮುನಗಾಲ ಗ್ರಾಮದಲ್ಲಿ ಸಿಡಿಲು ಬಡಿದು ಸಿದ್ದಮ್ಮ ಭೀಮಪ್ಪ ಕೌಳೂರು (45) ಮೃತಪಟ್ಟಿದ್ದಾರೆ.

ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಐನಾಪುರದಲ್ಲಿ ಮಳೆಯಾಗಿದೆ. ಬೀದರ್ ಜಿಲ್ಲೆಯ ಚಿಟಗುಪ್ಪದಲ್ಲಿ ಮಳೆಯಾಗಿದೆ.

ಚಿಕ್ಕಮಗಳೂರು, ದಕ್ಷಿಣ ಕನ್ನಡ, ಚಿತ್ರದುರ್ಗ ಜಿಲ್ಲೆಯ ಹಲವೆಡೆ ಕೊಡಗು ಜಿಲ್ಲೆಯ ಗೋಣಿಕೊಪ್ಪಲು, ಪೊನ್ನಂಪೇಟೆ ಸುತ್ತಮುತ್ತ ಮಳೆಯಾಗಿದೆ.

ಒಂಬತ್ತು ಜಿಲ್ಲೆಗಳಲ್ಲಿ ಮಳೆ ಮುನ್ಸೂಚನೆ

ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಮೇ 5ರಿಂದ 7ರವರೆಗೆ ಹವಾಮಾನ ವೈಪರೀತ್ಯದಿಂದಾಗಿ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಲ್ಲಿ ಎರಡು ದಿನಗಳವರೆಗೆ ಹೆಚ್ಚು ಮಳೆಯಾಗುವ ಮುನ್ಸೂಚನೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

'ನಾವೆಲ್ಲರೂ ಈ ದುರಂತಕ್ಕೆ ಕಾರಣ'


ಬೆಂಗಳೂರು: 'ಚಾಮರಾಜನಗರ ಆಸ್ಪತ್ರೆಯಲ್ಲಿ ಸತ್ತವರು ಸಾಮಾನ್ಯರು. ಸತ್ತಿದ್ದು ಸರ್ಕಾರಿ ಆಸ್ಪತ್ರೆಯಲ್ಲಿ. ಅದಕ್ಕೆ ಕಾರಣ ನಮ್ಮ ನಿರ್ಲಕ್ಷ್ಯ. ಮಾಹಿತಿ ಪ್ರಕಾರ ಆಸ್ಪತ್ರೆಯಲ್ಲಿ ಇದ್ದ ವೈಫಲ್ಯಗಳ ಕಾರಣದಿಂದ ಅವರು ಪ್ರಾಣ ಕಳೆದುಕೊಂಡಿದ್ದಾರೆ' ಎಂದು ಉಲ್ಲೇಖಿಸಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಶ್ರೀನಿವಾಸಪುರ ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ಆರ್. ರಮೇಶ್ ಕುಮಾರ್ ಸುದೀರ್ಘ ಪತ್ರ ಬರೆದಿದ್ದಾರೆ.

'ಸತ್ತ ಕುಟುಂಬಗಳಿಗೆ ಪರಿಹಾರ ಘೋಷಣೆ ಅಸಹಾಯಕ ಜನರ ಜೀವಕ್ಕೆ ಬೆಲೆ ಕಟ್ಟುವ ಒಂದು ದುರಹಂಕಾರದ ಪರಮಾವಧಿಯ ಪ್ರಕ್ರಿಯೆ ಆಗುತ್ತದೆಯೇ ಹೊರತು ಪಶ್ಚಾತ್ತಾಪಪಟ್ಟ ಮನಸ್ಸಿನಿಂದ, ಪ್ರಾಮಾಣಿಕವಾದ ಪ್ರಯತ್ನ ಆಗದು' ಎಂದು ಹೇಳಿದ್ದಾರೆ.

'ಯಾರ ತಪ್ಪಿಗಾಗಿ ಯಾರಿಗೆ ಶಿಕ್ಷೆ. ಯಾರ ದರ್ಪ ಮತ್ತು ಅಹಂಕಾರಗಳಿಗೆ ಯಾರು ಬಲಿಯಾಗಿದ್ದಾರೆ. ಆಲೋಚನೆ ಮಾಡಿದ್ದೀರಾ' ಎಂದೂ ಪ್ರಶ್ನಿಸಿದ್ದಾರೆ.

ನಿಧನ ವಾರ್ತೆ

ಕಥೆಗಾರ ಎಸ್.ಎಫ್. ಯೋಗಪ್ಪನವರ್



ಬೆಂಗಳೂರು: ಕಥೆಗಾರ ಹಾಗೂ ಅಂಕಣಕಾರ ಎಸ್.ಎಫ್. ಯೋಗಪ್ಪನವರ್ (73) ಅವರು ಮಂಗಳವಾರ ಬೆಳಿಗ್ಗೆ 11.30ಕ್ಕೆ ಮೃತಪಟ್ಟಿದ್ದಾರೆ.


ಇಲ್ಲಿನ ಗಂಗಾನಗರದಲ್ಲಿ ವಾಸವಾಗಿದ್ದ ಅವರಿಗೆ 10 ದಿನಗಳ ಹಿಂದೆ ಕೋವಿಡ್ ತಗುಲಿತ್ತು. ಯಶವಂತಪುರದ ಕೊಲಂಬಿಯಾ ಏಷ್ಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಪತ್ನಿ ಕೂಡ ಕೋವಿಡ್ ಪೀಡಿತರಾಗಿ, ಆಸ್ಪತ್ರೆ ಸೇರಿದ್ದರು. ನಾಲ್ಕು ದಿನಗಳ ಹಿಂದೆ ಅವರು ಗುಣಮುಖರಾಗಿದ್ದರು. ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿಯನ್ನು ಅವರು ಅಗಲಿದ್ದಾರೆ.

ಅಂತ್ಯಕ್ರಿಯೆ ಹುಟ್ಟೂರಾದ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಬೇಲೂರು ಗ್ರಾಮದಲ್ಲಿ ಮಂಗಳವಾರ ನಡೆಯಿತು.

ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. ಬಾದಾಮಿಯ ವೀರಪುಲಿಕೇಶಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. 1974ರಲ್ಲಿ ಕರ್ನಾಟಕ ಆಡಳಿತ ಸೇವೆಗೆ ಆಯ್ಕೆಯಾದರು. ಸರ್ಕಾರಿ ವೃತ್ತಿಯ ಜತೆಗೆ ಸಾಹಿತ್ಯದಲ್ಲಿ ಒಲವು ಹೊಂದಿದ್ದರು.

'ಲಂಕೇಶ್ ಪತ್ರಿಕೆ'ಯಲ್ಲಿ ಅಂಕಣಕಾರರಾಗಿ ಪ್ರಸಿದ್ಧರಾಗಿದ್ದರು. 'ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ', 'ಪ್ರೀತಿಯೆಂಬುದು ಚಂದ್ರನ ದಯೆ', 'ಶೋಧ' ಸೇರಿ ವಿವಿಧ ಕಾದಂಬರಿಗಳು, 'ಆರಾಮ ಕುರ್ಚಿ ಇತರ ಕಥೆಗಳು', 'ಒಂದು ಶಹರದ ಸುತ್ತ', 'ಮಾಯಾ ಕನ್ನಡಿ–ಚಾರ್ಲ್ಸ್ ಬೋದಿಲೇರ್‌ನ ಐವತ್ತು ಗದ್ಯ ಕವಿತೆಗಳು' ಸೇರಿ ಹಲವು ಕೃತಿಗಳನ್ನು ರಚಿಸಿದ್ದಾರೆ.

ರಂಗಕರ್ಮಿ ಎಂ.ಸಿ. ಆನಂದ್



ಬೆಂಗಳೂರು: ಹಿರಿಯ ರಂಗಕರ್ಮಿ ಹಾಗೂ ರಂಗನಟ ಎಂ.ಸಿ. ಆನಂದ್ (72) ಅವರು ಹೃದಯಾಘಾತದಿಂದ ಮಂಗಳವಾರ ಬೆಳಿಗ್ಗೆ 11.30ಕ್ಕೆ ನಿಧನರಾದರು.

ಕೊರೊನಾ ಸೋಂಕಿತರಾಗಿದ್ದ ಅವರು ಕೋಣನಕುಂಟೆಯ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅವರು ಅಗಲಿದ್ದಾರೆ. ಅವರ ಪತ್ನಿ ಕೂಡ ಸೋಂಕಿತರಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಎಂ.ಎಸ್. ಸತ್ಯು ನಿರ್ದೇಶನದ 'ವಾರಸುದಾರ' ನಾಟಕಕ್ಕೆ ಆನಂದ್ ಅವರು ರಂಗತಾಲೀಮು ನಡೆಸಿದ್ದರು. ಇಲ್ಲಿನ ಎಡಿಎ ರಂಗಮಂದಿರದಲ್ಲಿ ರಂಗಪ್ರದರ್ಶನಕ್ಕೆ ಸಿದ್ಧತೆ ನಡೆದಿತ್ತು. ಸದ್ಯ, ಪ್ರದರ್ಶನವನ್ನು ಮುಂದೂಡಲಾಗಿತ್ತು.

ಆನಂದ್ ಅವರು ಕಂಟ್ರೋಲರೇಟ್ ಆಫ್ ಕ್ವಾಲಿಟಿ ಅಶ್ಯೂರೆನ್ಸ್ ಸಂಸ್ಥೆಯಲ್ಲಿ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿದ್ದರು. ರಂಗಭೂಮಿ ಚಟುವಟಿಕೆಯಲ್ಲಿ ಸಕ್ರಿಯರಾಗಿದ್ದ ಅವರು, ಕನ್ನಡ ಸಾಹಿತ್ಯ ಕಲಾ ಸಂಘ, ರಂಗಸಂಪದ, ಸಮುದಾಯ, ಸ್ಪಂದನ ಸೇರಿದಂತೆ ವಿವಿಧ ರಂಗ ತಂಡಗಳಲ್ಲಿ ಕಾರ್ಯನಿರ್ವಹಿಸಿದ್ದರು.

'ಯಯಾತಿ', 'ತಾಯಿ', 'ಹುತ್ತವ ಬಡಿದರೆ', 'ಗೆಲಿಲಿಯೋ' ಸೇರಿದಂತೆ ಹಲವು ನಾಟಕಗಳಲ್ಲಿ ಅಭಿನಯಿಸಿದ್ದರು. ಅನುವಾದಕರಾಗಿ ಕೂಡ ಹೆಸರು ಮಾಡಿದ್ದು, ಹಲವು ನಾಟಕಗಳನ್ನು ಕನ್ನಡಕ್ಕೆ ತಂದಿದ್ದರು. ಶಂಕರ್ ನಾಗ್ ಅವರ 'ಮಾಲ್ಗುಡಿ ಡೇಸ್' ಸೇರಿದಂತೆ ವಿವಿಧ ಧಾರಾವಾಹಿ ಮತ್ತು 'ಸಿಂಹಾಸನ', 'ಅವಸ್ಥೆ' ಸೇರಿ ಕೆಲ ಚಲನಚಿತ್ರಗಳಲ್ಲಿ ಅಭಿನಯಿಸಿದ್ದರು. ಕರ್ನಾಟಕ ನಾಟಕ ಅಕಾಡೆಮಿ ಪುರಸ್ಕಾರ ಸೇರಿದಂತೆ ವಿವಿಧ ಪ್ರಶಸ್ತಿಗಳು ಅವರಿಗೆ ಸಂದಿವೆ.






ನೈಜ ಫೋಟೊ, ದೀರ್ಘ ಬ್ಯಾಟರಿ ಬಾಳಿಕೆ

ಒನ್‌ಪ್ಲಸ್ 9





ವಿಶ್ವನಾಥ ಎಸ್.

ಭಾರತದ ಪ್ರೀಮಿಯಂ ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ಮುಂಚೂಣಿಯಲ್ಲಿ ಇರುವ ಒನ್‌ಪ್ಲಸ್ ಕಂಪನಿಯು ಈಚೆಗಷ್ಟೇ ಒನ್‌ಪ್ಲಸ್ 9 ಸ್ಮಾರ್ಟ್‌ಫೋನ್ ಬಿಡುಗಡೆ ಮಾಡಿದೆ. ನೈಜ ಫೋಟೊ, ವೇಗದ ಕಾರ್ಯಾಚರಣೆ, ದೀರ್ಘ ಬ್ಯಾಟರಿ ಬಾಳಿಕೆ, ವಿನ್ಯಾಸ ಹೀಗೆ ಎಲ್ಲಾ ದೃಷ್ಟಿಯಿಂದಲೂ ಕಂಪನಿಯ ಈ ಹಿಂದಿನ ಸ್ಮಾರ್ಟ್‌ಫೋನ್‌ಗಳಿಗಿಂತಲೂ ಭಿನ್ನವಾಗಿದೆ.

ವಿನ್ಯಾಸ: ಒನ್‌ಪ್ಲಸ್ 9 ಸ್ಮಾರ್ಟ್‌ಫೋನ್ ವಿನ್ಯಾಸವು ಆಕರ್ಷಕವಾಗಿದೆ. ಮುಂಭಾಗದಿಂದ ನೋಡಿದರೆ ತಕ್ಷಣಕ್ಕೆ ಒನ್‌ಪ್ಲಸ್ 8ಟಿ ರೀತಿಯಲ್ಲಿಯೇ ಕಾಣಿಸುತ್ತದೆ. ಫ್ಲ್ಯಾಟ್ ಸ್ಕ್ರೀನ್ ಡಿಸ್‌ಪ್ಲೇ, ಪಂಚ್ ಹೋಲ್ ಸೆಲ್ಫಿ ಕ್ಯಾಮೆರಾ ಎರಡರಲ್ಲೂ ಒಂದೇ ರೀತಿಯಲ್ಲಿ ಇರುವುದರಿಂದ ಎರಡು ಹ್ಯಾಂಡ್‌ಸೆಟ್‌ಗಳ ಮಧ್ಯೆ ವ್ಯತ್ಯಾಸ ಕಾಣಿಸುವುದಿಲ್ಲ. ಫೋನ್‌ನ ಹಿಂಭಾಗದಲ್ಲಿ ಕ್ಯಾಮೆರಾ ಸೆಟಪ್ ಭಿನ್ನವಾಗಿದೆ. ರೆಕ್ಟ್ಯಾಂಗಲ್ ಮಾದರಿಯಲ್ಲಿ ಟ್ರಿಪಲ್ ರಿಯರ್ ಕ್ಯಾಮೆರಾ ನೀಡಲಾಗಿದೆ. ಹೀಗಾಗಿ ಒನ್‌ಪ್ಲಸ್ 9 ಎಂದು ತಿಳಿಯುತ್ತದೆ. ಕಂಪನಿಯು ಹ್ಯಾಸೆಲ್ ಬ್ಲಾಡ್ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ ಎನ್ನುವುದನ್ನು ತಿಳಿಯುವಂತೆ ಹೆಸರನ್ನೂ ಹಾಕಲಾಗಿದೆ.

ಈ ಸ್ಮಾರ್ಟ್‌ಫೋನ್ 6.55 ಇಂಚು ಅಮೊ ಎಲ್‌ಇಡಿ ಡಿಸ್‌ಪ್ಲೇ, ಪೂರ್ಣ ಪ್ರಮಾಣದ ಎಚ್‌ಡಿ + ರೆಸಲ್ಯೂಷನ್ (1080X2400) ಹೊಂದಿದೆ. ಬಣ್ಣಗಳ ನಿಖರತೆ, ಆಟೊಮೆಟಿಕ್ ಬ್ರೈಟ್‌ನೆಸ್ ಕಂಟ್ರೋಲ್‌ನಲ್ಲಿಯೂ ಸುಧಾರಣೆ ಆಗಿದೆ. 5ಜಿ ಬೆಂಬಲಿತ ಈ ಸ್ಮಾರ್ಟ್‌ಫೋನ್ ಸ್ನ್ಯಾಪ್‌ಡ್ರ್ಯಾಗನ್ 888 ಪ್ರೊಸೆಸರ್, ಆಂಡ್ರಾಯ್ಡ್ 11 ಒಎಸ್ ಆಧಾರಿತ ಆಕ್ಸಿಜನ್ ಒಎಸ್‌ನಿಂದ ಕಾರ್ಯಾಚರಿಸುತ್ತದೆ. ಡಾಲ್ಬಿ ಅಟ್ಮಾಸ್ ಸ್ಪೀಕರ್ ಇರುವುದರಿಂದ ಧ್ವನಿ ಸ್ಪಷ್ಟವಾಗಿದೆ. ಗೇಮ್ ಆಡುವಾಗ ಮತ್ತು ವಿಡಿಯೊ ನೋಡುವಾಗ ಇದರ ನೈಜ ಅನುಭವ ಆಗುತ್ತದೆ.

ಕ್ಯಾಮೆರಾ: ಈ ಹ್ಯಾಂಡ್‌ಸೆಟ್‌ನ ಹಿಂಬದಿಯಲ್ಲಿ 48 + 50 + 2 ಎಂಪಿ ಕ್ಯಾಮೆರಾ, ಮುಂಬದಿ 16ಎಂಪಿ ಸೆಲ್ಫಿ ಕ್ಯಾಮೆರಾ ಹೊಂದಿದೆ. ಈ ಹಿಂದಿನ ಸ್ಮಾರ್ಟ್‌ಫೋನ್‌ಗಳಲ್ಲಿ ಕ್ಯಾಮೆರಾಕ್ಕೆ ಸಂಬಂಧಿಸಿದಂತೆ ಒಂದಲ್ಲಾ ಒಂದು ಸಮಸ್ಯೆ ಇತ್ತು. ಝೂಮ್ ಮಾಡಿದಾಗ ಸ್ಪಷ್ಟತೆ ಇರುತ್ತಿರಲಿಲ್ಲ, ಮಂದ ಬೆಳಕಿನಲ್ಲಿ ತೆಗೆದ ಚಿತ್ರ ಅಷ್ಟೇನು ಚೆನ್ನಾಗಿ ಇರುತ್ತಿರಲಿಲ್ಲ. ಹೀಗಾಗಿ ಒನ್‌ಪ್ಲಸ್ 9ರಲ್ಲಿ ಕ್ಯಾಮೆರಾ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಲು ವೃತ್ತಿಪರ ಕ್ಯಾಮೆರಾ ತಯಾರಿಸುವ ಹ್ಯಾಸೆಲ್‌ಬ್ಲಾಡ್ ಕಂಪನಿಯ ಜೊತೆ ಒಪ್ಪಂದ ಮಾಡಿಕೊಂಡಿದೆ.

ಚಿತ್ರಗಳು ಹೆಚ್ಚು ನೈಜ ಬಣ್ಣದಲ್ಲಿ ಮೂಡಿಬರುತ್ತವೆ. ಚಿತ್ರವನ್ನು ತೆಗೆದ ಬಳಿಕ ಝೂಮ್ ಮಾಡಿದರೆ ಸ್ಪಷ್ಟತೆಯಲ್ಲಿ ಯಾವುದೇ ಕೊರತೆ ಕಾಣಿಸುವುದಿಲ್ಲ. ಪೊರ್ಟ್ರೇಟ್ ಆಯ್ಕೆಯಲ್ಲಿಯೂ ಸಹಜವಾದ ಮೈಬಣ್ಣದಲ್ಲಿ ಚಿತ್ರ ಸೆರೆಯಾಗುತ್ತದೆ. ಈ ಹಿಂದಿನ ಹ್ಯಾಂಡ್‌ಸೆಟ್‌ಗಳಲ್ಲಿ ನೈಟ್‌ಸ್ಕೇಪ್ ಆಯ್ಕೆಯಲ್ಲಿ ಚಿತ್ರ ತೆಗೆಯುವಾಗ ಕ್ಲಿಕ್ ಮಾಡಿದ ಬಳಿಕ ಕೆಲಹೊತ್ತು ಮೊಬೈಲ್ ಅಲ್ಲಾಡಿಸದೇ ಹಾಗೆಯೇ ಹಿಡಿದಿರಬೇಕಿತ್ತು. ಇದರಲ್ಲಿಯೂ ಆ ಸಮಸ್ಯೆ ಇದೆ.

ಬ್ಯಾಟರಿ: 4,500 ಎಂಎಎಚ್ ಬ್ಯಾಟರಿ ಹೊಂದಿದ್ದು, 65ಟಿ ವಾರ್ಪ್ ಚಾರ್ಜಿಂಗ್ ವ್ಯವಸ್ಥೆ ಇದೆ. 30 ನಿಮಿಷದಲ್ಲಿ ಪೂರ್ತಿ ಬ್ಯಾಟರಿ ಚಾರ್ಜ್ ಆಗುತ್ತದೆ. ಆಡಿಯೊ, ವಿಡಿಯೊ, ಸರ್ಫಿಂಗ್, ಚ್ಯಾಟ್, ಕಾಲ್ ಹೀಗೆ ಎಲ್ಲವನ್ನೂ ಬಳಸಿದರೆ ಬ್ಯಾಟರಿ ಒಂದು ದಿನ ಬಾಳಿಕೆ ಬರುತ್ತದೆ.

ಕೊರತೆ: ಕಾಲ್ ರೆಕಾರ್ಡಿಂಗ್ ಆಯ್ಕೆಯಲ್ಲಿ ಇರುವ ಸಮಸ್ಯೆಗೆ ಇಲ್ಲಿಯೂ ಪರಿಹಾರ ನೀಡಿಲ್ಲ. ಇನ್‌ಬಿಲ್ಟ್ ಆಗಿ ಕಾಲ್ ರೆಕಾರ್ಡಿಂಗ್ ಆಯ್ಕೆ ಇದೆ. ಕರೆ ಸ್ವೀಕರಿಸಿದ ಬಳಿಕವಷ್ಟೇ ರೆಕಾರ್ಡ್ ಆನ್ ಮಾಡಲು ಸಾಧ್ಯ. ಆಗ, 'ನಿಮ್ಮ ಕರೆಯನ್ನು ಈಗ ರೆಕಾರ್ಡ್ ಮಾಡಲಾಗುತ್ತದೆ' ಎನ್ನುವ ಧ್ವನಿ ಕೇಳಿಸುತ್ತದೆ. ಇದು ಕರೆ ಮಾಡಿದವರು ಮತ್ತು ಸ್ವೀಕರಿಸಿದವರು ಇಬ್ಬರಿಗೂ ಕೇಳಿಸುತ್ತದೆ.

ಒಟ್ಟಾರೆ ಹೇಳುವುದಾದರೆ, ವಿನ್ಯಾಸ, ಚಾರ್ಜಿಂಗ್, ಕ್ಯಾಮೆರಾ ಗುಣಮಟ್ಟ ಹೀಗೆ ಎಲ್ಲಾ ದೃಷ್ಟಿಯಿಂದಲೂ ಒನ್‌ಪ್ಲಸ್ 9 ಹ್ಯಾಂಡ್‌ಸೆಟ್ ಕಂಪನಿಯ ಈ ಹಿಂದಿನ ಎಲ್ಲಾ ಹ್ಯಾಂಡ್‌ಸೆಟ್‌ಗಳಿಗಿಂತಲೂ ಉತ್ತಮವಾಗಿದೆ. ❖

ವೈಶಿಷ್ಟ್ಯ

- ಪರದೆ: 6.55 ಇಂಚ್ ಫ್ಲ್ಯೂಯಿಡ್ ಅಮೊ ಎಲ್‌ಇಡಿ ಡಿಸ್‌ಪ್ಲೇ
- ಒಎಸ್; ಆಂಡ್ರಾಯ್ಡ್ 11 ಆಧಾರಿತ ಆಕ್ಸಿಜನ್ ಒಎಸ್
- ಪ್ರೊಸೆಸರ್; ಕ್ವಾಲ್ಕಂ ಸ್ನ್ಯಾಪ್‌ಡ್ರ್ಯಾಗನ್ 888
- ಕ್ಯಾಮೆರಾ; 48 + 50 + 2 ಎಂಪಿ ಕ್ಯಾಮೆರಾ
- ಸೆಲ್ಫಿ ಕ್ಯಾಮೆರಾ; 16ಎಂಪಿ
- ಬ್ಯಾಟರಿ; 4,500 ಎಂಎಎಚ್
- ಫೇಸ್ ಅನ್‌ಲಾಕ್, ಇನ್ ಡಿಸ್‌ಪ್ಲೇ ಫಿಂಗರ್‌ಪ್ರಿಂಟ್ ಸೆನ್ಸರ್
- ಬೆಲೆ: 8ಜಿಬಿ ರ್‍ಯಾಮ್ + 128 ಜಿಬಿ ಸ್ಟೊರೇಜ್; ₹49,999. 12 ಜಿಬಿ ರ್‍ಯಾಮ್ + 256 ಜಿಬಿ ಸ್ಟೊರೇಜ್; ₹54,999

ತಾಯಂದಿರ ದಿನ

ಅಮ್ಮನಿಗೊಂದು ಗ್ಯಾಜೆಟ್ ಗಿಫ್ಟ್


ಕಿರಣ್ ಐ.ಜಿ.

ಮೇ 9 ತಾಯಂದಿರ ದಿನ.. ತಾಯಿಗೆ ವಿಶೇಷವಾದ ಗೌರವ ಅರ್ಪಿಸಲು ಈ ದಿನವನ್ನು ಮೀಸಲಿರಿಸಲಾಗುತ್ತದೆ. ನೀವು ತಾಯಿಗೆ ಅಥವಾ ಇತ್ತೀಚೆಗಷ್ಟೇ ಅಮ್ಮನಾಗಿರುವ, ಇಲ್ಲವೇ ಶೀಘ್ರದಲ್ಲಿ ತಾಯಿಯಾಗಲಿರುವವರಿಗೆ ಏನಾದರೂ ಉಡುಗೊರೆ ಕೊಡುವ ಮೂಲಕ ಈ ದಿನವನ್ನು ಸ್ಮರಣೀಯವಾಗಿಸಬಹುದು.

ಇಂದು ವಿಶೇಷ ದಿನಗಳಲ್ಲಿ ತಮ್ಮ ಪ್ರೀತಿಪಾತ್ರರಿಗೆ ಉಡುಗೊರೆ ಕೊಡುವುದು ಸಹಜವಾಗಿದೆ. ಅದರಲ್ಲೂ ಈಗ ಮನೆಯಲ್ಲಿಯೇ ಇರಬೇಕಾಗಿದೆ. ಹೀಗಾಗಿ ತಾಯಿ ಮನೆ, ಮಕ್ಕಳು ಮತ್ತು ಕಚೇರಿ ಎಂದು ಹಲವು ಪಾತ್ರಗಳನ್ನು ಏಕಕಾಲಕ್ಕೆ ನಿರ್ವಹಿಸುತ್ತಾಳೆ. ಅದಕ್ಕೆ ಪೂರಕವಾಗಿ, ಸಹಾಯಕವಾಗಿ ಕೆಲವೊಂದು ಗ್ಯಾಜೆಟ್, ಎಲೆಕ್ಟ್ರಾನಿಕ್ ಉಪಕರಣಗಳನ್ನು ಒದಗಿಸುವ ಮೂಲಕ ಅವರ ಕೆಲಸವನ್ನು ಸುಲಭವಾಗಿಸಬಹುದು. ಅಲ್ಲದೆ, ಮಾನಸಿಕ ಮತ್ತು ದೈಹಿಕ ಒತ್ತಡ ಕಡಿಮೆ ಮಾಡಲು ಕೂಡ ಇದು ಸಹಕಾರಿಯಾಗುತ್ತದೆ.

ಜತೆಗೆ ಮಗುವಿನ ಪಾಲನೆಯ ಸಂದರ್ಭದಲ್ಲೂ ಗ್ಯಾಜೆಟ್‌ಗಳ ನೆರವು ಪಡೆಯುವುದರಿಂದ, ತಕ್ಕಮಟ್ಟಿಗೆ ಶ್ರಮ ಕಡಿಮೆ ಮಾಡಲು ಸಾಧ್ಯವಿದೆ. ಅಂತಹ ಕೆಲವೊಂದು ಉಪಕರಣಗಳ ವಿವರ ಇಲ್ಲಿದೆ.

ನೈಟ್ ಲ್ಯಾಂಪ್



ಸ್ಮಾರ್ಟ್‌ಫೋನ್ ಮೂಲಕ ನಿಯಂತ್ರಿಸಬಹುದಾದ ಈ ಸಾಫ್ಟ್ ಲೈಟ್, ರಾತ್ರಿಯ ವೇಳೆ ಮಗುವಿಗೆ ಹಾಲುಣಿಸಲು, ಡೈಪರ್ ಬದಲಾಯಿಸಲು ನೆರವಾಗುತ್ತದೆ. ಜತೆಗೆ ಮಗುವಿನ ನಿದ್ರೆಗೆ ಪೂರಕವಾದ ಶಬ್ದವನ್ನು ಕೂಡ ಇದು ಹೊರಡಿಸುತ್ತದೆ. ಅಲ್ಲದೆ, ವಿವಿಧ ಬಣ್ಣಗಳ ಸಂಯೋಜನೆ, ಬೆಳಕನ್ನು ಹೊಂದಾಣಿಕೆ ಮಾಡುವುದು, ಅಲೆಕ್ಸಾ ಮೂಲಕ ವಾಯ್ಸ್ ಕಂಟ್ರೋಲ್ ಇದರ ವಿಶೇಷತೆಯಾಗಿದೆ. ಅದರಲ್ಲೇ ಗಡಿಯಾರ, ಬ್ಯಾಟರಿ ಮೀಟರ್ ಸಹಿತ ಹಲವು ಫೀಚರ್‌ಗಳಿವೆ.

ಬೇಬಿ ಮಾನಿಟರ್ ಮತ್ತು ಸ್ಮಾರ್ಟ್ ಸೆನ್ಸರ್



ಮನೆಯಲ್ಲಿ ಸೀಮಿತ ಸಂಖ್ಯೆಯ ಸದಸ್ಯರು ಇರುವಾಗ, ಮಗು ಇದ್ದರೆ ಅದನ್ನು ಸರಿಯಾಗಿ ನೋಡಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದಾದರೆ, ಆ ಸಂದರ್ಭದಲ್ಲಿ ಬೇಬಿ ಮಾನಿಟರ್ ನೆರವಾಗುತ್ತದೆ. ಜತೆಗೆ ಇದರಲ್ಲಿ ಕ್ಯಾಮೆರಾ, ಲೈವ್ ಸ್ಟ್ರೀಮ್ ಇರುವುದರಿಂದ ಮತ್ತು ಸೆನ್ಸರ್ ಸಹಿತ ಮಗುವಿನ ಚಲನವಲನ ಗಮನಿಸಿ ನಿಮಗೆ ಅಲರ್ಟ್ ಮಾಡುತ್ತದೆ. ಉಳಿದಂತೆ ಆಡಿಯೊ ಫೀಚರ್ ಇದ್ದು, ಮಗುವಿನ ಧ್ವನಿ ಕೇಳಿಸಿಕೊಳ್ಳುವುದು ಮತ್ತು ನಿಮ್ಮ ಧ್ವನಿಯ ಕಮಾಂಡ್ ಗುರುತಿಸಿ, ಅದಕ್ಕೆ ಅನುಗುಣವಾಗಿ ಕೆಲಸ ಮಾಡುತ್ತದೆ. ವೈಫೈ ಮೂಲಕ ಸ್ಮಾರ್ಟ್‌ಫೋನ್‌ಗೆ ಸಂಪರ್ಕಿಸಿ, ಬೇಬಿ ಮಾನಿಟರ್ ನಿಯಂತ್ರಿಸಬಹುದು.

ಸ್ಮಾರ್ಟ್ ಸ್ಪೀಕರ್



ಮಾರುಕಟ್ಟೆಯಲ್ಲಿ ಲಭ್ಯವಿರುವ ವಿವಿಧ ಬಗೆಯ ಸ್ಮಾರ್ಟ್ ಸ್ಪೀಕರ್ ಹಲವು ರೀತಿಯಲ್ಲಿ ನಿಮಗೆ ನೆರವಾಗುತ್ತದೆ. ಮಗುವಿನ ಪಾಲನೆಯಲ್ಲಿ ತೊಡಗಿರುವ ತಾಯಿ, ಹತ್ತು ಹಲವು ಕೆಲಸ ನಿರ್ವಹಿಸುವಾಗ ಸಹಜವಾಗಿ ಅವರಿಗೆ ಸಹಾಯ ಬೇಕಾಗುತ್ತದೆ. ಆದರೆ ಮನೆಯಲ್ಲಿ ಗಂಡ-ಹೆಂಡತಿ ಇಬ್ಬರೇ ಇದ್ದು, ಗಂಡ ಹೊರಗಡೆ ಕೆಲಸಕ್ಕೆ ಹೋಗುತ್ತಿದ್ದರೆ, ಅಂತಹ ಸಮಯದಲ್ಲಿ ಸ್ಮಾರ್ಟ್ ಸ್ಪೀಕರ್ ನೆರವಿನಿಂದ ತಾಯಿ ರಿಮೈಂಡರ್ ಸೆಟ್ ಮಾಡಿಕೊಳ್ಳುವುದು, ನಿಗದಿತ ಸಮಯಕ್ಕೆ ಮಗುವಿನ ಚಾಕರಿ ಮಾಡುವ ಕುರಿತಂತೆ ಸ್ಮಾರ್ಟ್ ಸ್ಪೀಕರ್‌ನಲ್ಲಿ ರಿಮೈಂಡರ್ ಅಳವಡಿಸಿದರೆ, ಆ ಸಮಯಕ್ಕೆ ಸ್ಪೀಕರ್ ನೆನಪಿಸುತ್ತದೆ. ಮಗುವಿಗೆ ಔಷಧ ಕುಡಿಸುವುದು ಇರಬಹುದು, ಇಲ್ಲವೆ ಅಡುಗೆ ಕೋಣೆಯಲ್ಲಿ ಗ್ಯಾಸ್ ಸ್ಟವ್ ಮೇಲೆ ಇರಿಸಿರುವ ಆಹಾರವನ್ನು ನಿಗದಿತ ಅವಧಿಗೆ ಆಫ್ ಮಾಡಲು ನೆನಪಿಸುವುದು ಸಹಿತ ವಿವಿಧ ಕೆಲಸಕ್ಕೆ ಸ್ಮಾರ್ಟ್ ಸ್ಪೀಕರ್ ಅನುಕೂಲ. ಅಲ್ಲದೆ, ಸ್ಮಾರ್ಟ್ ಗ್ಯಾಜೆಟ್‌ಗಳನ್ನು ಮನೆಯಲ್ಲಿ ಅಳವಡಿಸಿ, ಸ್ಮಾರ್ಟ್ ಸ್ಪೀಕರ್‌ಗೆ ಲಿಂಕ್ ಮಾಡಿದ್ದರೆ, ತಾಯಿಯಾದವಳು ಕುಳಿತಲ್ಲಿಂದ ಎದ್ದು ಹೋಗದೆಯೇ ವಾಯ್ಸ್ ಕಮಾಂಡ್ ಮೂಲಕ ಅಂತಹ ಉಪಕರಣಗಳನ್ನು ಸುಲಭದಲ್ಲಿ ನಿಯಂತ್ರಿಸಬಹುದು.

ಸ್ಮಾರ್ಟ್ ಬಾಟಲ್ ವಾರ್ಮರ್, ಹೀಟಿಂಗ್ ಮಗ್



ಮಗುವಿಗೆ ಕೆಲವೊಂದು ಆಹಾರ ಪದಾರ್ಥಗಳನ್ನು ಬಿಸಿಯಾಗಿಯೇ ಕೊಡಬೇಕಾಗುತ್ತದೆ. ಜತೆಗೆ ತಾಯಿಯಾದವಳು ಕೂಡ ಸಮಯಕ್ಕೆ ಸರಿಯಾಗಿ ಪೌಷ್ಟಿಕ ಆಹಾರವನ್ನು ಸೇವಿಸುವುದು ಮತ್ತು ಬಿಸಿ ಆಹಾರ ಸೇವನೆ ಉತ್ತಮ. ಹೀಗಾಗಿ ಪದೇ ಪದೇ ಆಹಾರ ತಯಾರಿಸಿ ಬಿಸಿ ಮಾಡಿಕೊಳ್ಳುವುದು ಕಷ್ಟವಾದರೆ, ಅಂತಹ ಸಂದರ್ಭದಲ್ಲಿ ಸ್ಮಾರ್ಟ್ ಬೇಬಿ ಬಾಟಲ್ ವಾರ್ಮರ್, ಹೀಟಿಂಗ್ ಮಗ್‌ನಂತಹ ಸ್ಮಾರ್ಟ್ ಗ್ಯಾಜೆಟ್ ಬಳಸಿದರೆ, ಅದನ್ನು ಸ್ಮಾರ್ಟ್‌ಫೋನ್ ಮೂಲಕವೇ ನಿಯಂತ್ರಿಸಬಹುದು. ಅಲ್ಲದೆ, ಆಗಾಗ ಅಡುಗೆ ಕೋಣೆಗೆ ಕಾಲಿಡುವ ಪ್ರಮೇಯವೂ ತಪ್ಪುತ್ತದೆ. ಇಂತಹ ಹತ್ತು ಹಲವು ಗ್ಯಾಜೆಟ್‌ಗಳು ತಾಯಿಯ ಕೆಲಸವನ್ನು ಕಡಿಮೆ ಮಾಡುವುದಲ್ಲದೆ, ಸ್ಮಾರ್ಟ್ ಕೂಡ ಆಗಿಸುತ್ತದೆ. ಇದರಿಂದ ಹೆಚ್ಚಿನ ದೈಹಿಕ, ಮಾನಸಿಕ ಒತ್ತಡ ನಿವಾರಣೆಗೆ ನೆರವಾಗುತ್ತದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಬಹುಪದೋಕ್ತಿಯ ಶೂನ್ಯತೆ ಹಾಗೂ ಸಹ ಗುಣಕಗಳ ನಡುವಿನ ಸಂಬಂಧ

ಗಣಿತ

ಎಸ್ಸೆಸ್ಸೆಲ್ಸಿ

ಸಾಮಾನ್ಯವಾಗಿ a* ಮತ್ತು β * ಗಳು ವರ್ಗ ಬಹುಪದೋಕ್ತಿ $p(x) = ax^2 + bx + c,\ a \neq 0$ ಯ ಶೂನ್ಯಗಳಾಗಿದ್ದರೆ, (x-a) ಮತ್ತು $(x-\beta)$ ಗಳು p(x) ದ ಅಪವರ್ತನಗಳಾಗಿರುತ್ತವೆ ಎಂಬುದನ್ನು ನೀವು ತಿಳಿದಿದ್ದೀರಿ.

$ax^2 + bx + c = k(x-a)(x-\beta)$ಇಲ್ಲಿ k ಎಂಬುದು ಸ್ಥಿರಾಂಕವಾಗಿದೆ.

$$= k(x2 - (\alpha+\beta)x + \alpha\beta)$$

$$= k(x^2 - k(\alpha+B)x + k\alpha\beta$$

ಎರಡೂ ಬದಿಗಳಲ್ಲಿನ ಸಹಗುಣಕಗಳನ್ನು ಮತ್ತು ಸ್ಥಿರಾಂಕಗಳನ್ನು ಹೋಲಿಸಿದಾಗ,

$$a = k,\ b = -k(\alpha+\beta)\ and\ c = k\alpha\beta$$

$$\alpha+\beta = \frac{-b}{a}$$

$$\alpha\beta = \frac{c}{a}$$

ಅಂದರೆ, ಶೂನ್ಯತೆಗಳ ಮೊತ್ತ $= \alpha+\beta = \frac{-b}{a} = \frac{\text{x ದ ಸಹಗುಣಕ}}{x^2 \text{ ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ $= \alpha\beta = \frac{c}{a} = \frac{\text{ಸ್ಥಿರಾಂಕ}}{x^2 \text{ ದ ಸಹಗುಣಕ}}$

ಸರಳ ರೇಖಾತ್ಮಕ ಬಹುಪದೋಕ್ತಿ $\emptyset p(x) = ax + b$ ಯ ಶೂನ್ಯತೆ $\frac{-b}{a}$ ಆಗಿದೆ. ಇದು ಬಹುಪದೋಕ್ತಿಯ ಶೂನ್ಯತೆ ಹಾಗೂ ಸಹಗುಣಕದ ಸಂಬಂಧವಾಗಿದೆ.

ಇದೇ ರೀತಿಯಲ್ಲಿ α, β, γ ಗಳು ಎಂಬ $ax^3 + bx^3 + cx + d$ ಘನ ಬಹುಪದೋಕ್ತಿಯ ಶೂನ್ಯತೆಗಳಾದರೆ ಆಗ,

$$\alpha+\beta+\gamma = \frac{-b}{a}$$

$$\alpha\beta+\beta\gamma+\gamma\alpha = \frac{c}{a}$$

$$\alpha\beta\gamma \frac{-d}{a}$$

ಉದಾಹರಣೆ: $x^2 + 7x + 10$ ಎಂಬ ವರ್ಗ ಬಹುಪದೋಕ್ತಿಯ ಶೂನ್ಯತೆಗಳನ್ನು ಕಂಡುಹಿಡಿಯಿರಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಿಳಿಸಿ.

ಪರಿಹಾರ: $x^2 + 7x + 10 = x^2 + 5x + c = 2x + 10$

$$= x(x+5) + 2(x+5)$$

$$= (x+2)(x+5)$$

$x + 2 = 0$ ಅಥವಾ $x + 5 = 0$ ಆದಾಗ, ಅಂದರೆ $x = -2$ ಅಥವಾ $x = -5$ ಆದಾಗ $x^2 + 7x + 10$ ಬೆಲೆಯು ಸೊನ್ನೆಯಾಗುತ್ತದೆ. ಆದ್ದರಿಂದ -2 ಮತ್ತು -5 ಇವು $x^2 + 7x + 10$ ರ ಶೂನ್ಯತೆಗಳಾಗಿವೆ.

ಈಗ ಶೂನ್ಯತೆಗಳ ಮೊತ್ತ $= (-2) + (-5) = -7$

$$= \frac{-(-1)}{1} = -\frac{\text{(x) ದ ಸಹಗುಣಕ}}{x^2\text{ದ ಸಹಗುಣಕ}}$$

ಶೂನ್ಯತೆಗಳ ಗುಣಲಬ್ಧ

$$= (-2)\times) - 5_ = 10 = \frac{10}{1} = \frac{\text{ಸ್ಥಿರಾಂಕ}}{x^2\text{ದ ಸಹ ಗುಣಕ}}$$

ಉದಾಹರಣೆ: 3, -1 ಮತ್ತು $\frac{-1}{3}$ ಇವು $p(x) = 3x^2 - 5x^2 - 11x - 3$ ಎಂಬ ಘನ ಬಹುಪದೋಕ್ತಿಯ ಶೂನ್ಯತೆಗಳಾಗಿವೆಯೇ? ಪರೀಕ್ಷಿಸಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಿಳಿಸಿ.

ಪರಿಹಾರ: ದತ್ತ ಬಹುಪದೋಕ್ತಿಯನ್ನು $ax^3 + bx^2 + cx + d$ ಯೊಂದಿಗೆ ಹೋಲಿಸಿದಾಗ

$$a = 3,\ b = -5,\ c = -11,\ d = -3$$

$$p(x) = 3(3)^3 - 5(3)^2 - 11(3) - 3$$

$$p(3) = 81 - 45 - 33 - 3$$

$$p(-1) = 3(-1)3 - 5(-1)^2 - 11(-1) - 3$$

$$= -3 - 5 + 11 - 3$$

$$= 0$$

$$p\left(\frac{-1}{3}\right) = 3\left(\frac{-1}{3}\right)^3 = 5\left(\frac{-1}{3}\right)^2 - 11\left(\frac{-1}{3}\right) - 3$$

$$= -\frac{1}{9} - \frac{5}{9} + \frac{11}{3} - 3$$

$$= -\frac{2}{3} + \frac{2}{3}$$

$$= o$$

3,–1 ಮತ್ತು $\frac{-1}{3}$ ಇವು $3x^2 - 5x^2 - 11x - 3$ ರ ಶೂನ್ಯಗಳಾಗಿವೆ. ಆದ್ದರಿಂದ ಈಗ $\alpha = 3, \beta = -1$ ಮತ್ತು $\gamma = \frac{-1}{3}$ ಎಂದು ತೆಗೆದುಕೊಂಡಾಗ

$$\alpha+\beta+\gamma = 3 + (-1) + \left(\frac{-1}{3}\right) = 2\ \frac{-1}{3} = \frac{5}{3} = \frac{(-5)}{3} = \frac{-b}{a}$$

$$\alpha\beta+\beta\gamma+\gamma a = (3)(-1) + (-1)\times\left(\frac{-1}{3}\right) + \left(\frac{-1}{3}\right)(3)$$

$$= -3 + \frac{1}{3} - 1 = \frac{-11}{3} = \frac{c}{a}$$

$$\alpha\beta\gamma = (3)\times(-1)\times\left(\frac{-1}{3}\right) = 1 = \frac{-(-1}{3} = \frac{-d}{a}$$

(ಮುಂದುವರಿಯುವುದು)

ಹ್ಯಾಲೋಜನ್‌ನ ವಿನಿಮಯ: ರಾಸಾಯನಿಕ ಕ್ರಿಯೆಗಳು

ರಸಾಯನಶಾಸ್ತ್ರ

ದ್ವಿತೀಯ ಪಿಯುಸಿ


ಹ್ಯಾಲೋ ಆಲ್ಕೇನ್‌ಗಳ ಕ್ರಿಯೆಗಳು

ಹ್ಯಾಲೋ ಆಲ್ಕೇನ್‌ಗಳ ಕ್ರಿಯೆಗಳನ್ನು ಈ ಕೆಳಗಿನ ಗುಂಪುಗಳಾಗಿ ವಿಂಗಡಿಸಬಹುದು.

- ನ್ಯೂಕ್ಲಿಯೋಕಾಂಕ್ಷಿ ಆದೇಶ್ಯ ಕ್ರಿಯೆಗಳು
- ವರ್ಜ್ಯನ ಕ್ರಿಯೆಗಳು
- ಲೋಹಗಳೊಂದಿಗಿನ ಕ್ರಿಯೆಗಳು
- ನ್ಯೂಕ್ಲಿಯೋಕಾಂಕ್ಷಿ ಆದೇಶ್ಯ ಕ್ರಿಯೆಗಳು

ಈ ಆದೇಶ್ಯ ಕ್ರಿಯೆಯು ನ್ಯೂಕ್ಲಿಯೋಕಾಂಕ್ಷಿಯಿಂದ ಪ್ರಾರಂಭಗೊಳ್ಳುವುದರಿಂದ ಇದನ್ನು ನ್ಯೂಕ್ಲಿಯೋಕಾಂಕ್ಷಿ ಆದೇಶ್ಯ ಎನ್ನುವರು.

ಈ ಬಗೆಯ ಕ್ರಿಯೆಯಲ್ಲಿ ನ್ಯೂಕ್ಲಿಯೋಕಾಂಕ್ಷಿಯ ಭಾಗಶಃ ಧನಾವೇಶವನ್ನು ಹೊಂದಿದ ಹ್ಯಾಲೋಜನ್‌ನೊಂದಿಗೆ ಬಂಧಿಸಿರುವ ಕಾರ್ಬನ್ ಪರಮಾಣು ಮೇಲೆ ವರ್ತಿಸುತ್ತದೆ. ಆದೇಶ್ಯ ಕ್ರಿಯೆಯಾದಂತೆ ನಿರ್ಗಮಿಸುವ ಹ್ಯಾಲೋಜನ್ ಪರಮಾಣು, ಹ್ಯಾಲೈಡ್ ಅಯಾನ್ ಆಗಿ ಹೊರಹೋಗುತ್ತದೆ.




ಇದೊಂದು ಆಲ್ಕೈಲ್ ಹ್ಯಾಲೈಡ್‌ಗಳ ಅತ್ಯಂತ ಉಪಯುಕ್ತ ಸಾವಯವ ರಾಸಾಯನಿಕ ಕ್ರಿಯೆಯ ಬಗೆಯಾಗಿದ್ದು, ಇದರಲ್ಲಿ ಹ್ಯಾಲೋಜನ್ ಪರಮಾಣು ಸಂಕರಣ ಕಾರ್ಬನ್‌ನೊಂದಿಗೆ ಬಂಧಿಸಿದೆ.

ಕ್ರಿಯಾತಂತ್ರ (reaction mechanism)

ಈ ಕ್ರಿಯೆಯು ಎರಡು ವಿಭಿನ್ನ ಕ್ರಿಯಾತಂತ್ರವನ್ನು ಅನುಸರಿಸುವಂತೆ ಕಂಡುಬಂದಿದ್ದು, ಅವುಗಳನ್ನು ಕೆಳಗೆ ವಿವರಿಸಲಾಗಿದೆ.

ಎ) ದ್ವೈ ಆಣ್ವಿಕ ನೂಕ್ಲಿಯೋಕಾಂಕ್ಷಿಯ ಆದೇಶ್ಯ ಕ್ರಿಯೆ: S_N2 ಕ್ರಿಯೆಯ ದರವು ಎರಡು ಕ್ರಿಯಾಕಾರಿಗಳ ಸಾರತೆಯನ್ನು ಅವಲಂಬಿಸಿದೆ.

CH3Cl ಮತ್ತು ಹೈಡ್ರೋಕ್ಸೈಡ್ ಅಯಾನ್‌ನ ನಡುವೆ ಜರುಗುವ ಕ್ರಿಯೆಯಲ್ಲಿ ಮಿಥೇನಾಲ್ ಮತ್ತು ಕ್ಲೋರೈಡ್ ಅಯಾನ್ ಉಂಟಾಗುವುದರಿಂದ ಇದು ದ್ವಿತೀಯ ಕ್ರಿಯಾವರ್ಗವನ್ನು ಅನುಸರಿಸುತ್ತದೆ.



ಇದು ದ್ವೈ ಅಣ್ವಿಕ ನ್ಯೂಕ್ಲಿಯೋಕಾಂಕ್ಷಿಯ ಸ್ಥಾನಪಲ್ಲಟ S_N2 ಕ್ರಿಯೆಯನ್ನು ವಿವರಿಸುತ್ತದೆ.

ಒಳಬರುವ ನ್ಯೂಕ್ಲಿಯೋಕಾಂಕ್ಷಿ ಮತ್ತು ಆಲ್ಕೈಲ್ ಹ್ಯಾಲೈಡ್ ಪರಸ್ಪರ ಪ್ರತಿಕ್ರಿಯಿಸಿದಾಗ ಕಾರ್ಬನ್-ಹ್ಯಾಲೈಡ್ ಬಂಧ ವಿಭಜನೆಯಾಗಿ ಕಾರ್ಬನ್ ಬಂಧ –OH ಉಂಟಾಗುತ್ತದೆ.

ಈ ಎರಡೂ ಪ್ರಕ್ರಿಯೆಗಳು ಏಕಕಾಲದಲ್ಲಿ ಒಂದೇ ಹಂತದಲ್ಲಿ ನಡೆಯುವುದರಿಂದ ಮಧ್ಯಂತರಕಗಳು ಉಂಟಾಗುವುದಿಲ್ಲ. ಕ್ರಿಯೆ ಮುಂದುವರಿಯುವಂತಿರುವಂತೆ ನ್ಯೂಕ್ಲಿಯೋಕಾಂಕ್ಷಿ ಮತ್ತು ಕಾರ್ಬನ್ ನಡುವೆ ಬಂಧ ಉಂಟಾಗುವುದರಿಂದ ಕಾರ್ಬನ್ ಪರಮಾಣು ಮತ್ತು ಹೊರಹೋಗುವ ಗುಂಪಿನ ನಡುವಿನ ಬಂಧವು ದುರ್ಬಲವಾಗುವುದು.

ಹೊರ ಹೋಗುವ ಗುಂಪು ಕಾರ್ಬನ್ ಪರಮಾಣುವನ್ನು ಜೋರಾಗಿ ತಳ್ಳುವುದು.

ಪರಿಣಾಮವಾಗಿ, ಉಂಟಾಗುವ ಉತ್ಪನ್ನದಲ್ಲಿ ಕಾರ್ಬನ್ ವಿಲೋಮ ವಿನ್ಯಾಸವನ್ನು ಪಡೆಯುತ್ತದೆ. ಈ ಪ್ರಕ್ರಿಯೆಯನ್ನು 'ವಿಲೋಮ ವಿನ್ಯಾಸ' ಎನ್ನುವರು.

ಸಂಕ್ರಮಣ ಸ್ಥಿತಿಯಲ್ಲಿ ಕಾರ್ಬನ್ ಪರಮಾಣುವು ಒಳಬರುವ ನ್ಯೂಕ್ಲಿಯೋಕಾಂಕ್ಷಿ ಮತ್ತು ಹೊರಹೋಗುವ ಗುಂಪಿನೊಂದಿಗೆ ಏಕಕಾಲದಲ್ಲಿ ಬಂಧಿಸಿರುವುದರಿಂದ ರಚನೆಯು ಅಸ್ಥಿರವಾಗಿದ್ದು ಬೇರ್ಪಡಿಸಲು ಸಾಧ್ಯವಿಲ್ಲ.

ಪ್ರೈಮರಿ ಹ್ಯಾಲೈಡ್ > ಸೆಕೆಂಡರಿ ಹ್ಯಾಲೈಡ್ > ಟರ್ಶರಿ ಹ್ಯಾಲೈಡ್

ಹ್ಯಾಲೋ ಆಲ್ಕೇನ್‌ಗಳ ಕ್ರಿಯಾಕಾರಿತ್ವ ಅನುಕ್ರಮವು ಹೀಗಿದೆ

ಬಿ) ಏಕ ಆಣ್ವಿಕ ನ್ಯೂಕ್ಲಿಯೋಕಾಂಕ್ಷಿಯ ಆದೇಶ್ಯ ಕ್ರಿಯೆ:

S_N1 ಕ್ರಿಯೆಗಳನ್ನು ಸಾಮಾನ್ಯವಾಗಿ ದ್ರವೀಯ ಪ್ರೋಟಿಕ್ ದ್ರಾವಕಗಳಲ್ಲಿ (ನೀರು ಆಲ್ಕೋಹಾಲ್, ಅಸಿಟಿಕ್ ಆಮ್ಲ) ನಡೆಸಲಾಗುವುದು. ಟರ್ಶರಿ ಬ್ಯೂಟೈಲ್ ಬ್ರೊಮೈಡ್ ಮತ್ತು ಹೈಡ್ರಾಕ್ಸೈಡ್ ಅಯಾನ್ ನಡುವಿನ ರಾಸಾಯನಿಕ ಕ್ರಿಯೆಯಲ್ಲಿ ಟರ್ಶರಿ ಬ್ಯೂಟೈಲ್ ಆಲ್ಕೋಹಾಲ್ ಉಂಟಾಗುತ್ತದೆ.


ಇದು ಪ್ರಥಮ ಕ್ರಿಯಾವರ್ಗವನ್ನು ಅನುಸರಿಸುತ್ತದೆ. ಏಕೆಂದರೆ ಕ್ರಿಯಾದರವು ಕೇವಲ ಟರ್ಶರಿ ಬ್ಯೂಟೈಲ್ ಬ್ರೊಮೈಡ್‌ನ ಸಾರತೆಯನ್ನು ಅವಲಂಬಿಸಿದೆ.

$$(CH_3)_3CBr + {}^-OH \rightarrow (CH_3)_3COH + Br^-$$

2-ಬ್ರೋಮೋ 2-ಮಿಥೈಲ್ ಪ್ರೊಪೇನ್ 2-ಮಿಥೈಲ್ ಪ್ರೊಪೇನ್ 2-ಆಲ್

ಈ ಕ್ರಿಯೆಯು ಎರಡು ಹಂತಗಳಲ್ಲಿ ನಡೆಯುವುದು.

ಮೊದಲನೆಯ ಹಂತದಲ್ಲಿ ಕಾರ್ಬನ್-ಬ್ರೊಮೈಡ್ ನಡುವಿನ ದ್ರವೀಯ ಬಂಧ ನಿಧಾನವಾಗಿ ಒಡೆದು, ಕಾರ್ಬೋಕ್ಯಾಟಾಯನ್ ಮತ್ತು ಬ್ರೊಮೈಡ್ ಅಯಾನ್ ಅನ್ನು ಉಂಟುಮಾಡುತ್ತದೆ. ಕಾರ್ಬೋಕ್ಯಾಟ್ಯಾನ್ ಎರಡನೇ ಹಂತದಲ್ಲಿ ನ್ಯೂಕ್ಲಿಯೋಕಾಂಕ್ಷಿಯಿಂದ ಆಕ್ರಮಣಕ್ಕೊಳಪಟ್ಟು ಆದೇಶ್ಯ ಕ್ರಿಯೆಯನ್ನು ಸಂಪೂರ್ಣಗೊಳಿಸುತ್ತದೆ.



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಹೊರ–ಒಳ ಹೊಂದಾಣಿಕೆ ಮತ್ತು ಸುಸಂಗತ್ವ ಇರದವನ ಸಾಧನೆಯು ಮತಾಪು, ಬಾಣ ಬಿರುಸುಗಳಂತೆ ತತ್‌ಕ್ಷಣ ಕಣ್ಣು ಕೋರೈಸಿದರೂ ಅಲ್ಪಾಯುಷಿ. ಆರ್ಭಟಿಸಿದರೂ ಪಟಾಕಿಯ ಬದುಕು ಅರೆಕ್ಷಣವೇ.

-ಕೆ.ಎಸ್.ನಿಸಾರ್ ಅಹಮದ್

ಕೋವಿಡ್ ತಡೆ ಹೋರಾಟಕ್ಕೆ ಬಿಸಿಸಿಐ ಕೈಜೋಡಿಸಲಿ

ಕೋವಿಡ್ ಎರಡನೇ ಅಲೆಯ ಅಟ್ಟಹಾಸಕ್ಕೆ ಇಡೀ ದೇಶ ತತ್ತರಿಸಿದೆ. ಕೊರೊನಾ ಸೋಂಕಿನಿಂದ ಅಮೂಲ್ಯ ಜೀವಗಳನ್ನೂ ಕಳೆದುಕೊಳ್ಳುತ್ತಿದ್ದೇವೆ. ಸಾವಿರಾರು ಮನೆಗಳಲ್ಲಿ ಸೂತಕದ ಛಾಯೆ ಆವರಿಸಿದೆ. ಇಂತಹ ಹೊತ್ತಿನಲ್ಲಿ ದೇಶದ ಜನರೊಂದಿಗೆ ನಿಲ್ಲಬೇಕಿದ್ದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ (ಬಿಸಿಸಿಐ), ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ತಂದುಕೊಡುವ ವರಮಾನವೇ ಮುಖ್ಯವಾಗಿ ಕಂಡಿತ್ತು. ಹೀಗಾಗಿ ಕೋವಿಡ್ ವಿರುದ್ಧದ ಹೋರಾಟದಲ್ಲಿ ಕೈಜೋಡಿಸುವ ಬದಲು, ಆಟಗಾರರ ಜೀವವನ್ನೂ ಅಪಾಯಕ್ಕೆ ಒಡ್ಡಿ ಐಪಿಎಲ್ ಟೂರ್ನಿಯನ್ನು ನಡೆಸುವ ತೀರ್ಮಾನವನ್ನು ಮಾಡಿತ್ತು. ಆದರೆ, ಜೀವಸುರಕ್ಷಾ (ಬಯೊಬಬಲ್) ಪರದೆಯೂ ಹರಿದು ಕೆಲವು ಆಟಗಾರರಿಗೆ ಸೋಂಕು ತಗುಲಿದ್ದರಿಂದ ತಡವಾಗಿ ಎಚ್ಚೆತ್ತುಕೊಂಡ ಬಿಸಿಸಿಐ, ಐಪಿಎಲ್ ಟೂರ್ನಿಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದೆ. ಕೋಲ್ಕತ್ತ ನೈಟ್ ರೈಡರ್ಸ್, ಚೆನ್ನೈ ಸೂಪರ್ ಕಿಂಗ್ಸ್, ಸನ್‌ರೈಸರ್ಸ್ ಹೈದರಾಬಾದ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳ ಆಟಗಾರರು ಮತ್ತು ನೆರವು ಸಿಬ್ಬಂದಿಯಲ್ಲಿ ಕೆಲವರಿಗೆ ಕೋವಿಡ್ ಖಚಿತಪಟ್ಟಿದೆ. ಕೆಟ್ಟ ಮೇಲೆ ಬುದ್ಧಿ ಬಂತು ಎನ್ನುವಂತೆ ಟೂರ್ನಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿರುವುದು ಸ್ವಾಗತಾರ್ಹ. ಐಪಿಎಲ್‌ನಲ್ಲಿ ಆಡುತ್ತಿದ್ದ ಆಸ್ಟ್ರೇಲಿಯಾದ ಆ್ಯಡಂ ಜಂಪಾ, ಆ್ಯಂಡ್ರ್ಯೂ ಟೈ ಮತ್ತು ಕೇನ್ ರಿಚರ್ಡ್ಸನ್ ಅವರು ವಾರದ ಹಿಂದೆ ತಂಡಗಳನ್ನು ತೊರೆದು ಸ್ವದೇಶಕ್ಕೆ ಮರಳಿದ್ದರು. ಆಗಲೇ ಎಚ್ಚೆತ್ತುಕೊಳ್ಳಬೇಕಿದ್ದ ಬಿಸಿಸಿಐಗೆ ₹ 3,300 ಕೋಟಿ ವರಮಾನ ತಂದುಕೊಡುವ ಟೂರ್ನಿಯನ್ನು ಸ್ಥಗಿತಗೊಳಿಸಲು ಕಿಂಚಿತ್ತೂ ಮನಸ್ಸಿರಲಿಲ್ಲ ಎನ್ನುವುದು ವಿದಿತ. ಮಾನವೀಯ ಮೌಲ್ಯಗಳ ತಳಹದಿಯ ಮೇಲೆ ರೂಪುಗೊಂಡ ಹತ್ತು ಹಲವು ಸಂಗತಿಗಳಲ್ಲಿ ಕ್ರೀಡೆಯೂ ಒಂದು. ಅಂತಹ ಮೌಲ್ಯಗಳನ್ನೆಲ್ಲ ಮರೆತು ತನ್ನ ಮೋಜಿನಲ್ಲಿ ತಾನು ಮುಳುಗುವುದು ಬಿಸಿಸಿಐಗೆ ಶೋಭೆ ತರುವಂತಹ ನಡೆಯಾಗಿರಲಿಲ್ಲ. ಮೂರು ವಾರಗಳಿಂದ ದೇಶದಲ್ಲಿ ಸೋಂಕು ಪ್ರಮಾಣ ವೇಗವಾಗಿ ಏರುತ್ತಿದ್ದರೂ ಅತ್ತ ಸ್ವಲ್ಪವೂ ಗಮನಹರಿಸದೆ ಐಪಿಎಲ್‌ನ ಪಂದ್ಯಗಳನ್ನು ನಡೆಸಲು ಜಗತ್ತಿನ ಅತ್ಯಂತ ಸಿರಿವಂತ ಕ್ರೀಡಾ ಮಂಡಳಿಗಳಲ್ಲಿ ಒಂದೆನಿಸಿದ ಬಿಸಿಸಿಐಗೆ ಹೇಗಾದರೂ ಮನಸ್ಸು ಬಂತು? ಉಳಿದಿರುವ ಪಂದ್ಯಗಳನ್ನು ಮುಂದಿನ ದಿನಗಳಲ್ಲಿ ನಡೆಸುವ ಯೋಚನೆಯೂ ಅದಕ್ಕೆ ಇದ್ದಂತಿದೆ. ಆದರೆ ಕ್ರೀಡಾಂಗಣಗಳಲ್ಲಿ ಕಿಕ್ಕಿರಿದ ಜನರೆದುರು ಆಡುವಂತಹ ಪರಿಸ್ಥಿತಿ ಮರಳಿ ಬರುವವರೆಗೂ ಕ್ರಿಕೆಟ್‌ಗೆ ವಿರಾಮ ನೀಡುವುದು ಒಳಿತು. ಹಾಗೆಯೇ ಬಯೊಬಬಲ್ ಒತ್ತಡದಲ್ಲಿ ಆಟಗಾರರನ್ನು ತಳ್ಳುವುದು ಸರಿಯಲ್ಲ.



ಐಪಿಎಲ್ ಟೂರ್ನಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿರುವ ಬಿಸಿಸಿಐ ನಡೆ ಸ್ವಾಗತಾರ್ಹ. ಕೋವಿಡ್ ಹೊಡೆತಕ್ಕೆ ಸಿಲುಕಿ ನಲುಗಿದವರಿಗೆ ನೆರವಾಗಲು ಕ್ರಿಕೆಟ್ ಮಂಡಳಿ ಕಾರ್ಯಪ್ರವೃತ್ತವಾಗಬೇಕು

ಕೋವಿಡ್ ಅಬ್ಬರದ ನಡುವೆಯೂ ಐಪಿಎಲ್ ಟೂರ್ನಿಯನ್ನು ಯಶಸ್ವಿಯಾಗಿ ನಡೆಸಿದ್ದೇವೆ ಎಂದು ಬೆನ್ನುತಟ್ಟಿಕೊಳ್ಳುವ ಕನಸು ಕಾಣುತ್ತಿದ್ದ ಬಿಸಿಸಿಐಗೆ ಹಿನ್ನಡೆಯಾಗಿದೆ ನಿಜ. ಆದರೆ ಜನಮಾನಸದಲ್ಲಿ ಗೌರವ ಮತ್ತು ವಿಶ್ವಾಸ ಗಳಿಸಿಕೊಳ್ಳಲು ಅದು ಈಗ ಕಾರ್ಯಪ್ರವೃತ್ತವಾಗಬೇಕು. ಐಪಿಎಲ್‌ನಿಂದ ಸಿಕ್ಕ ವರಮಾನದಲ್ಲಿ ಒಂದು ಪಾಲನ್ನು ದೇಶದಲ್ಲಿ ಕೋವಿಡ್ ವಿರುದ್ಧದ ಹೋರಾಟಕ್ಕೆ ವಿನಿಯೋಗಿಸಬೇಕು. ಆಮ್ಲಜನಕ ಪೂರೈಕೆ, ಆಸ್ಪತ್ರೆಗಳ ಮೂಲಸೌಕರ್ಯ ಅಭಿವೃದ್ಧಿಯಂತಹ ಕೆಲಸಗಳಿಗೆ ಕೈಜೋಡಿಸಬೇಕು. ಕೋವಿಡ್‌ಪೀಡಿತ ಕುಟುಂಬಗಳಿಗೆ ಆಸರೆಯಾಗಬೇಕು. ಅನಾಥರಾಗಿರುವ ಮಕ್ಕಳ ಶಿಕ್ಷಣ, ಪೋಷಣೆಗೆ ನೆರವಾಗಬೇಕು. ದುಡ್ಡಿನ ಕೊರತೆ ಇಲ್ಲದ ಬಿಸಿಸಿಐಗೆ ಇದಕ್ಕೆ ಇಚ್ಛಾಶಕ್ತಿ ಬೇಕು. ತನ್ನ ಸುಪರ್ದಿಯಲ್ಲಿರುವ ಕ್ರೀಡಾಂಗಣಗಳು ಮತ್ತು ಸೌಲಭ್ಯಗಳನ್ನು ತಾತ್ಕಾಲಿಕ ಐಸೊಲೇಷನ್ ಕೇಂದ್ರಗಳನ್ನಾಗಿ ಪರಿವರ್ತಿಸುವ ಕಾರ್ಯಕ್ಕೆ ಕೈಜೋಡಿಸುವ ಮೂಲಕ ಸಾಮಾಜಿಕ ಹೊಣೆಗಾರಿಕೆಯನ್ನೂ ಸಮರ್ಥವಾಗಿ ನಿಭಾಯಿಸಬೇಕು. ಕ್ರಿಕೆಟ್ ತಾರೆಯರು ಕೂಡ ಒಂದಿಷ್ಟು ದೇಣಿಗೆ ನೀಡಿ ಸುಮ್ಮನಾಗಬಾರದು. ಜನಸಮೂಹದಲ್ಲಿ ಜಾಗೃತಿ ಮೂಡಿಸಬೇಕು. ತಮ್ಮ ಖ್ಯಾತಿ, ವರ್ಚಸ್ಸು ಬಳಸಿಕೊಂಡು ಸರ್ಕಾರಗಳ ಮೇಲೆ ಒತ್ತಡ ಹೇರಿ ಜನರಿಗೆ ಉತ್ತಮ ಚಿಕಿತ್ಸಾ ಸೌಲಭ್ಯಗಳನ್ನು ಕೊಡಿಸಲು ಶ್ರಮಿಸಬೇಕು. ತಾವು ತಾರೆಗಳಾಗಿ ಬೆಳೆಯಲು ಕಾರಣರಾದ ದೇಶದ ಜನರ ಋಣ ತೀರಿಸಬೇಕಾದ ಸಮಯ ಇದು. ಯುವಸಮೂಹದ ನಿಜವಾದ ಐಕಾನ್‌ಗಳಾಗಿ ಆಟಗಾರರು ಕೆಲಸ ಮಾಡಬೇಕು. ಒಲಿಂಪಿಕ್ಸ್‌ನಂತಹ ದೊಡ್ಡ ಕ್ರೀಡಾಕೂಟವೇ ರದ್ದಾಗುವ ಸಾಧ್ಯತೆ ಇರುವ ಕಾಲದಲ್ಲಿ ಐಪಿಎಲ್ ಪಂದ್ಯಗಳನ್ನು ನಿಲ್ಲಿಸಿದ್ದರಲ್ಲಿ ಯಾವ ತಪ್ಪೂ ಇಲ್ಲ. ಅಕ್ಟೋಬರ್‌ನಲ್ಲಿ ಕೋವಿಡ್ ಮೂರನೇ ಅಲೆ ಭಾರತದಲ್ಲಿ ದಾಳಿ ಮಾಡಲಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ. ಆದ್ದರಿಂದ ಅದೇ ಸಂದರ್ಭದಲ್ಲಿ ಭಾರತದಲ್ಲಿ ಆಯೋಜನೆಗೊಳ್ಳಬೇಕಿರುವ ಟಿ20 ವಿಶ್ವಕಪ್ ಟೂರ್ನಿಯ ಕುರಿತು ಬಿಸಿಸಿಐ ಈಗಲೇ ನಿರ್ಧರಿಸುವುದು ಒಳಿತು.

ದಿನದ ಟ್ವೀಟ್

ಶೀಘ್ರ ಪರೀಕ್ಷೆಗೆ ಮುಂದಾಗಿ



ಕೋವಿಡ್ ಪರೀಕ್ಷೆಯು ನಿಮ್ಮ ಅಂತಸ್ತನ್ನೇನೂ ಕಡಿಮೆ ಮಾಡುವುದಿಲ್ಲ. ನಿಮಗೆ ಜ್ವರ ಇದ್ದರೆ ಪರೀಕ್ಷೆ ಮಾಡಿಸಿಕೊಂಡು ಬೇಗ ಚಿಕಿತ್ಸೆ ಪಡೆಯಿರಿ. ಇದರಿಂದ ಕೂಡಲೇ ಗುಣಮುಖರಾಗುತ್ತೀರಿ ಮತ್ತು ಅದಕ್ಕಾಗಿ ಕೆಲವು ಸಾವಿರ ರೂಪಾಯಿಗಳಷ್ಟೇ ನಿಮಗೆ ಖರ್ಚಾಗುತ್ತದೆ. ಒಂದೊಮ್ಮೆ ನಿಮ್ಮ ಆಮ್ಲಜನಕದ ಮಟ್ಟವೇನಾದರೂ ಶೇ 80ಕ್ಕೆ ಕುಸಿದರೆ– ನಿಮ್ಮ ಜೇಬಿನಲ್ಲಿ ಸಾಕಷ್ಟು ಹಣವಿದ್ದರೂ– ಯಾವ ಖಾಸಗಿ ಆಸ್ಪತ್ರೆಯೂ ನಿಮ್ಮನ್ನು ದಾಖಲಿಸಿಕೊಳ್ಳುವುದಿಲ್ಲ.

ಪ್ರಶಾಂತ್ ರಂಗಸ್ವಾಮಿ, ತಮಿಳುನಾಡು ನಾಗರಿಕ

25 ವರ್ಷಗಳ ಹಿಂದೆ

ಭಾನುವಾರ, 5-5-1996

- **ಕಾಂಗ್ರೆಸ್‌ನಲ್ಲಿ ಬಿರುಗಾಳಿಯಾಗುತ್ತಿರುವ ನಾಯಕತ್ವ ಪ್ರಶ್ನೆ**

ನವದೆಹಲಿ, ಮೇ 4– ಲೋಕಸಭೆ ಚುನಾವಣೆ ಮುಗಿಯುವ ದಿನ ಹತ್ತಿರವಾಗುತ್ತಿದ್ದಂತೆ ಕಾಂಗ್ರೆಸ್ ಪಕ್ಷದಲ್ಲಿ ಪಕ್ಷದ ನಾಯಕತ್ವದ ಬಗೆಗೆ ಅಪಸ್ವರಗಳು ಕೇಳಿಬರಲು ಪ್ರಾರಂಭವಾಗಿರುವುದರಿಂದ, ಪಕ್ಷ ಅಧಿಕಾರಕ್ಕೆ ಬರಲಿ ಅಥವಾ ಬಾರದಿರಲಿ ನಾಯಕತ್ವದ ಬದಲಾವಣೆಯ ಪ್ರಶ್ನೆ ಒಂದು ಪ್ರಮುಖ ವಿವಾದವಾಗಲಿರುವ ಬೆಳವಣಿಗೆ ಸ್ಪಷ್ಟವಾಗಿ ಕಾಣುತ್ತಿದೆ.

ಕಾಂಗ್ರೆಸ್ ಪಕ್ಷವು ಮತ್ತೆ ಅಧಿಕಾರಕ್ಕೆ ಬರಲಿದ್ದು, ಪಕ್ಷದ ಅಧ್ಯಕ್ಷ ಸ್ಥಾನ ಮತ್ತು ಪ್ರಧಾನಿ ಸ್ಥಾನವನ್ನು ಬೇರ್ಪಡಿಸುವ ಕಾಲವೀಗ ಬಂದಿದೆ ಎಂದು ಪಕ್ಷದ ಹಿರಿಯ ನಾಯಕ ಮತ್ತು ಕೇಂದ್ರ ಕೈಗಾರಿಕಾ ಸಚಿವ ಕೆ.ಕರುಣಾಕರನ್ ಅವರು ವ್ಯಕ್ತಪಡಿಸಿರುವ ಅಭಿಪ್ರಾಯ ಈಗ ಪಕ್ಷದ ವಲಯದಲ್ಲಿ ಬಿಸಿ ಬಿಸಿ ಚರ್ಚೆಗೆ ಅವಕಾಶ ನೀಡಿದೆ. ನರಸಿಂಹ ರಾವ್ ನಾಯಕತ್ವ ಮುಂದುವರಿಯುವ ಬಗೆಗೆ ಅವರು ಶಂಕೆ ವ್ಯಕ್ತಪಡಿಸಿದ್ದಾರೆ.

- **ಚೀನಾ ರೇಷ್ಮೆ ತಡೆಗೆ ರಾಜ್ಯ ಕಾನೂನು ತಿದ್ದುಪಡಿ: ಸಚಿವರ ಘೋಷಣೆ**

ಬೆಂಗಳೂರು, ಮೇ 4– ಭಾರೀ ಪ್ರಮಾಣದಲ್ಲಿ ಕಾನೂನುಬದ್ಧವಾಗಿ ಹಾಗೂ ಕಾನೂನುಬಾಹಿರವಾಗಿ ರಾಜ್ಯದೊಳಕ್ಕೆ ಪ್ರವೇಶಿಸುತ್ತಿರುವ ‘ಚೀನಾ ರೇಷ್ಮೆ’ಯಿಂದ ರಾಜ್ಯ ರೇಷ್ಮೆ ಉದ್ಯಮಕ್ಕೆ ಆಗುತ್ತಿರುವ ಆಘಾತವನ್ನು ತಪ್ಪಿಸಲು, ಸದ್ಯ ಇರುವ ಕಾಯ್ದೆಗೆ ತಿದ್ದುಪಡಿ ತರುವ ಬಗ್ಗೆ ರಾಜ್ಯ ಸರ್ಕಾರ ಆಲೋಚಿಸುತ್ತಿದೆ ಎಂದು ಸಚಿವ ನಾಗರಾಜಯ್ಯ ತಿಳಿಸಿದರು.

50 ವರ್ಷಗಳ ಹಿಂದೆ

ಬುಧವಾರ, 5-5-1971

- **ನಿರುದ್ಯೋಗಿ ಎಂಜಿನಿಯರ್ ತರಬೇತಿ ಕೇಂದ್ರ: ಸಣ್ಣ ಕೈಗಾರಿಕೆ ಸೇವಾ ವ್ಯವಸ್ಥೆಯಿಂದ ಸ್ಥಾಪನೆ**

ಬೆಂಗಳೂರು, ಮೇ 4– ಕೃಷಿ ಯಂತ್ರೋಪಕರಣಗಳ ದುರಸ್ತಿ ಮುಂತಾದ ಸೇವೆಗಾಗಿ ಕೇಂದ್ರಗಳನ್ನು ಸ್ಥಾಪಿಸಲು ನಿರುದ್ಯೋಗಿ ಎಂಜಿನಿಯರುಗಳು ಮತ್ತು ಡಿಪ್ಲೊಮಾದವರಿಗೆ ತರಬೇತಿಯನ್ನು ನಗರದಲ್ಲಿರುವ ಸಣ್ಣ ಕೈಗಾರಿಕೆ ಸೇವಾ ಸಂಸ್ಥೆಯು ನೀಡಲಿದೆ.

ಕಾಲಕ್ರಮೇಣ ಕೃಷಿ ಕ್ಷೇತ್ರದಲ್ಲಿ ಯಂತ್ರ ಬಳಕೆ ಹೆಚ್ಚುತ್ತಿರುವುದರಿಂದ ಸೇವಾ ಕೇಂದ್ರಗಳು ಅಗತ್ಯವಾಗಿದ್ದು, ಮುಂದಿನ ತಿಂಗಳಿಂದ ತರಬೇತಿ ನೀಡಲಾಗುವುದೆಂದು ಸಂಸ್ಥೆ ತಿಳಿಸಿದೆ.

- **ಯೋಜನಾ ಆಯೋಗ ವಿಸರ್ಜನೆ ಇಲ್ಲ: ಶೀಘ್ರವೇ ಪುನರ್‌ರಚನೆ– ಪ್ರಧಾನಿ ಸ್ಪಷ್ಟನೆ**

ನವದೆಹಲಿ, ಮೇ 4– ಯೋಜನಾ ಆಯೋಗವನ್ನು ವಿಸರ್ಜನೆ ಮಾಡುವುದಿಲ್ಲ, ಯೋಜನೆ ಸಚಿವ ಶ್ರೀ ಸಿ.ಸುಬ್ರಹ್ಮಣ್ಯಂ ಅವರು ವಿದೇಶ ಪ್ರವಾಸದಿಂದ ಹಿಂದಿರುಗಿದ ಕೂಡಲೇ ಅದನ್ನು ಪುನರ್ ರಚಿಸಲಾಗುವುದೆಂದು ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ಹೇಳಿದರು.

ಮಹಾಭಾರತದಲ್ಲಿರುವ ಕ್ಷಾಮದ ವರ್ಣನೆ, ಇಂದಿನ ಕೊರೊನಾದ ದುರಂತದ ಚಿತ್ರಗಳನ್ನೇ ನೆನಪಿಸುವಂತಿದೆ

ಕೊರೊನಾ ಮತ್ತು ಸುಲಿಗೆಯೆಂಬ ಯಾಗ



ವಿಶ್ಲೇಷಣೆ

ಟಿ.ಎನ್.ವಾಸುದೇವಮೂರ್ತಿ

ಅನಾರೋಗ್ಯಕರ ವಾತಾವರಣದಲ್ಲಿ ಮನುಷ್ಯನ ಶರೀರವಷ್ಟೇ ಅಲ್ಲ ಅವನ ಮನಸ್ಸು, ಬುದ್ಧಿ, ಚಾರಿತ್ರ್ಯಗಳೂ ರೋಗಗ್ರಸ್ತವಾಗಬಲ್ಲವು, ಭ್ರಷ್ಟವಾಗಬಲ್ಲವು ಎಂಬ ಸಂದೇಶವನ್ನು ಕೊರೊನಾದಂತಹ ದುರ್ಭಿಕ್ಷದ ಕಾಲಮಾನವು ನೀಡಿದೆ. ಇದಕ್ಕೆ ವೈದ್ಯಕೀಯ ಸೇವೆಯ ದಂಧೆ, ಔಷಧೋದ್ಯಮದ ಧನದಾಹಿತನ, ಲಜ್ಜೆಗೇಡು ಚುನಾವಣೆಗಳು ಮತ್ತು ಚುನಾವಣಾ ಪ್ರಚಾರಗಳು (ಉತ್ತರ ಪ್ರದೇಶದಲ್ಲಿ 577 ಶಿಕ್ಷಕರು ಹಾಗೂ ಗುಜರಾತ್‌ನಲ್ಲಿ 137 ಶಿಕ್ಷಕರು ಪಂಚಾಯಿತಿ ಚುನಾವಣಾ ಕರ್ತವ್ಯ ನಿರ್ವಹಿಸಿ ಕೋವಿಡ್‌ನಿಂದ ಮೃತರಾಗಿದ್ದಾರೆ ಎಂಬ ವರದಿಗಳಿವೆ), ಕೋವಿಡ್ ಪಿಡುಗನ್ನು ಉಲ್ಬಣಿಸಬಲ್ಲ ಕುಂಭಮೇಳದಂಥ ಮೇಳಗಳು ಇವೆಲ್ಲ ವರ್ತಮಾನದ ಜೀವಂತ ಉದಾಹರಣೆಗಳಾಗಿವೆ.

ಭ್ರಷ್ಟತನವು ಪ್ರಕೃತಿವಿಕೋಪಕ್ಕೆ ಜನ್ಮ ನೀಡುತ್ತದೋ ಅಥವಾ ಪ್ರಕೃತಿವಿಕೋಪವು ಭ್ರಷ್ಟತನಕ್ಕೆ ಜನ್ಮ ನೀಡುತ್ತದೋ ಎಂಬ ಪ್ರಶ್ನೆ ಬೀಜ-ವೃಕ್ಷ ನ್ಯಾಯದಷ್ಟೇ ಜಟಿಲವಾದುದು. 1934ರ ಬಿಹಾರ ಭೂಕಂಪದ ಸಮಯದಲ್ಲಿ ಗಾಂಧೀಜಿ ಮತ್ತು ಕವಿ ರವೀಂದ್ರರ ನಡುವೆ ಈ ಪ್ರಶ್ನೆ ತೀವ್ರವಾಗಿ ಚರ್ಚೆಯಾಗಿತ್ತು. ಕಾರಣವೇನೇ ಇರಲಿ, ವಿಕೋಪಗಳು- ಮನುಷ್ಯಕೃತ ವಿಕೋಪ ಇರಬಹುದು ಅಥವಾ ಪ್ರಕೃತಿದತ್ತ ವಿಕೋಪವಿರಬಹುದು- ಪ್ರತಿಸಲ ನಮ್ಮ ಅಂತರಂಗದಲ್ಲಿ ಮನೆಮಾಡಿರುವ ಕೊಳಕನ್ನು, ಭ್ರಷ್ಟತೆಯನ್ನು ಅನಾವರಣ ಮಾಡುತ್ತವೆ.

ಇತಿಹಾಸದಲ್ಲಿ ಇಂತಹ ಹಲವು ದುರ್ಭಿಕ್ಷಗಳು ಸಂಭವಿಸಿವೆ ಮತ್ತು ಭವಿಷ್ಯದಲ್ಲೂ ಸಂಭವಿಸಲಿವೆ. ತ್ರೇತಾಯುಗ ಅಂತ್ಯಗೊಂಡು ದ್ವಾಪರಯುಗ ಪ್ರಾರಂಭವಾದಾಗ ಹನ್ನೆರಡು ವರ್ಷಗಳ ಕಾಲ ಭೀಕರವಾದ ಕ್ಷಾಮ ಉಂಟಾಗಿತ್ತಂತೆ. ಮಹಾಭಾರತದಲ್ಲಿ ಉಲ್ಲೇಖಗೊಂಡಿರುವ ಆ ಕ್ಷಾಮದ ವರ್ಣನೆ ಇಂದಿನ ಕೊರೊನಾದ ದುರಂತದ ಚಿತ್ರಗಳನ್ನೇ ನೆನಪಿಸುತ್ತದೆ:

ಹನ್ನೆರಡು ವರ್ಷಗಳ ಅವಧಿಯಲ್ಲಿ ಒಂದೇ ಒಂದು ಹನಿ ಮಳೆ ಬೀಳಲಿಲ್ಲ. ಬಾವಿ, ಕೆರೆ, ನದಿಗಳ ಜಲಮೂಲವೆಲ್ಲ ಬತ್ತಿ ಹೋದವು. ಜನ ಕೃಷಿ ಮತ್ತು ಹೈನುಗಾರಿಕೆಯನ್ನು ಬಿಟ್ಟರು, ನಗರ ಪ್ರದೇಶಗಳಲ್ಲಿ ವ್ಯಾಪಾರ ವಹಿವಾಟುಗಳು ಪೂರ್ತಿಯಾಗಿ ನಿಂತು ಹೋದವು. ಎಲ್ಲಿ ನೋಡಿದರಲ್ಲಿ ರಾಶಿ ರಾಶಿ ಹೆಣಗಳು, ಮೂಳೆಯ ರಾಶಿಗಳು ಪರ್ವತೋಪಾದಿಯಲ್ಲಿ ಬಿದ್ದಿದ್ದವು. ಕಂಗೆಟ್ಟ ಜನ ಹೆಣಗಳ ವಸ್ತ್ರಾಭರಣಗಳನ್ನು ಕದಿಯುತ್ತಿದ್ದರು. ನಗರಗಳು ಮತ್ತು ವಸತಿ ಪ್ರದೇಶಗಳು ಜನರಿಲ್ಲದೇ ಖಾಲಿಯಾಗಿ ಬಿಕೋ ಎನ್ನುತ್ತಿದ್ದವು. ದೇವಸ್ಥಾನಗಳು ಮತ್ತು ಪೂಜಾಸ್ಥಳಗಳು ಜನರಿಂದ ಪರಿತ್ಯಕ್ತವಾದವು. ಭೂಮಿ ತನ್ನ ಜೀವಕಳೆ ಕಳೆದುಕೊಂಡು ಪ್ರೇತವನದ ರೂಪ ತಳೆಯಿತು.

ಸರಿ-ತಪ್ಪುಗಳ ವಿವೇಚನೆ ಯಾರೊಬ್ಬರಿಗೂ ಇರಲಿಲ್ಲ. ಜನ ಹಸಿವಿನಿಂದ ಕಂಗೆಟ್ಟು ತಮ್ಮ ಮಾನವೀಯ ಸಂವೇದನೆಯನ್ನೇ ಕಳೆದುಕೊಂಡರು; ಒಬ್ಬರನ್ನೊಬ್ಬರು ತಿನ್ನಲಾರಂಭಿಸಿದರು. ಅರಣ್ಯವಾಸಿಗಳಾದ ಋಷಿಗಳು ತಮ್ಮ ತಪೋಕರ್ಮವನ್ನು ಪರಿತ್ಯಜಿಸಿ ಆಹಾರಕ್ಕಾಗಿ ಕಾಡು ಮೇಡುಗಳಲ್ಲಿ ಅಲೆದಾಡಲಾರಂಭಿಸಿದರು (ಮಹಾಭಾರತ, ಶಾಂತಿ ಪರ್ವ, 141ನೇ ಸರ್ಗ).

ಇಂದಿನ ಪರಿಸ್ಥಿತಿಯೂ ಹೆಚ್ಚು ಕಡಿಮೆ ಇದೇ ರೀತಿಯಲ್ಲಿದೆ. ವಿಕೋಪದಿಂದ ಜಲಮೂಲಗಳು ಬತ್ತಿ ಹೋಗುವುದು ಹಾಗಿರಲಿ, ಉಸಿರಾಡುವ ಆಮ್ಲಜನಕಕ್ಕೂ ಇಂದು ತತ್ವಾರ ಉಂಟಾಗಿದೆ. ದೇಶದಾದ್ಯಂತ ಚಿತಾಗಾರಗಳೆದುರು ಸಾಲುಗಟ್ಟಿ ಮಲಗಿರುವ ಹೆಣಗಳು ದ್ವಾಪರಯುಗದ ಹೆಣದ ರಾಶಿಯನ್ನೇ ನೆನಪಿಸುತ್ತವೆ. ನಗರ ಪ್ರದೇಶಗಳ ಸ್ಥಿತಿವಂತರು ಹಾಗೆಯೇ ಕೂಲಿ ಕಾರ್ಮಿಕರು ಹಳ್ಳಿಗಳತ್ತ ಗುಳೆ ಹೋಗುತ್ತಿರುವುದು, ದೇವಾನುದೇವತೆಗಳು ನಾಗರಿಕ ಮನುಷ್ಯರ ವಿಕಾರವಾದ ಮುಖಗಳನ್ನು ನೋಡಲು ನಿರಾಕರಿಸಿರುವರೇನೋ ಎಂಬಂತೆ ದೇವಸ್ಥಾನ, ಚರ್ಚು, ಮಸೀದಿ, ಪೂಜಾ ಮಂದಿರಗಳು ಬಾಗಿಲು ಜಡಿದುಕೊಂಡಿರುವುದು, ಆಂಬುಲೆನ್ಸ್, ಆಟೊರಿಕ್ಷಾ ಚಾಲಕರುಗಳಿಂದ ಹಿಡಿದು ಅಂತ್ಯಕ್ರಿಯೆ ನೆರವೇರಿಸುವ ಪುರೋಹಿತರವರೆಗೆ ಪ್ರತಿಯೊಂದು ವೃತ್ತಿಯವರೂ ಸರಿತಪ್ಪುಗಳ ವಿವೇಚನೆ ಇಲ್ಲದೇ ಸಂತ್ರಸ್ತರ ಸುಲಿಗೆಗೆ ಇಳಿದಿರುವುದು ಇವೆಲ್ಲ ಇತಿಹಾಸದ ಪುನರಾವರ್ತನೆಯೇ ಆಗಿವೆ.

ಭ್ರಷ್ಟಾಚಾರವೆಂಬುದು ಆರ್ಥಿಕ ಅಪರಾಧಕ್ಕೆ ಮಾತ್ರ ಸೀಮಿತವಾದ ಸಂಗತಿಯಲ್ಲ. ಅದು ನಮ್ಮದೇ ಅಂತರಂಗದ ಒಂದು ಸ್ವಭಾವವಾಗಿದ್ದು, ಆಪತ್ತಿನ ಸಂದರ್ಭದಲ್ಲಿ ವ್ಯಕ್ತವಾಗುತ್ತದೆ. ಸಾಮಾಜಿಕ ಮಾಧ್ಯಮಗಳಲ್ಲಿ ದ್ವೇಷ, ಅಸಹಿಷ್ಣುತೆಗಳನ್ನು ಕಾರಿಕೊಳ್ಳುವುದು, ಸೈದ್ಧಾಂತಿಕ ಭಿನ್ನಾಭಿಪ್ರಾಯವುಳ್ಳವರ ಸಾವನ್ನು ಸಂಭ್ರಮಿಸುವುದು, ಆತಂಕಕ್ಕೆ ಒಳಗಾದವರನ್ನು ಸಾಂತ್ವನಗೊಳಿಸಬೇಕಾದ ಮಾಧ್ಯಮಗಳು ವಸ್ತುಸ್ಥಿತಿಯನ್ನು ಅತಿರಂಜಿತಗೊಳಿಸುವುದು ಅಥವಾ ತುರ್ತಾಗಿ ಆಗಬೇಕಾದ ಕೆಲಸಗಳನ್ನು ಬದಿಗೆ ಸರಿಸಿ ಬೇಡದ ಚರ್ಚೆಗಳನ್ನು- ಉದಾಹರಣೆಗೆ ರಾಮ, ಹನುಮಂತ ಅಥವಾ ಸಾಯಿಬಾಬಾರ ಜನ್ಮಭೂಮಿ ಯಾವುದು ಎಂಬ ತರಹದ ಚರ್ಚೆಗಳನ್ನು- ಮುನ್ನೆಲೆಗೆ ತಂದು ದಾರಿ ತಪ್ಪಿಸುವುದು ಇವೆಲ್ಲ ಭ್ರಷ್ಟತೆಯ ನಾನಾ ರೂಪಗಳಾಗಿವೆ.

ನಮಗೇ ಅಜ್ಞಾತವಾಗಿರುವ ನಮ್ಮೊಳಗಿನ ಇಂಥ ನೂರಾರು ವಿಕೃತಿಗಳು ಕೊರೊನಾದಿಂದ ಅನಾವರಣವಾಗಿವೆ. ಈ ವಿಕೋಪದಿಂದ ವರ್ತಮಾನದಲ್ಲಿ ಹಲವು ದುಷ್ಪರಿಣಾಮಗಳಾಗಿದ್ದರೂ ಭವಿಷ್ಯದಲ್ಲಿ ಕೆಲವು ಒಳ್ಳೆಯ ಪರಿಣಾಮಗಳೂ ಆಗುತ್ತವೆ. ಮುಖ್ಯವಾಗಿ, ಸದ್ಯಕ್ಕೆ ಕೊರೊನಾ ನಮ್ಮೊಳಗೆ ನಾವು ಸಾಕಿಕೊಂಡಿರುವ ಇಂತಹ ಹಲವು ವಿಕೃತಿಗಳಿಗೆ ಒಂದು ದರ್ಪಣವಾಗಿ ಒದಗಿಬಂದಿದೆ. ಇದು ನಮ್ಮ ಆತ್ಮಾವಲೋಕನಕ್ಕೆ ಮತ್ತು ಈವರೆಗೆ ನಾವು ನಂಬಿಕೊಂಡು ಬಂದಿರುವ ಮೌಲ್ಯಗಳ ಮರುಪರಿಷ್ಕರಣೆಗೆ ಒಂದು ಅವಕಾಶ ನಿರ್ಮಿಸಿಕೊಟ್ಟಿದೆಯಲ್ಲದೆ ಭವಿಷ್ಯದಲ್ಲಿ ಹೊಸ ಮೌಲ್ಯಗಳ ಸೃಷ್ಟಿಗೂ ಕಾರಣವಾಗಬಹುದು.



ಮೇಲೆ ಉಲ್ಲೇಖಿಸಲಾದ ಕ್ಷಾಮಕ್ಕೆ ಸಂಬಂಧಿಸಿದಂತೆ ಮತ್ತೊಂದು ಕತೆಯಿದೆ. ಬ್ರಹ್ಮರ್ಷಿ ವಿಶ್ವಾಮಿತ್ರನಿಗೆ ತಿನ್ನಲು ಏನೂ ಸಿಗದೆ ಕಾಡಿನಲ್ಲಿ ಅಲೆದಾಡುತ್ತಾ ಕೊನೆಗೆ ಬೇಡರ ಜನಾಂಗದವರ ಒಂದು ಬಿಡಾರಕ್ಕೆ ಬರುತ್ತಾನೆ. ಅಲ್ಲಿ ಚರ್ಮ ಸುಲಿದು ಹದಗೊಳಿಸಿದ್ದ ನಾಯಿಯ ಮಾಂಸವನ್ನು ಕಂಡು ಅದನ್ನು ನೀಡಿರೆಂದು ಯಾಚಿಸುತ್ತಾನೆ. ಅವರು ಭಿಕ್ಷೆ ನೀಡಲು ಒಪ್ಪದಿದ್ದಾಗ ರಾತ್ರಿಯ ಅವೇಳೆಯಲ್ಲಿ ಬಿಡಾರಕ್ಕೆ ಬಂದು ಮಾಂಸವನ್ನು ಕದ್ದು ಸಿಕ್ಕಿಹಾಕಿಕೊಳ್ಳುತ್ತಾನೆ. ಬೇಡರ ಕುಲದವರು, ‘ಬ್ರಹ್ಮರ್ಷಿಯಾದ ನೀನು ಹೀಗೆ ಎರಡೆರಡು ಪಾಪಗಳನ್ನು ಮಾಡಬಹುದೇ? (ಕಳ್ಳತನ ಮತ್ತು ಮಾಂಸಾಹಾರ ಸೇವನೆ) ನಿನ್ನಿಂದ ನಮಗೂ ಪಾಪ ಅಂಟುತ್ತದೆ’ ಎಂದಾಗ, ‘ನಾನು ಸಾಯುತ್ತಿದ್ದೇನೆ; ಮೊದಲು ತಿನ್ನಲು ಬಿಡಿ ಆಮೇಲೆ ನಿಮ್ಮ ಪ್ರಶ್ನೆಗಳಿಗೆ ಉತ್ತರಿಸುತ್ತೇನೆ. ಈ ಹಿಂದೆ ಅಗಸ್ತ್ಯ ಋಷಿ ವಾತಾಪಿ ಎಂಬ ಅಸುರನನ್ನೇ ತಿಂದಿರಲಿಲ್ಲವೇ’ ಎಂದು ಬೇಡರನ್ನೇ ಮರುಪ್ರಶ್ನಿಸಿ ಮಾಂಸವನ್ನು ಹೊತ್ತು ತನ್ನ ಆಶ್ರಮಕ್ಕೆ ಹಿಂದಿರುಗುತ್ತಾನೆ. ಅಲ್ಲಿ ಶಾಸ್ತ್ರೋಕ್ತ ವಿಧಿ ವಿಧಾನಗಳಿಂದ ಯಜ್ಞಕುಂಡವನ್ನು ನಿರ್ಮಿಸಿ ನಾಯಿಯ ಮಾಂಸವನ್ನೇ ಹವಿಸ್ಸಾಗಿ ದೇವತೆಗಳಿಗೆ ಸಮರ್ಪಿಸಿ ತಾನೂ ಸೇವನೆ ಮಾಡುತ್ತಾನೆ. ವಿಶ್ವಾಮಿತ್ರನ ನೈವೇದ್ಯದಿಂದ ಸಂತೃಪ್ತನಾದ ದೇವೇಂದ್ರನು ಧಾರಾಕಾರವಾಗಿ ಮಳೆ ಸುರಿಸಿ ಕ್ಷಾಮವನ್ನು ನೀಗಿಸುತ್ತಾನೆ.

ತಿಲಕರ ಗೀತಾರಹಸ್ಯದಲ್ಲಿ ಉಲ್ಲೇಖಿತವಾಗಿರುವ ಆಪದ್ಧರ್ಮದ ಮಹಿಮೆಯನ್ನು ವಿವರಿಸುವ ಈ ಕತೆಯು ಮಹಾತ್ಮ ಗಾಂಧಿಯವರನ್ನು ಬಹಳ ದಿವಸಗಳ ಕಾಲ ಕಾಡಿತ್ತು. ಅವನು ಮಾಂಸ ಸೇವನೆ ಮಾಡದೆ ಪ್ರಾಣತ್ಯಾಗ ಮಾಡಿದ್ದರೂ ಸರಿಯಾಗುತ್ತಿತ್ತು ಎಂದು ಗಾಂಧೀಜಿ ಉದ್ಗರಿಸಿದ್ದರಂತೆ (ಗಾಂಧಿ- ಗಂಗಾ (ಇನ್‌ಸ್ಪೈರಿಂಗ್ ಸ್ಟೋರೀಸ್), 44ನೇ ಅಧ್ಯಾಯ ಸಂ: ಮಹೇಂದ್ರ ಮೇಘನಾನಿ, ಬಾಂಬೆ ಸರ್ವೋದಯ ಮಂಡಲ್, ಮುಂಬೈ, 2011). ಇದನ್ನು ಮಹಾಭಾರತವು ಆಪದ್ಧರ್ಮ– ಆಪತ್ಕಾಲದಲ್ಲಿ ಪಾಲಿಸಬೇಕಾದ ಧರ್ಮ– ಎಂದು ಕರೆಯುತ್ತದೆ.

ಎಷ್ಟೋ ಸಲ ಆಪತ್ಕಾಲದಲ್ಲಿ ಪಾಲಿಸಬೇಕಾದ ತಾತ್ಕಾಲಿಕ ಧರ್ಮ ಶಾಶ್ವತಧರ್ಮವೂ ಆಗಬಹುದು. ಅಧ್ಯಾತ್ಮ ಮಾರ್ಗ ಹಿಡಿದಿದ್ದ ಗಾಂಧಿ ಆಪದ್ಧರ್ಮವೆಂದೇ ರಾಜಕಾರಣಕ್ಕೆ ಬಂದದ್ದು, ಮುಂದೆ ಆ ಆಪದ್ಧರ್ಮವೇ ಅವರ ಪಾಲಿನ ಶಾಶ್ವತ ಧರ್ಮವಾಗಿ ಪರಿಣಮಿಸಿತು.

ವಿಶ್ವಾಮಿತ್ರನ ಈ ಕತೆಯಿಂದ ಧರ್ಮವು ನಮ್ಮ ಮತ್ತು ಇತರರ ಬದುಕಿನ ಧಾರಣೆಗೆ, ರಕ್ಷಣೆಗೆ ಸಹಾಯಕವಾಗುವುದೇ ಧರ್ಮ (ಧಾರಣಾದ್ಧರ್ಮ ಇತ್ಯಾಹುಃ) ಎಂಬ ಹೊಸ ವ್ಯಾಖ್ಯಾನ ಪಡೆಯಿತು. ಆಪತ್ಕಾಲದಲ್ಲೂ ಸುಲಿಗೆಯೆಂಬ ಯಾಗವನ್ನು ಮುಂದುವರಿಸಿರುವ ನಮಗೆ, ಕೊರೊನೋತ್ತರ ಕಾಲದಲ್ಲಾದರೂ ಧರ್ಮದ ಈ ಹೊಸ ವ್ಯಾಖ್ಯಾನ ನೆನಪಾಗಬಹುದು.

ಚುರುಮುರಿ



ನಡುವೆ ಅಂತರ ಬೇಕೆ?

• ಮಣ್ಣೆರಾಜು

‘ಇಬ್ಬರು ಮಕ್ಕಳ ನಡುವೆ ಅಂತರವಿದ್ದರೆ ಸಂಸಾರ ಸುಖವಾಗಿರುತ್ತದೆ ಅಂತ ಹೇಳ್ತಾರೆ, ಅದೇನು ಸುಖ ಇರುತ್ತೋ ಗೊತ್ತಿಲ್ಲ...’ ಸುಮಿಗೇನೋ ಸಂಕಟ.

‘ಯಾಕೆ, ಏನಾಯ್ತು?’ ಅಂದ ಶಂಕ್ರಿ.

‘ಶಾಂತಮ್ಮನ ಮಕ್ಕಳ ನಡುವೆ ಅಂತರವಿದೆ, ಆದರೂ ಅವಳ ಸಂಸಾರದಲ್ಲಿ ಸುಖ, ನೆಮ್ಮದಿ ಇಲ್ಲಾರೀ’,

‘ಹೌದಾ?...ಪಾಪ...’

‘ಒಬ್ಬ ಮಗ ಅಮೆರಿಕ, ಇನ್ನೊಬ್ಬ ಆಸ್ಟ್ರೇಲಿಯಾದಲ್ಲಿದ್ದಾನೆ, ಇಬ್ಬರ ನಡುವೆ ಭಾರಿ ಅಂತರವಿದೆ. ಆದರೂ ಶಾಂತಮ್ಮ ಇಲ್ಲಿ ವೃದ್ಧಾಶ್ರಮದಲ್ಲಿ ನರಳುತ್ತಿದ್ದಾಳೆ’.

‘ಅಂತರ ಅಂದರೆ, ಆ ಅಂತರ ಅಲ್ಲ...’

‘ಗೊತ್ತೂರೀ, ಹೆತ್ತವರು-ಮಕ್ಕಳ ನಡುವೆ ಅಂತರವಿದ್ದರೆ ಹೀಗೇ ಆಗೋದು’.

‘ಶಾಂತಮ್ಮನೇ ಮಕ್ಕಳ ನಡುವೆ ಅಂತರ ಕಾಪಾಡಿಕೊಂಡಿದ್ದಾಳೆಯೇ?’

‘ಹೌದೂರೀ, ಶಾಂತಮ್ಮನ ಗಂಡ ದೊಡ್ಡ ಆಫೀಸರ್ ಆಗಿದ್ದ. ಒಳ್ಳೆ ಎಜುಕೇಷನ್ ಕೊಡಿಸಬೇಕು ಅಂತ ಮಕ್ಕಳನ್ನು ಪ್ರೈಮರಿ ಹಂತದಿಂದಲೇ ದೂರದ ರೆಸಿಡೆನ್ಷಿಯಲ್ ಸ್ಕೂಲ್‌ಗೆ ಸೇರಿಸಿದ್ದರು. ನಾಲ್ಕು ಬೆಡ್ ರೂಂ ಮನೆ ಇದ್ದರೂ ಮಕ್ಕಳು ಆ ಮನೆಯಲ್ಲಿ ಬಾಳಿ, ಬೆಳೆಯಲಿಲ್ಲ. ರಜೆ ಇದ್ದಾಗ ನೆಂಟರು ಬರುವಂತೆ ಮನೆಗೆ ಬಂದು ಒಂದೆರಡು ದಿನ ಇದ್ದು ಹೋಗುತ್ತಿದ್ದರು. ಹೆತ್ತವರ ಜೊತೆ ಅವರ ಬಾಂಧವ್ಯ ಬೆಳೆಯಲೇ ಇಲ್ಲ...’

‘ಛೇ ಛೇ...!’

‘ಶಾಂತಮ್ಮನ ಗಂಡ ಕೋವಿಡ್‌ನಿಂದ ಸತ್ತುಹೋದ. ಇದ್ದ ಮನೆ ಬಾಡಿಗೆಗೆ ಕೊಟ್ಟು, ಬಾಡಿಗೆ ದುಡ್ಡಲ್ಲಿ ವೃದ್ಧಾಶ್ರಮ ಸೇರಿಕೊಂಡಿದ್ದಾಳೆ’.

‘ಮಕ್ಕಳು ಅಮ್ಮನ ಯೋಗಕ್ಷೇಮ ವಿಚಾರಿಸುವುದಿಲ್ಲವಾ?’

‘ವಿಚಾರಿಸ್ತಾರೆ, ಅಮ್ಮನ ಬರ್ತ್‌ಡೇ ದಿನ ವಾಟ್ಸ್‌ಆ್ಯಪ್‌ನಲ್ಲಿ ಕೇಕ್ ಚಿತ್ರ ಹಾಕಿ, ವಿಶ್ ಮಾಡ್ತಾರೆ ಅಷ್ಟೇ. ಇದರ ಹೊರತಾಗಿ ತಾಯಿ-ಮಕ್ಕಳ ನಡುವೆ ಇನ್ನಾವ ಪ್ರೀತಿ, ಮಮಕಾರವಿಲ್ಲ. ಪ್ರೀತಿ ಕೊಡಲು ಅಲ್ಲದಿದ್ದರೂ ನೋವು ಕೊಡಲಾದರೂ ಮಕ್ಕಳು ಅಪ್ಪ ಅಮ್ಮನ ಜೊತೆ ಇರಬೇಕು ಅಲ್ವೇನ್ರೀ...?’ ಅಂದಳು ಸುಮಿ.

ಸಂಗತ

ಹಸಿರಿನ ಹಸಿವು ನೀಗುವುದು ಹೇಗೆ?

ತೋರಣಗಟ್ಟೆಯ ಜನರು ಬರದ ನಾಡಿನ ಸಂಕಷ್ಟ ದಾಟಲೊಂದು ಸ್ವಂತದ ದಾರಿ ಕಂಡುಕೊಂಡಿದ್ದಾರೆ

• ಸತೀಶ್ ಜಿ.ಕೆ. ತೀರ್ಥಹಳ್ಳಿ

‘ಬಳ್ಳಾರಿಗೆ ಇರುವುದು ಎರಡೇ ಕಾಲ. ಒಂದು ಬೇಸಿಗೆ ಮತ್ತೊಂದು ಕಡುಬೇಸಿಗೆ, ಅಷ್ಟೇ’ ಅಂದಿದ್ದರು ಹಾಸ್ಯಬ್ರಹ್ಮ ಬೀಚಿ. ಹೌದು, ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳು ಬರ, ಒಣಹವೆ, ಅನಾವೃಷ್ಟಿ, ಕುಡಿಯುವ ನೀರಿನ ಅಭಾವವನ್ನು ನಿರಂತರವಾಗಿ ಅನುಭವಿಸುತ್ತಲೇ ಬಂದಿವೆ. ಬಾಧಿಸುತ್ತಲೇ ಇರುವ ಇಂಥ ಸಂಕಷ್ಟಗಳನ್ನು ಮೀರುವ ಹಾದಿಯಲ್ಲಿ ಪ್ರಯತ್ನಗಳು ಕೂಡ ಅಲ್ಲಲ್ಲಿ ಸದ್ದಿಲ್ಲದೇ ಸಾಗಿವೆ.

ಹೊರಜಗತ್ತು ಕೊರೊನಾ ವೈರಾಣುವಿನ ಆತಂಕದಲ್ಲಿ ನಲುಗುತ್ತಿರುವ ಹೊತ್ತಿನಲ್ಲಿಯೇ ಶ್ರಮಿಕ ವರ್ಗದ ದೂರದೃಷ್ಟಿಯ ಕಸುವಿಗಲ್ಲಿ ಜೀವಬಂದಿದೆ. ಭೂಪರಿಸರಕ್ಕೆ ಬಲ ತುಂಬುವುದರ ಜೊತೆಗೆ ರಾಜಸ್ಥಾನದ ನಂತರದಲ್ಲಿ ತೀವ್ರಗತಿಯಲ್ಲಿ ಮರುಭೂಮೀಕರಣಗೊಳ್ಳುತ್ತಿರುವ ಕರುನಾಡಲ್ಲಿ ಹಳ್ಳಿಯೊಂದರ ಹಸಿರಿನ ಹೆಜ್ಜೆಗಳು ಮಹತ್ವವೂ ಮಾದರಿಯೂ ಆಗಿವೆ.

ಅದು ರಾಜ್ಯದಲ್ಲಿಯೇ ಕಡಿಮೆ ಮಳೆ ಪಡೆಯುವ (ವಾರ್ಷಿಕ ಸರಾಸರಿ 556 ಮಿ.ಮೀ) ಬಯಲುಸೀಮೆಯ ಹಳ್ಳಿ. ನಾಡಿನ ಶಾಶ್ವತ ಬರಪೀಡಿತ ಪ್ರದೇಶವೆಂಬ ಹಣೆಪಟ್ಟಿ ಹೊತ್ತಿರುವ ಜಾಗವೂ ಹೌದು. ಅದು, ಜಗಳೂರು ತಾಲ್ಲೂಕಿನ ‘ತೋರಣಗಟ್ಟೆ’. ಬಿಸಿಲ ಧಗೆ, ಬರದ ಬೇಗೆ, ಒಲಿಯದ ಮಳೆ, ಬೆಳೆನಾಶ, ಅಂತರ್ಜಲ ಕುಸಿತ, ಜೀವಜಲಕ್ಕಾಗಿಯ ಪರದಾಟಗಳೆಲ್ಲಾ ಅಲ್ಲಿಯ ಮಾಮೂಲು ಕಥೆ ಮತ್ತು ವ್ಯಥೆ. ಕಾಡುವ ಇಂತಹ ಸಂಕಟಗಳನ್ನು ತಮ್ಮದೇ ಮಾರ್ಗದಲ್ಲಿ ದಾಟಿಬಿಡಬೇಕೆಂಬ ಹಂಬಲದಲ್ಲಿ ತಣ್ಣಗೆ ಶುರುವಾಗಿದ್ದೇ ಸಾಮೂಹಿಕ ‘ಗಿಡ ನೆಡುವ ಕಾಯಕ’.

ನರೇಗಾ ಯೋಜನೆಯಡಿ ಊರಕೆರೆಗೆ ಪುನರ್ಜೀವ ನೀಡುವ ಕಾಯಕದಲ್ಲಿ ಹೂಳು ತೆಗೆದವರು ನೀರು ತುಂಬಿಕೊಳ್ಳಲು ಮಳೆಗಾಗಿ ಮುಗಿಲಿಗೆ ಮುಖಮಾಡಿ ಕೂತಿದ್ದರು. ಮರಗಿಡಗಳನ್ನು ಬೆಳೆಸುವ ಕೆಲಸ ಮಲೆನಾಡಿಗಷ್ಟೇ ಸೀಮಿತ ಮತ್ತದು ಕೇವಲ ಅರಣ್ಯ ಇಲಾಖೆಯ ಕರ್ತವ್ಯವೆಂಬ ದೃಷ್ಟಿಕೋನ ಅಲ್ಲಿಯೂ ಇತ್ತು. ಆದರೀಗ ‘ಕತ್ತಲನ್ನು ಶಪಿಸುತ್ತಾ ಕೂರುವ ಬದಲು ಪುಟ್ಟದೊಂದು ಹಣತೆ ಹಚ್ಚುವ ಕೆಲಸವೇ ಮೇಲು’ ಎಂಬುದನ್ನರಿತ ಊರಿನ ಉತ್ಸಾಹಿ ಯುವಜನ ತಮ್ಮೊಳಗೆ ಮೊಳಕೆಯೊಡೆದ ವಿಚಾರವನ್ನು ಊರ ಹಿರಿಯರೊಡನೆ ಚರ್ಚಿಸಿದರು. ಬರದ ನಾಡಿನ ಶಾಶ್ವತ ಸಮಸ್ಯೆಗೆ ಸ್ವಯಂ ಪರಿಹಾರ ಕಂಡುಕೊಳ್ಳುವ ಸದುದ್ದೇಶದಿಂದ ಎರಡು ವರ್ಷಗಳಲ್ಲಿ ಹತ್ತು ಸಾವಿರ ಗಿಡ ನೆಡುವ ಯೋಜನೆ ಸಿದ್ಧಪಡಿಸಿದರು.

ಬೀದಿಗಳು, ಶಾಲೆಯ ಆವರಣ, ದೇವಸ್ಥಾನ, ಗೋಮಾಳ, ಬೋಳುಗುಡ್ಡ, ಕೆರೆದಂಡೆ, ಗದ್ದೆಯಂಚು ಸೇರಿದಂತೆ ಸ್ಥಳಾವಕಾಶ ಇದ್ದಲ್ಲೆಲ್ಲಾ ಹಸಿರುಹೊದಿಕೆ ಹೊದಿಸುವ ಕೈಂಕರ್ಯವನ್ನು ಕೈಗೊಂಡಿದ್ದಾಯ್ತು. ಪೂರ್ತಿ ಊರಿಗೂರೇ ಗಿಡ ನೆಡುವ ಕಾಯಕದಲ್ಲಿ ಪಾಲ್ಗೊಂಡಿತು.

ಎಲ್ಲ ವರ್ಗವನ್ನೂ ಒಳಗೊಂಡ ಸುಮಾರು 1,500 ಕುಟುಂಬಗಳಿರುವ ಜೇನುಗೂಡಿನಂತಹ ಊರಲ್ಲಿ ಕನಿಷ್ಠ ಮನೆಗೆರಡು ಗಿಡ ನೆಟ್ಟು ರಕ್ಷಿಸಿಕೊಳ್ಳುವ ಹೊಣೆಯನ್ನು ಮನೆಮಂದಿಯೇ ಸ್ವಇಚ್ಛೆಯಿಂದ ವಹಿಸಿಕೊಂಡರು. ಊರವರ ಹಸಿರ ಹಸಿವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಅರಣ್ಯ ಇಲಾಖೆಯು ಒಣಭೂಮಿಗೆ ಸೂಕ್ತವಾದ ಬಹುವಿಧದ ಅರಳಿ, ಹೊಂಗೆ, ಬೇವು, ಹುಣಸೆ, ನೇರಳೆ, ಮಾವು, ಸಂಪಿಗೆಯಂತಹ ಉಪಯುಕ್ತ ಸಸಿಗಳನ್ನು ಪೂರೈಸಿತು.

ಕಳೆದ ಜೂನ್ 5ರಂದು ಗಿಡ ನೆಡುವ ಮೂಲಕ ಅಭಿಯಾನವು ಸಾಂಕೇತಿಕವಾಗಿ ಆರಂಭಗೊಂಡಿತು. ಅಂದು ಊರಲ್ಲಿ ಹಬ್ಬದ ವಾತಾವರಣ. ಸಡಗರದಿಂದಲೇ ಎಲ್ಲರೂ ಸೇರಿಕೊಂಡು ಸಣ್ಣ ತಯಾರಿಯೊಂದಿಗೆ ತಲಾ ಎಂಟ್ಹತ್ತು ಗುಂಡಿ ತೆಗೆದರು. ಮುಂದೆ, ಗಿಡ ನೆಟ್ಟು, ನೀರುಣಿಸಿ, ಬೇಲಿ ಮಾಡುವ ಮೂಲಕ ಮೊದಲ ಹಂತದಲ್ಲಿ 2,000 ಸಸಿಗಳನ್ನು ನೆಡಲಾಯಿತು. ಮನೆಯೆದುರಿನ ಗಿಡಗಳನ್ನು ತಾವೇ ಜತನದಿಂದ ಸಾಕುತ್ತಿದ್ದು, ಅವುಗಳ ಬೇಲಿಕೋಲು, ನೀರು, ಗೊಬ್ಬರ, ಔಷಧಗಳಂತಹ ಆರೈಕೆಯಲ್ಲಿ ಹಿಗ್ಗುತ್ತಾರೆ. ಸಾಮಾನ್ಯಜನರು ದೂರದ ಕೈಪಂಪುಗಳನ್ನು ಜಗ್ಗಿತಂದು ಮನೆಮುಂದಿನ ಮತ್ತು ರಸ್ತೆಬದಿಯ ಗಿಡಗಳಿಗೆ ನೀರುಣಿಸುತ್ತಿರುವ ದೃಶ್ಯ ನಿಜಕ್ಕೂ ಹೊರಜಗತ್ತಿಗೆ ಮಾದರಿಯ ನಡೆ. ಬೆಳೆಸುವ ಗಿಡ ತಮ್ಮದೆನ್ನುವ ಪ್ರೀತಿ ಮತ್ತು ಮನೆಯ ಸದಸ್ಯರು ಗಿಡದೊಟ್ಟಿಗೆ ನಿಂತು ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸುವ ಪರಿ ಅಚ್ಚರಿ ಹುಟ್ಟಿಸುತ್ತದೆ.



ಗಮನಿಸಬೇಕಾದ್ದೇನೆಂದರೆ, ಅಲ್ಲೀಗ ಓದು, ವಯೋಮಾನಗಳಾಚೆಗೆ ಪರಿಸರ ಪ್ರಜ್ಞೆಯೊಂದು ಜಾಗೃತವಾಗಿದೆ. ತಮ್ಮ ಇಂದು-ನಾಳೆಗಳನ್ನು ತಂಪಾಗಿರಿಸಲು ಒಳಗೊಳ್ಳುವಿಕೆಯ ಬಲದಲ್ಲಿ ಬರದ ಛಾಯೆಯನ್ನು ಸರಿಸಿಬಿಡಬೇಕೆನ್ನುವ ಹಂಬಲ ಹೊತ್ತಿರುವ ಊರಿೀಗ ಹಸಿರು ಸೇನೆಯಂತಾಗಿದೆ.

ನಿಜ, ವರ್ಷವೂ ವನಮಹೋತ್ಸವದ ಹೆಸರಿನಲ್ಲಿ ನೆಡುವಂತಹ ಲಕ್ಷಗಟ್ಟಲೆ ಗಿಡಗಳಲ್ಲಿ ಬದುಕುಳಿಯುವುದು ಬೆರಳೆಣಿಕೆಯಷ್ಟು ಮಾತ್ರ. ನೆಡುವ ಗಿಡಗಳನ್ನೆಲ್ಲಾ ಬದುಕಿಸಿಕೊಂಡಿದ್ದರೆ ಇಷ್ಟೊತ್ತಿಗೆ ರಾಜ್ಯದ ಭೂಪಟದಲ್ಲಿ ಹಸಿರುಬಣ್ಣದ ಹರವು ವಿಸ್ತರಿಸಬೇಕಿತ್ತು. ಹಾಗಾಗಿ, ಗಿಡ ನೆಡುವುದಷ್ಟೇ ಮುಖ್ಯವಲ್ಲ, ನೆಡುವಾಗಿನ ಉತ್ಸಾಹ, ಕಾಳಜಿಯನ್ನು ನಿರಂತರವಾಗಿ ಸಾಕಿಕೊಂಡು, ಗಿಡಗಳನ್ನು ಮರವಾಗುವಂತೆ ಕಾಪಾಡಿಕೊಳ್ಳುವುದು ಕೂಡ ನಮ್ಮ ಜವಾಬ್ದಾರಿಯೇ.

ನೆಲಪದರಕ್ಕೆ ಹಸಿರು ಹೊದೆಸುವಂತಹ ಮಹತ್ವದ ಪ್ರಯತ್ನಕ್ಕೆ ತೆರೆದುಕೊಳ್ಳುತ್ತಿರುವ ಬರದ ನಾಡಿನ ಪುಣ್ಯಕಾರ್ಯವು ಎಲ್ಲೆಡೆಗೂ ವ್ಯಾಪಿಸಲಿ. ಜೊತೆಗದು ಪರಿಸರಾಸಕ್ತಿಯಾಗಿ ಆಂದೋಲನದ ರೂಪ ಪಡೆಯಲಿ ಎಂಬುದು ಆಶಯ.

ವಾಚಕರ ವಾಣಿ

ಉಚಿತ ಲ್ಯಾಪ್‌ಟಾಪ್ ನೀಡಿ, ಭವಿಷ್ಯ ಕಾಪಾಡಿ

ಕೊರೊನಾ ಸೋಂಕಿನ ಕಾರಣದಿಂದ ರಾಜ್ಯದ ಶಾಲಾ ಕಾಲೇಜುಗಳು ಬಂದ್ ಆಗಿರುವ ಈ ಸಮಯದಲ್ಲಿ, ಹಲವಾರು ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗಳನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ. ವೈದ್ಯಕೀಯ, ಎಂಜಿನಿಯರಿಂಗ್, ಪದವಿ, ಡಿಪ್ಲೊಮಾದಂತಹ ಕೋರ್ಸುಗಳಿಗೆ ಕಾಲೇಜುಗಳು ಆನ್‌ಲೈನ್ ತರಗತಿಗಳನ್ನು ತೆಗೆದುಕೊಳ್ಳುತ್ತಿವೆ. ಹಲವಾರು ವಿದ್ಯಾರ್ಥಿಗಳು ಗ್ರಾಮೀಣ ಭಾಗದವರಾಗಿದ್ದು ಅವರವರ ಊರುಗಳಲ್ಲಿ ಸರಿಯಾದ ನೆಟ್‌ವರ್ಕ್ ಸಿಗುವುದಿಲ್ಲ ಮತ್ತು ಅವರ ಬಳಿ ಲ್ಯಾಪ್‌ಟಾಪ್ ಇಲ್ಲದ ಕಾರಣ ಆನ್‌ಲೈನ್ ತರಗತಿಗಳಿಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ.

ಇಂತಹ ಹಲವಾರು ವಿದ್ಯಾರ್ಥಿಗಳನ್ನು ಗಮನದಲ್ಲಿ ಇಟ್ಟುಕೊಂಡು, ನೆರೆಯ ಆಂಧ್ರಪ್ರದೇಶದಲ್ಲಿ ನೀಡಿರುವಂತೆ ಕರ್ನಾಟಕದ ಕಾಲೇಜು ವಿದ್ಯಾರ್ಥಿಗಳಿಗೂ ಸರ್ಕಾರದ ವತಿಯಿಂದ ಉಚಿತ ಲ್ಯಾಪ್‌ಟಾಪ್ ಹಾಗೂ ಇಂಟರ್ನೆಟ್ ಸೇವೆಯನ್ನು ಒದಗಿಸಿಕೊಡಬೇಕು. ಪ್ರತೀ ಹಳ್ಳಿಯಲ್ಲೂ ಉತ್ತಮ ನೆಟ್‌ವರ್ಕ್ ಸಿಗುವಂತೆ ನೋಡಿಕೊಳ್ಳಲು ಗ್ರಾಮ ಪಂಚಾಯಿತಿಗಳಿಗೆ ಸೂಚನೆ ನೀಡಬೇಕು. ಈ ಮೂಲಕ, ದೇಶದ ಆಸ್ತಿಯಾಗಿರುವ ವಿದ್ಯಾರ್ಥಿಗಳು ಹಾಗೂ ಯುವಕರ ಭವಿಷ್ಯವನ್ನು ಕಾಪಾಡಬೇಕು.

ಲಕ್ಷ್ಮಿ ಕಿಶೋರ್ ಅರಸ್, ಕೂಡ್ಲೂರು, ಚನ್ನಪಟ್ಟಣ

ಸಾವಿನೊಡನೆ ಚೆಲ್ಲಾಟ ಬೇಡ

ಚಾಮರಾಜನಗರ ಜಿಲ್ಲೆಯಲ್ಲಿ ಆಮ್ಲಜನಕದ ಕೊರತೆಯಿಂದ ಒಂದೇ ದಿನ 24 ಮಂದಿ ಮೃತಪಟ್ಟಿರುವುದು ಅತ್ಯಂತ ದುರದೃಷ್ಟಕರ ಮತ್ತು ಶೋಚನೀಯ ಸಂಗತಿ. ‘ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಅಷ್ಟೂ ಆಮ್ಲಜನಕವನ್ನು ಸ್ಥಳೀಯವಾಗಿ ಬಳಸಲು ಕೇಂದ್ರ ಸರ್ಕಾರ ಅನುಮತಿ ನೀಡಿದರೆ ತಕ್ಷಣ ಬಿಕ್ಕಟ್ಟಿನಿಂದ ಪಾರಾಗಲು ಸಾಧ್ಯ’ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಹೇಳಿದ್ದಾರೆ. ಆಮ್ಲಜನಕದ ಕೊರತೆಯಿಂದ ನೂರಾರು ಕೋವಿಡ್ ರೋಗಿಗಳು ಉಸಿರುಗಟ್ಟಿ ಸಾಯುತ್ತಿರುವಾಗ, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಅನುಮತಿಗೆ ಕಾಯದೆ ಕೂಡಲೇ ಆಮ್ಲಜನಕವನ್ನು ರೋಗಿಗಳಿಗೆ ಸರಬರಾಜು ಮಾಡಿ ಸಾವು-ನೋವುಗಳನ್ನು ತಪ್ಪಿಸಬೇಕು.

ಇಂತಹ ಸಂದಿಗ್ಧ ಮತ್ತು ವಿಷಮ ಪರಿಸ್ಥಿತಿಯಲ್ಲಿ ಆಮ್ಲಜನಕವನ್ನು ಸರಬರಾಜು ಮಾಡಲು ಕೇಂದ್ರ ಸರ್ಕಾರವು ಅನುಮತಿ ಕೊಡದೇ ಇರುವುದು ಅದರ ಕರ್ತವ್ಯಲೋಪ ಮತ್ತು ನಿರ್ಲಕ್ಷ್ಯತನವನ್ನು ತೋರಿಸುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನರ ಸಾವಿನೊಡನೆ ಚೆಲ್ಲಾಟವಾಡುತ್ತಿವೆ ಎನಿಸುತ್ತಿದೆ. ಅಧಿಕಾರ ಹಿಡಿಯುವ ಸಲುವಾಗಿ ಚುನಾವಣಾ ಪ್ರಚಾರಕ್ಕೆ ತೋರಿಸುವ ಆಸಕ್ತಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಆಡಳಿತದಲ್ಲಿ ತೋರಿಸಬೇಕು.

ಎನ್.ನಂಜೇಗೌಡ, ಬೆಂಗಳೂರು

ಮಾತಿಗೆ ಇರಲಿ ನಿಯಂತ್ರಣ

ಪಂಚರಾಜ್ಯಗಳ ಚುನಾವಣಾ ಫಲಿತಾಂಶದ ವಿಶ್ಲೇಷಣೆಗಳಲ್ಲಿ ನಾವು ಬಹುಮುಖ್ಯ ಸಂಗತಿಯೊಂದನ್ನು ಕಡೆಗಣಿಸುತ್ತಿದ್ದೇವೆ. ಅದೇನೆಂದರೆ, ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶವು ಬೆಂಕಿ ಉಗುಳುವ ಭಾಷಣಕಾರರಿಬ್ಬರ ಸೋಲು ಗೆಲುವಾಗಿದೆ ಎಂಬುದು. ನರೇಂದ್ರ ಮೋದಿ ಅವರು ಇದಕ್ಕೆ ಮುನ್ನುಡಿ ಬರೆದರೆ, ಮಮತಾ ಬ್ಯಾನರ್ಜಿ ಅದಕ್ಕೆ ಮಾರ್ನುಡಿದರು. ಇದು ನಿಜಕ್ಕೂ ಪ್ರಜಾಪ್ರಭುತ್ವಕ್ಕೆ ಕಳವಳಕಾರಿ. ಏಕೆಂದರೆ ಚುನಾವಣೆ ಎಂಬುದು ಸರ್ಕಾರ ರಚಿಸಲು ಒಂದು ಅವಕಾಶವೇ ಹೊರತು ಅದು ಇಬ್ಬರು ಪರಸ್ಪರ ಕೆಸರೆರಚಲು ಇರುವ ಅವಕಾಶವಲ್ಲ.

ಮಮತಾ ಅವರನ್ನು ದೀದಿಯೆಂದೇ ಹಂಗಿಸುವ ಶೈಲಿಯಲ್ಲಿ ಮೋದಿ ಮಾತನಾಡಿದರೆ, ಮೋದಿಯವರನ್ನು ಹೊರಗಿನವರೆಂದೇ ಮಮತಾ ಹಂಗಿಸಿದರು. ಜನರ ಸಮಸ್ಯೆಗಳ ಕುರಿತು ಚರ್ಚಿಸುವ ಬದಲು ಪರಸ್ಪರ ಹೀಯಾಳಿಸುವ, ದ್ವೇಷಿಸುವ ವೈಯಕ್ತಿಕ ಮಾತುಗಳು ಇಬ್ಬರಲ್ಲೂ ಮೂಡಿಬಂದವು. ಹೀಗಾಗಿ ಈ ರೀತಿಯ ಭಾಷಣಗಳನ್ನು ಚುನಾವಣಾ ಕಣದಿಂದ ದೂರವಿಡುವ ಕಡೆ ಚುನಾವಣಾ ಆಯೋಗ ಯೋಚಿಸಬೇಕಿದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಆಹಾರ ಯೋಜನೆಯ ಫಲ ಫಲಾನುಭವಿಗೆ ಸಿಗಲಿ

ಲಾಕ್‌ಡೌನ್‌ನಿಂದಾಗಿ ಹಸಿವಿನಿಂದ ಕಂಗೆಟ್ಟಿದ್ದ ಮಕ್ಕಳು, ಜನ ಕುಡಿದು ಬಿಸಾಡಿದ್ದ ಎಳನೀರಿನ ತಿರುಳನ್ನು ತಿಂದ ಘಟನೆ ರಾಮನಗರದಲ್ಲಿ ನಡೆದಿದೆ (ಪ್ರ.ವಾ., ಏ. 3). ವಿಶ್ವಸಂಸ್ಥೆಯ ವರದಿಗಳ ಪ್ರಕಾರ, ಭಾರತದಲ್ಲಿ ಈಗಲೂ ಹಸಿವಿನಿಂದ ಸಾವು–ನೋವು ಸಂಭವಿಸುತ್ತವೆ ಹಾಗೂ 19 ಕೋಟಿ ಜನ ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಸುಮಾರು 3 ಲಕ್ಷ ಮಕ್ಕಳು ಅಪೌಷ್ಟಿಕತೆಯಿಂದ ಪ್ರತಿವರ್ಷ ಸಾಯುತ್ತಾರೆ.

ಮಾಜಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಅವರು ದೇಶವು ಸ್ವಾತಂತ್ರ್ಯ ಪಡೆದ ದಿನ ಹೇಳಿದ ಮಾತೊಂದು ಹೀಗಿದೆ: ‘ಭಾರತದ ಇಂದಿನ ಬಹುಮುಖ್ಯವಾದ ಸವಾಲು ಎಂದರೆ ಭಾರತವನ್ನು ಹಸಿವುಮುಕ್ತ ರಾಷ್ಟ್ರವನ್ನಾಗಿ ಮಾಡುವುದು’. ಆದರೆ ಇಂದಿಗೂ ಅನೇಕ ಸರ್ಕಾರಿ ಯೋಜನೆಗಳ ಹೊರತಾಗಿಯೂ ಜನ ಸಾಯುತ್ತಿರುವುದು ದುಃಖದ ಸಂಗತಿಯೇ ಸರಿ ಅಥವಾ ಯೋಜನೆಗಳನ್ನು ಸಮಗ್ರವಾಗಿ ಜಾರಿಗೆ ತರುವಲ್ಲಿ ಲೋಪದೋಷ ಇರಬಹುದೇನೋ.

ಸರ್ಕಾರದ ಅಂಕಿ ಅಂಶಗಳ ಪ್ರಕಾರ, ಕರ್ನಾಟಕದಲ್ಲಿಯೇ ಸುಮಾರು ಒಂದೂವರೆ ಲಕ್ಷದಷ್ಟು ಮಕ್ಕಳು ಉಪಾಹಾರ ಇಲ್ಲದೆ ಶಾಲೆಗೆ ಹೋಗುತ್ತಿದ್ದಾರೆ. ಈ ಸಮಸ್ಯೆ ನಿವಾರಣೆಗೆ ಮಧ್ಯಾಹ್ನದ ಬಿಸಿಯೂಟ ಯೋಜನೆಯಿಂದ ಸ್ವಲ್ಪ ಮಟ್ಟಿಗೆ ಸಹಾಯವಾಗಿರಬಹುದು. 2020ರ ಹಠಾತ್ ಲಾಕ್‌ಡೌನ್ ಸಮಯದಲ್ಲಿ ಕೂಲಿ ಕಾರ್ಮಿಕರು, ಮಹಿಳೆಯರು, ವಯೋವೃದ್ಧರು, ಮಕ್ಕಳು ಮತ್ತು ಅಂಗವಿಕಲರು ಊಟವಿಲ್ಲದೆ ನೂರಾರು ಮೈಲುಗಳು ನಡೆದು ಸಂಕಷ್ಟಕ್ಕೀಡಾಗಿದ್ದು, ಅವರಲ್ಲಿ ಕೆಲವರು ಸಾವಿಗೀಡಾಗಿದ್ದು ನಮ್ಮ ಕಣ್ಣ ಮುಂದೆ ಇದೆ. ಈ ಸಾವು-ನೋವುಗಳನ್ನು ಮರೆಯುವ ಮುನ್ನವೇ ವಿಭಿನ್ನ ಮತ್ತು ತೀಕ್ಷ್ಣವಾದ ರೀತಿಯಲ್ಲಿ ಕೋವಿಡ್ ಮರಳಿ ಬಂದಿದೆ. ಬೇಡಿಕೆ-ಪೂರೈಕೆಗಳ ಅಂತರ ಜಾಸ್ತಿಯಾಗಿ ಮುಗ್ಧ ಜನರ ಸಂಕಷ್ಟ ಮುಗಿಲು ಮುಟ್ಟಿದೆ.

ಕಳೆದ ಬಾರಿಯ ಘಟನೆಗಳನ್ನು ಅರಿತಿರುವ ಕೇಂದ್ರ ಸರ್ಕಾರ ಮೂರು ತಿಂಗಳ ಮಟ್ಟಿಗೆ ಉಚಿತ ಆಹಾರವನ್ನು ಒದಗಿಸುವ ಯೋಜನೆಯನ್ನು ರೂಪಿಸಿದೆ. ಆದರೆ ಯೋಜನೆ ಸರಿಯಾದ ಫಲಾನುಭವಿಗಳಿಗೆ ಸೇರುವಂತೆ ಆಡಳಿತ ಯಂತ್ರ ನೋಡಿಕೊಳ್ಳಬೇಕು. ಆಹಾರಧಾನ್ಯ ಹಾಗೂ ದಿನಸಿ ಪೊಟ್ಟಣಗಳು ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಕೊಳೆತು ತಿಪ್ಪೆ ಸೇರದಿರುವಂತೆ ಅಥವಾ ಉಳ್ಳವರ ಪಾಲಾಗದಂತೆ ಎಚ್ಚರ ವಹಿಸಬೇಕು.

ಎಚ್.ವೆಂಕಟೇಶ ದೊಡ್ಡೇರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ಪಶ್ಚಿಮ ಬಂಗಾಳ: ಸೆಣಿಸಿ ಗೆದ್ದ 'ಬಂಗಾಳ ಹುಲಿ'


ಮಮತಾ ಬ್ಯಾನರ್ಜಿ

ಪಶ್ಚಿಮ ಬಂಗಾಳ ವಿಧಾನಸಭೆಗೆ ಈ ಬಾರಿ ನಡೆದದ್ದು ಬರೀ ಚುನಾವಣೆ ಅಲ್ಲ, ಅದು ಸೆಣಸಾಟ ಮತ್ತು ಬೀದಿಹೋರಾಟ. ಯಾವುದೇ ರಾಜ್ಯದ ವಿಧಾನಸಭಾ ಚುನಾವಣೆಯು ಇಷ್ಟು ಜಿದ್ದಿನಿಂದ ನಡೆದಿರಲಿಕ್ಕಿಲ್ಲ. ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಶ್ಚಿಮ ಬಂಗಾಳದಲ್ಲಿ ಅಧಿಕಾರ ಹಿಡಿಯಲೇಬೇಕು ಎಂಬ ಹಟಕ್ಕೆ ಬಿದ್ದಿದ್ದರು. ಬಿಜೆಪಿ ಅಧಿಕಾರಕ್ಕೆ ಬರಲು ಬಿಡಲೇಬಾರದು ಎಂದು ಟಿಎಂಸಿ ಮುಖ್ಯಸ್ಥೆ ಮತ್ತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪಣ ತೊಟ್ಟಿದ್ದರು. ಈ ಮೂವರು ನಾಯಕರ ಜಿದ್ದು ಚುನಾವಣೆಯನ್ನು ಸೆಣಸಾಟವಾಗಿ ಮಾರ್ಪಡಿಸಿತು.

ಇದಕ್ಕೆ ಮುಖ್ಯ ಕಾರಣ 2019ರ ಲೋಕಸಭಾ ಚುನಾವಣೆಯ ಫಲಿತಾಂಶ. ಈ ಚುನಾವಣೆಯಲ್ಲಿ, ಇಲ್ಲಿನ 42 ಕ್ಷೇತ್ರಗಳ ಪೈಕಿ 18ರಲ್ಲಿ ಬಿಜೆಪಿ ಗೆದ್ದಿತು. ವಿಧಾನಸಭೆಯ 294 ಕ್ಷೇತ್ರಗಳ ಪೈಕಿ 122ರಲ್ಲಿ ಆ ಪಕ್ಷಕ್ಕೆ ಮುನ್ನಡೆ ಸಿಕ್ಕಿತ್ತು. ಪಶ್ಚಿಮ ಬಂಗಾಳದಲ್ಲಿ ಅಧಿಕಾರವು ಕೈಯಳತೆ ದೂರದಲ್ಲಿದೆ ಎಂದು ಬಿಜೆಪಿ ಭಾವಿಸಿದ್ದು ಸಹಜವೇ. ಆದರೆ, ಅಧಿಕಾರ ಪಡೆಯಲು ಅಳವಡಿಸಿಕೊಂಡ ವಿಧಾನಗಳ ಬಗ್ಗೆ ಮಾತ್ರ ವ್ಯಾಪಕ ಟೀಕೆ ವ್ಯಕ್ತವಾಗಿದೆ.

ದೇಶದ ವಿವಿಧ ಭಾಗಗಳು ಕೋವಿಡ್–19ರ ಎರಡನೇ ಅಲೆಯಿಂದ ತತ್ತರಿಸಿರುವ ಸಂದರ್ಭದಲ್ಲಿಯೂ ಮೋದಿ ಮತ್ತು ಶಾ ಅವರು ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಆಪಾದಿಸಿದ್ದರು.


ನರೇಂದ್ರ ಮೋದಿ


ಅಮಿತ್ ಶಾ

ಕೋವಿಡ್ ತಂದೊಡ್ಡಿದ ಕ್ರೌರ್ಯ ದಿನಗಳೆದಂತೆ ಹೆಚ್ಚುತ್ತಲೇ ಇತ್ತು. ಆದರೆ, ಬಿಜೆಪಿಯ ಘಟಾನುಘಟಿ ನಾಯಕರೆಲ್ಲ ರಾಜ್ಯದಲ್ಲಿ ಪ್ರಚಾರ ನಡೆಸಿದರು. ಮೋದಿ, ಶಾ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ರ‍್ಯಾಲಿಗಳಿಗೆ ಸಾವಿರಾರು ಜನರು ಸೇರುತ್ತಿದ್ದರು.

ಸಿಬಿಐನಂತಹ ಕೇಂದ್ರದ ಸಂಸ್ಥೆಗಳನ್ನು ಬಿಜೆಪಿ ತಮ್ಮ ವಿರುದ್ಧ ಕಳೆದ ಕೆಲವು ವರ್ಷಗಳಿಂದಲೇ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಮಮತಾ ಹಲವು ಬಾರಿ ಆರೋಪಿಸಿದ್ದಾರೆ. ಅದಕ್ಕೆ ಪುಷ್ಟಿ ನೀಡುವಂತೆ ಚುನಾವಣಾ ಪ್ರಕ್ರಿಯೆಯ ಮಧ್ಯದಲ್ಲಿಯೂ ಮಮತಾ ಅವರ ಸೋದರಳಿಯನ ಮನೆಯಲ್ಲಿ ಶೋಧ ನಡೆಯಿತು.

ಚುನಾವಣಾ ಆಯೋಗವನ್ನು ಕೂಡ ಬಿಜೆಪಿ ಬಳಸಿಕೊಂಡಿತು ಎಂಬುದು ಮಮತಾ ಅವರ ಆರೋಪ. ಮೋದಿ, ಶಾ ಅವರಿಗೆ ಪ್ರಚಾರಕ್ಕೆ ಹೆಚ್ಚು ಸಮಯ ಸಿಗಲಿ ಎಂಬ ಕಾರಣಕ್ಕೇ ಮತದಾನವನ್ನು ಎಂಟು ಹಂತದಲ್ಲಿ ನಡೆಸಲಾಗಿದೆ ಎಂದು ಮಮತಾ ಹೇಳಿದ್ದಾರೆ. ಮೋದಿ ಸೇರಿದಂತೆ ಬಿಜೆಪಿಯ ಹಲವು ಮುಖಂಡರು ಕೋಮು ಧ್ರುವೀಕರಣದ ಹೇಳಿಕೆ ಕೊಟ್ಟಿದ್ದಾರೆ. ಮಮತಾ ಅವರನ್ನು 'ಬೇಗಂ' ಎಂದು ಕರೆಯಲಾಗಿದೆ. ಅವರ ವಿರುದ್ಧ ಯಾವುದೇ ಕ್ರಮವನ್ನು ಆಯೋಗವು ಕೈಗೊಂಡಿಲ್ಲ. ಆದರೆ, ಮಮತಾ ಅವರಿಗೆ ಒಂದು ದಿನದ ಪ್ರಚಾರ ನಿಷೇಧದ ಶಿಕ್ಷೆ ವಿಧಿಸಿತ್ತು.

ಪ್ರಚಾರದ ಆರಂಭದಲ್ಲಿಯೇ ಮಮತಾ ಅವರು ನಂದಿಗ್ರಾಮದಲ್ಲಿ ಗಾಯಗೊಂಡರು. ಕಾಲಿನ ಗಾಯಕ್ಕೆ ಪ್ಲಾಸ್ಟರ್ ಹಾಕಿಸಿಕೊಂಡು ಗಾಲಿಕುರ್ಚಿಯಲ್ಲಿಯೇ ಪ್ರಚಾರದ ಮುಂಚೂಣಿಯಲ್ಲಿದ್ದ ಮಮತಾ ಅವರದ್ದು ಒಂದು ಲೆಕ್ಕದಲ್ಲಿ ಏಕಾಂಗಿ ಹೋರಾಟ ಕೂಡ. 294 ಕ್ಷೇತ್ರಗಳ ಪೈಕಿ 213ರಲ್ಲಿ ಟಿಎಂಸಿ ಗೆದ್ದಿದೆ. ಹೋರಾಟಕ್ಕೆ ತಕ್ಕ ಗೆಲುವು ಅವರಿಗೆ ಸಿಕ್ಕಿದೆ.

ಬಿಜೆಪಿಯ ಅಬ್ಬರದ ಪ್ರಚಾರದ ಜತೆಗೆ ಇನ್ನೂ ಹಲವು ತೊಡಕುಗಳು ಮಮತಾ ಮುಂದಿದ್ದವು. ಟಿಎಂಸಿಯ ಪ್ರಮುಖ ಮುಖಂಡರಲ್ಲಿ ಹಲವರನ್ನು ಬಿಜೆಪಿ ಸೆಳೆದುಕೊಂಡಿತ್ತು. ಆದರೆ, ಬಿಜೆಪಿಯನ್ನು ವಿರೋಧಿಸುವ ಹಲವು ಪಕ್ಷಗಳು ಮಮತಾ ಬೆಂಬಲಕ್ಕೆ ನಿಂತಿದ್ದವು. ಶಿವಸೇನಾ ಅಂತೂ ಅವರನ್ನು 'ಬಂಗಾಳದ ಹುಲಿ' ಎಂದೇ ಕರೆದಿತ್ತು.

ಮರುಕಳಿಸಿದ ಹಿಂಸೆಯ ಇತಿಹಾಸ

ಮತದಾನ ಆರಂಭಕ್ಕೂ ಮುನ್ನ, ಕಳೆದ ಡಿ.10ರಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಬೆಂಗಾವಲು ವಾಹನದ ಮೇಲೆ ದಾಳಿನಡೆಯಿತು. ಈ ಬಾರಿಯ ಚುನಾವಣೆಯಲ್ಲಿ ಭಾರಿ ಪ್ರಮಾಣದಲ್ಲಿ ಹಿಂಸಾಚಾರ ನಡೆಯುವ ಸಾಧ್ಯತೆ ಇದೆ ಎಂಬ ಸೂಚನೆಯನ್ನು ಆ ಘಟನೆ ನೀಡಿತ್ತು.

'ಲೋಕಸಭಾ ಚುನಾವಣೆಯ ನಂತರ ನಮ್ಮ ಪಕ್ಷದ 130ಕ್ಕೂ ಹೆಚ್ಚು ಕಾರ್ಯಕರ್ತರ ಹತ್ಯೆ ನಡೆದಿದೆ' ಎಂದು ಬಿಜೆಪಿ ಹೇಳಿದೆ. ಬಿಜೆಪಿಯು ಚುನಾವಣೆಗೂ ಮುನ್ನ ಬಿಡುಗಡೆ ಮಾಡಿದ್ದ ಕಿರು ಪುಸ್ತಕದಲ್ಲಿ, ಹಿಂದಿನ ಐದು ವರ್ಷಗಳಲ್ಲಿ ಹತ್ಯೆಯಾದ 107 ಮಂದಿ ಬಿಜೆಪಿ ಕಾರ್ಯಕರ್ತರ ಹೆಸರನ್ನು ಸಹ ಪ್ರಕಟಿಸಿತ್ತು. ಇದು ಸುಳ್ಳು ಎಂದು ಹೇಳಿದ್ದ ಮಮತಾ, '1998ರಿಂದ ಈವರೆಗೆ ಟಿಎಂಸಿಯ 1,000 ಕಾರ್ಯಕರ್ತರ ಹತ್ಯೆ ನಡೆದಿದೆ' ಎಂದಿದ್ದರು.

ಚುನಾವಣಾ ಗಲಭೆಗಳನ್ನು ನಿಯಂತ್ರಿಸುವ ಸಲುವಾಗಿಯೇ ಚುನಾವಣಾ ಆಯೋಗವು ಅತಿ ಹೆಚ್ಚು ಭದ್ರತಾ ವ್ಯವಸ್ಥೆಗಳನ್ನು ಮಾಡಿಕೊಂಡಿತ್ತು. ಆದರೂ ಹಿಂಸಾಚಾರ ಮತ್ತು ಹತ್ಯೆಗಳನ್ನು ತಡೆಯಲು ಸಾಧ್ಯವಾಗಲಿಲ್ಲ. ಕಚ್ಚಾ ಬಾಂಬ್, ನಾಡಪಿಸ್ತೂಲ್‌ಗಳನ್ನು ಬಳಸಿ ಹತ್ಯೆಗಳನ್ನು ನಡೆಸಲಾಗಿದೆ. ಕೂಚ್‌ಬಿಹಾರದಲ್ಲಿ ಮತದಾರರು ಮತ್ತು ಭದ್ರತಾಪಡೆಗಳ ನಡುವೆಯೇ ಸಂಘರ್ಷ ನಡೆಯಿತು. ಭದ್ರತಾಪಡೆಯ ಸಿಬ್ಬಂದಿ ಗುಂಡುಹಾರಿಸಿದ್ದರಿಂದ ಐವರು ಪ್ರಾಣಬಿಡುವಂತಾಗಿತ್ತು.

'ಹಿಂಸಾಚಾರ ಎಂಬುದು ಬಂಗಾಳದ ರಾಜಕೀಯದಲ್ಲಿ ರಕ್ತಗತವಾಗಿ ಬಂದಿದೆ. ಆದ್ದರಿಂದ ಅದನ್ನು ತಡೆಯುವುದು ಅಸಾಧ್ಯ. ಘಟನೆಯ ನಂತರ ಪಕ್ಷಗಳು ಪರಸ್ಪರರ ಮೇಲೆ ಕೆಲವು ದಿನ ಆರೋಪ–ಪ್ರತ್ಯಾರೋಪಗಳನ್ನು ಮಾಡುತ್ತವೆ. ಚುನಾವಣೆಯ ನಂತರ ಎಲ್ಲರೂ ಎಲ್ಲವನ್ನೂ ಮರೆಯುತ್ತಾರೆ ಪ್ರಾಣ ಕಳೆದುಕೊಂಡ ವ್ಯಕ್ತಿಯ ಕುಟುಂಬದವರ ನೋವು ಮಾತ್ರ ಉಳಿದಿರುತ್ತದೆ' ಎಂದು ವಿಶ್ಲೇಷಕರು ಹೇಳುತ್ತಾರೆ.

ಧ್ರುವೀಕರಣಕ್ಕೆ ಸಿಗದ ಮನ್ನಣೆ

ಪಶ್ಚಿಮ ಬಂಗಾಳದಲ್ಲಿ ಅಧಿಕಾರ ಹಿಡಿಯಲು ಬಿಜೆಪಿಯು 'ಸಕಲ ಪ್ರಯತ್ನ'ಗಳನ್ನು ಮಾಡಿದ್ದರೂ ಅವುಗಳನ್ನು ವಿಫಲಗೊಳಿಸಿ, ಅಧಿಕಾರ ಉಳಿಸಿಕೊಳ್ಳುವಲ್ಲಿ ಮಮತಾ ಯಶಸ್ವಿಯಾದರು. 'ಮಮತಾ ಅವರ ಜನಕಲ್ಯಾಣ ಯೋಜನೆಗಳು ಅವರ ಗೆಲುವಿಗೆ ಸಹಕಾರಿಯಾದವು' ಎಂಬ ಅಭಿಪ್ರಾಯವಿದೆ. 'ಹಿಂದುತ್ವ'ದ ಕಾರ್ಯಸೂಚಿ ಇಟ್ಟುಕೊಂಡು ಬಂಗಾಳವನ್ನು ಗೆಲ್ಲುವ ಪ್ರಯತ್ನವನ್ನು ಬಿಜೆಪಿ ಮಾಡಿತ್ತು. ಆದರೆ, ಅಲ್ಲಿನ ಹಿಂದೂಗಳು ಬಿಜೆಪಿಯನ್ನು ಸ್ವೀಕರಿಸಲಿಲ್ಲ. ಇದೇ ಬಿಜೆಪಿಯ ಸೋಲಿಗೆ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ.

ಧರ್ಮದ ಆಧಾರದಲ್ಲಿ ಮತಗಳ ಧ್ರುವೀಕರಣವು ಬಿಜೆಪಿಗೆ ಸಹಕಾರಿಯಾಗಲಿಲ್ಲ. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಮುಸ್ಲಿಮರ ಸಂಖ್ಯೆ ಕಡಿಮೆ ಇರುವ ಕ್ಷೇತ್ರಗಳಲ್ಲಿ ಬಿಜೆಪಿ ಹೆಚ್ಚಿನ ಮತಗಳನ್ನು ಪಡೆದಿತ್ತು ಎಂಬುದು ನಿಜ. ಆದರೆ ವಿಧಾನಸಭಾ ಚುನಾವಣೆಯಲ್ಲಿ ಆ ಕ್ಷೇತ್ರಗಳಲ್ಲೇ ಶೇ 80ರಷ್ಟನ್ನು ಟಿಎಂಸಿ ಗೆದ್ದುಕೊಂಡಿದೆ. ಹಿಂದುತ್ವದ ಆಧಾರದಲ್ಲಿ ಬಿಜೆಪಿಗೆ ಮತನೀಡಲು ಈ ಕ್ಷೇತ್ರಗಳ ಮತದಾರರು ನಿರಾಕರಿಸಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗಿದೆ.

ಇನ್ನೊಂದೆಡೆ, ಮುಸ್ಲಿಂ ಸಮುದಾಯ ಈ ಬಾರಿ ಟಿಎಂಸಿ ಬೆನ್ನಿಗೆ ಗಟ್ಟಿಯಾಗಿ ನಿಂತಿದೆ. ರಾಜ್ಯದಲ್ಲಿ ಸುಮಾರು 110 ಕ್ಷೇತ್ರಗಳಲ್ಲಿ ಮುಸ್ಲಿಂ ಮತಗಳು ನಿರ್ಣಾಯಕವಾಗಿವೆ. ಟಿಎಂಸಿಯು ಇದರ ಲಾಭವನ್ನು ಪಡೆದಿದೆ. ಮತ ಧ್ರುವೀಕರಣದ ಲಾಭ ಬಿಜೆಪಿಗಿಂತ ಹೆಚ್ಚಾಗಿ ಟಿಎಂಸಿಗೆ ಆಗಿದೆ.

ರಾಜ್ಯದ ಮಹಿಳೆಯರು ಈ ಚುನಾವಣೆಯಲ್ಲೂ 'ದೀದಿ'ಯ ಕೈಬಿಟ್ಟಿಲ್ಲ ಎಂಬುದು ಇನ್ನೊಂದು ಪ್ರಮುಖ ಅಂಶವಾಗಿದೆ. ಮಹಿಳೆಯರಿಗಾಗಿ ಕೇಂದ್ರ ಘೋಷಿಸಿರುವ ವಿವಿಧ ಯೋಜನೆಗಳು ಮತಗಳಿಕೆಗೆ ನೆರವಾಗಬಹುದೆಂಬ ಬಿಜೆಪಿಯ ನಿರೀಕ್ಷೆ ಹುಸಿಯಾಗಿದೆ. ಬದಲಿಗೆ, ಮಹಿಳೆಯರು ಮಮತಾ ಮೇಲೆಯೇ ಹೆಚ್ಚಿನ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ದೀದಿಗೆ ಮೋದಿ ಲೇವಡಿ

ಪಶ್ಚಿಮ ಬಂಗಾಳದ ಚುನಾವಣೆ ಪ್ರಚಾರದ ವೇಳೆ ಮೋದಿ ಅವರು ಮಮತಾ ಅವರನ್ನು 'ದೀದಿ ಓ ದೀದಿ, ದೀದಿ ಓ ದೀದಿ' ಎಂದು ಲೇವಡಿಯ ರೀತಿಯಲ್ಲಿ ಕರೆದದ್ದು ಭಾರಿ ಆಕ್ಷೇಪಕ್ಕೆ ಕಾರಣವಾಗಿತ್ತು. ಪ್ರಧಾನಿಯ ಈ ಮಾತನ್ನು ಮಹಿಳಾ ವಿರೋಧಿ ಎಂದು ಟಿಎಂಸಿ ಬಿಂಬಿಸಿದೆ. 'ಇದು ಮಮತಾ ಅವರಿಗೆ ಮಾತ್ರವಲ್ಲ, ಬಂಗಾಳದ ಎಲ್ಲಾ ಮಹಿಳೆಯರಿಗೆ ಮಾಡಿದ ಅವಮಾನ. ಪುಂಡ ಪೋಕರಿಗಳು ಮಹಿಳೆಯರನ್ನು ರೇಗಿಸುವ ರೀತಿಯಲ್ಲಿ ಮೋದಿ ಮಾತನಾಡಿದ್ದಾರೆ' ಎಂದು ಸಂಸದೆ ಮಹುವಾ ಮೊಯಿತ್ರಾ ಕಿಡಿಕಾರಿದ್ದರು.

ಮಮತಾ ಮೇಲೆ ವಾಗ್ದಾಳಿ ಮುಂದುವರಿಸಿದ ಪ್ರಧಾನಿ, 'ಮಮತಾ ಬ್ಯಾನರ್ಜಿ ಅವರು ನಂದಿಗ್ರಾಮದಲ್ಲೇ ಕ್ಲೀನ್‌ಬೋಲ್ಡ್ ಆಗಿದ್ದಾರೆ. ಅವರ ತಂಡದ ಆಟಗಾರರೆಲ್ಲರೂ ಔಟ್ ಆಗಿದ್ದಾರೆ. ಈಗ ಮಮತಾ ತಂಡದವರು ಮೈದಾನ ಬಿಟ್ಟು ನಡೆಯಬೇಕು' ಎಂದು ಪ್ರಧಾನಿ ಲೇವಡಿ ಮಾಡಿದ್ದರು.

2024ರ ಲೋಕಸಭಾ ಚುನಾವಣೆಯಲ್ಲಿ ವಾರಾಣಸಿಯಲ್ಲಿ ಮೋದಿ ವಿರುದ್ಧ ಮಮತಾ ಸ್ಪರ್ಧಿಸಲಿದ್ದಾರೆ ಎಂಬುದನ್ನು ಪ್ರಸ್ತಾಪಿಸಿದ ಮೋದಿ, 'ದೀದಿ ಈಗಾಗಲೇ ಸೋಲನ್ನು ಒಪ್ಪಿಕೊಂಡಿದ್ದಾರೆ' ಎಂದು ಲೇವಡಿ ಮಾಡಿದ್ದರು. ನಂದಿಗ್ರಾಮದಲ್ಲಿ ಮಮತಾ ಸೋಲು ಖಚಿತವಾಗಿದ್ದು, ಮತ್ತೊಂದು ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಪ್ರಧಾನಿ ಸಲಹೆ ನೀಡಿದ್ದರು. ಇದನ್ನು ಮಮತಾ ತಿರಸ್ಕರಿಸಿದ್ದರು.

'ದೆಹಲಿಯಲ್ಲಿ ಚುಕ್ಕಾಣಿ ಹಿಡಿಯುವ ಕನಸು ಕಾಣುತ್ತಿರುವ ಮಮತಾ ಬಂಗಾಳವನ್ನು ದಲ್ಲಾಳಿಗಳಿಗೆ ನೀಡಿದ್ದಾರೆ' ಎಂದು ದೀದಿ ಮೇಲೆ ಮೋದಿ ಮತ್ತೊಂದು ದಾಳ ಎಸೆದಿದ್ದರು. ತೈಲ ಬೆಲೆ ಏರಿಕೆ ಖಂಡಿಸಿ ಸ್ಕೂಟರ್‌ನಲ್ಲಿ ಪ್ರಯಾಣಿಸಿದ ಮಮತಾ ಅವರನ್ನು ಮೋದಿ ಗೇಲಿ ಮಾಡಿದ್ದರು. 'ಯಾರಿಗೂ ನೋವಾಗಬಾರದು ಎಂಬುದು ನಮ್ಮ ಬಯಕೆ. ಆದರೆ ನಂದಿಗ್ರಾಮದಲ್ಲಿ ಸ್ಕೂಟರ್ ಪಲ್ಟಿಯಾದರೆ ನಾವೇನು ಮಾಡಲಾಗುತ್ತದೆ' ಎಂದಿದ್ದರು.

ಸೀತಾಲಕುಚಿಯ ಗಲಭೆಯಲ್ಲಿ ಮೃತಪಟ್ಟವರ ಮೃತದೇಹಗಳನ್ನು ಮೆರವಣಿಗೆ ಮಾಡಬೇಕು ಎಂದು ಮಮತಾ ಅವರು ಹೇಳಿದ್ದಾರೆ ಎನ್ನಲಾದ ಆಡಿಯೊ ಕ್ಲಿಪ್ ವಿವಾದ ಸೃಷ್ಟಿಸಿತ್ತು. ಮಮತಾ ಅವರು ಧ್ವನಿ ಅದಲ್ಲ ಎಂದು ಟಿಎಂಸಿ ಸ್ಪಷ್ಟನೆ ನೀಡಿತ್ತು. ಆದರೆ, 'ಮೃತದೇಹ ಇಟ್ಟುಕೊಂಡು ರಾಜಕೀಯ ಲಾಭ ಮಾಡಿಕೊಳ್ಳಲು ದೀದಿ ಯತ್ನಿಸಿದ್ದಾರೆ. ಇದು ಅವರ ಹವ್ಯಾಸ' ಎಂದು ಪ್ರಧಾನಿ ಛೇಡಿಸಿದ್ದರು.

ಪ್ರಧಾನಿ ಜೊತೆಗೆ ಬಿಜೆಪಿ ನಾಯಕರೂ ದೀದಿ ವಿರುದ್ಧ ಚುನಾವಣೆಯಲ್ಲಿ ಮುಗಿಬಿದ್ದಿದ್ದರು. ಮಮತಾ ಬ್ಯಾನರ್ಜಿ ಅವರ ಪರಿಸ್ಥಿತಿ ಸೋತ ಆಟಗಾರನಂತಾಗಿದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಲೇವಡಿ ಮಾಡಿದ್ದರು. 'ಮಮತಾ ಬ್ಯಾನರ್ಜಿ ಅವರು 'ಜೈ ಶ್ರೀ ರಾಮ್' ಘೋಷಣೆಗಳಿಂದ ಏಕೆ ಕೆರಳುತ್ತಾರೆ' ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಪ್ರಶ್ನಿಸಿದ್ದರು. ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಮಮತಾ ದೀದಿ ಬದಲಾಗಿದ್ದು, ಈಗ ಅವರು ದೇವಸ್ಥಾನಗಳಿಗೆ ಹೋಗಲು ಆರಂಭಿಸಿದ್ದಾರೆ ಎಂದೂ ಟೀಕಿಸಿದ್ದರು.

ಚುನಾವಣೆಯು ಮೋದಿ ಅವರ 'ವಿಕಾಸ ಮಾದರಿ' ಮತ್ತು ಬ್ಯಾನರ್ಜಿ ಅವರ 'ವಿನಾಶ ಮಾದರಿ' ನಡುವಣ ಸ್ಪರ್ಧೆಯಾಗಿರಲಿದೆ ಎಂದು ಅಮಿತ್ ಶಾ ಹೇಳಿದ್ದರು.

ಮಮತಾ ಮಾತಿನ ವರಸೆ

ಮಮತಾ ಅವರೇನೂ ಮಾತಿನ ವರಸೆಯಲ್ಲಿ ಕಡಿಮೆ ಇರಲಿಲ್ಲ. 'ಪ್ರಧಾನಿ ಮೋದಿ ಅವರ ಪ್ರಚಾರ ಸಭೆಗಳಿಗೆ ಪೆಂಡಾಲ್ ಹಾಕಲು, ವೇದಿಕೆ ನಿರ್ಮಿಸಲು ಗುಜರಾತ್‌ನಂಥ ರಾಜ್ಯಗಳಿಂದ ಬಿಜೆಪಿಯವರು ಜನರನ್ನು ಕರೆತಂದಿದ್ದರು. ಬಂಗಾಳದಲ್ಲಿ ಕೋವಿಡ್ ಪಸರಿಸಲು ಇವರೇ ಕಾರಣ' ಎಂದು ಚುಚ್ಚಿದ್ದರು.

ಗಲಭೆ ಪ್ರಕರಣ ಸಂಬಂಧ ಕೂಚ್ ಬಿಹಾರ್ ಜಿಲ್ಲೆಗೆ ಯಾವ ರಾಜಕಾರಣಿಯೂ ಭೇಟಿ ನೀಡದಂತೆ ಆಯೋಗ ಆದೇಶಿಸಿದ್ದಕ್ಕೆ ಮಮತಾ ಕೆಂಡವಾಗಿದ್ದರು. 'ಮಾದರಿ ನೀತಿ ಸಂಹಿತೆಯನ್ನು (ಎಂಸಿಸಿ) 'ಮೋದಿ ನೀತಿ ಸಂಹಿತೆ' ಎಂದು ಬದಲಿಸಿ' ಎಂದು ಆಕ್ರೋಶ ವ್ಯಕ್ತಪಡಿಸಿದ್ದರು.

ಚುನಾವಣಾ ಆಯೋಗ, ಕೇಂದ್ರೀಯ ಪಡೆಗಳ ವಿರುದ್ಧವೂ ತಮ್ಮ ಸಿಟ್ಟನ್ನು ಅವರು ಪ್ರದರ್ಶಿಸಿದ್ದರು. 'ಈ ಚುನಾವಣೆಯನ್ನು ಕೇಂದ್ರ ಚುನಾವಣಾ ಆಯೋಗ ನಡೆಸುತ್ತಿಲ್ಲ. ಗೃಹ ಸಚಿವ ಅಮಿತ್ ಶಾ ನಡೆಸುತ್ತಿದ್ದಾರೆ' ಎಂದು ನೇರವಾಗಿ ದೂರಿದ್ದರು.


ಹೊಸದಾಗಿ ನಿರ್ಮಿಸಲು ಉದ್ದೇಶಿಸಿರುವ ಸಂಸತ್ ಭವನದ ಮಾದರಿ

ಈಗಿನ ಆದ್ಯತೆ ಪ್ರಧಾನಿ ವಸತಿಯೇ?

ಕೇಂದ್ರದ ವಿರುದ್ಧ ಕಾಂಗ್ರೆಸ್ ಆಕ್ರೋಶ

ನವದೆಹಲಿ: ಕೋವಿಡ್ ಸಾಂಕ್ರಾಮಿಕದ ಮಧ್ಯದಲ್ಲೂ ಪರಿಸರ ಮಾಪನ ಸಮಿತಿಯು (ಇಎಸಿ) ಪ್ರಧಾನಿಗೆ ಹೊಸ ವಸತಿ ನಿರ್ಮಿಸುವ ಯೋಜನೆಗೆ ಹಸಿರು ನಿಶಾನೆ ನೀಡಿರುವುದು ವಿವಾದಕ್ಕೆ ಕಾರಣವಾಗಿದೆ. 'ಸರ್ಕಾರದ ಆದ್ಯತೆ ಯಾವುದು' ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ಕೇಂದ್ರೀಯ ಸಚಿವಾಲಯ ಹಾಗೂ ಪ್ರಧಾನಿಯ ವಸತಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಇಎಸಿಯು ಇತ್ತೀಚೆಗೆ ಒಪ್ಪಿಗೆ ಸೂಚಿಸಿತ್ತು. ಮುಂದಿನ ವರ್ಷದ ಡಿಸೆಂಬರ್ ವೇಳೆಗೆ ಇದರ ನಿರ್ಮಾಣ ಪೂರ್ಣಗೊಳ್ಳಲಿದೆ.

'ಜನರು ಔಷಧ, ಆಮ್ಲಜನಕ, ಲಸಿಕೆ ಹಾಗೂ ಬೆಡ್‌ಗಳ ಕೊರತೆ ಎದುರಿಸುತ್ತಿರುವ ಸಂದರ್ಭದಲ್ಲಿ, ಪ್ರಧಾನಿಗೆ ಹೊಸ ಮನೆ ನಿರ್ಮಿಸುವ ಬದಲು, ಸರ್ಕಾರವು ₹13,000 ಕೋಟಿಯನ್ನು ಜನರ ಪ್ರಾಣ ಉಳಿಸುವ ವೈದ್ಯಕೀಯ ಉಪಕರಣಗಳ ಖರೀದಿಗೆ ವೆಚ್ಚ ಮಾಡುವುದು ಸೂಕ್ತ' ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದ್ದಾರೆ.

₹13,450 ಕೋಟಿ ವೆಚ್ಚದ ಸೆಂಟ್ರಲ್ ವಿಸ್ತಾ ಯೋಜನೆಯಡಿ ಈಗಿರುವ ಸಂಸತ್ ಭವನದ ವಿಸ್ತರಣೆ ಹಾಗೂ ಅಭಿವೃದ್ಧಿ ಕಾಮಗಾರಿಗಳಿಗೆ ಕೇಂದ್ರದ ಪರಿಸರ ಸಚಿವಾಲಯದಡಿ ಬರುವ ಇಎಸಿಯು ಈಗಾಗಲೇ ಹಸಿರು ನಿಶಾನೆ ನೀಡಿದೆ.

'ಸೆಂಟ್ರಲ್ ವಿಸ್ತಾ ಯೋಜನೆಗಾಗಿ ವೆಚ್ಚ ಮಾಡಲು ಉದ್ದೇಶಿಸಿರುವ ಹಣದಲ್ಲಿ ದೇಶದ 45 ಕೋಟಿ ಜನರಿಗೆ ಲಸಿಕೆ ನೀಡಬಹುದು. ಅಥವಾ ಆಮ್ಲಜನಕದ ಒಂದು ಕೋಟಿ ಸಿಲಿಂಡರ್ ಖರೀದಿಸಲು ಸಹಾಯ ನೀಡಬಹುದು ಅಥವಾ ಎರಡು ಕೋಟಿ ಕುಟುಂಬಗಳಿಗೆ ₹6000 ಕನಿಷ್ಠ ಆದಾಯ ಬೆಂಬಲ ಒದಗಿಸಬಹುದು. ಆದರೆ, ಪ್ರಧಾನಿಯ 'ಅಹಂ' ಜನರ ಜೀವಕ್ಕಿಂತ ಹಿರಿದಾಗಿದೆ' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಟೀಕಿಸಿದ್ದಾರೆ.

ಜಿಲ್ಲಾ ಪಂಚಾಯಿತಿ ಚುನಾವಣೆ

ಉತ್ತರ ಪ್ರದೇಶ ಬಿಜೆಪಿಗೆ ಹಿನ್ನಡೆ

ಪ್ರಜಾವಾಣಿ ವಾರ್ತೆ

ಲಖನೌ: ದೇವಸ್ಥಾನಗಳ ನಾಡು ಕಾಶಿ, ಮಥುರಾ ಮತ್ತು ಗೋರಖಪುರದಲ್ಲಿ ಬಿಜೆಪಿಗೆ ಹಿನ್ನಡೆಯಾಗಿದೆ. ಉತ್ತರ ಪ್ರದೇಶ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಮೂರೂ ಜಿಲ್ಲೆಗಳಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಕಳಪೆ ಸಾಧನೆ ಮಾಡಿದ್ದಾರೆ.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ತವರು ಜಿಲ್ಲೆ ಗೋರಖಪುರದಲ್ಲಿ ಸಮಾಜವಾದಿ ಪಕ್ಷದ ಅಭ್ಯರ್ಥಿಗಳು ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಿಗಿಂತ ಮುನ್ನಡೆ ಕಾಯ್ದುಕೊಂಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭೆಯಲ್ಲಿ ಪ್ರತಿನಿಧಿಸುವ ವಾರಾಣಸಿಯ 40 ಜಿಲ್ಲಾ ಪಂಚಾಯತ್ ಸ್ಥಾನಗಳ ಪೈಕಿ ಎಂಟು ಸ್ಥಾನಗಳನ್ನು ಗೆಲ್ಲಲಷ್ಟೇ ಬಿಜೆಪಿಗೆ ಸಾಧ್ಯವಾಗಿದೆ. ಎಸ್‌ಪಿ ಬೆಂಬಲಿತರು 24ರಲ್ಲಿ ಗೆದ್ದಿದ್ದಾರೆ.

ಮಥುರಾದಲ್ಲೂ ಬಿಜೆಪಿ ಬೆಂಬಲಿತರು ಎಂಟು ಸ್ಥಾನಗಳಲ್ಲಿ ಗೆದ್ದಿದ್ದಾರೆ. ಬಿಎಸ್‌ಪಿ ಮತ್ತು ಆರ್‌ಎಲ್‌ಡಿ ಪಕ್ಷಗಳ ಬೆಂಬಲಿತರು ಕ್ರಮವಾಗಿ 12 ಮತ್ತು 9ರಲ್ಲಿ ಗೆಲುವು ದಾಖಲಿಸಿದ್ದಾರೆ. ಅಯೋಧ್ಯೆಯಲ್ಲೂ 40 ಕ್ಷೇತ್ರಗಳ ಪೈಕಿ ಕೇವಲ 6ರಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಗೆದ್ದಿದ್ದಾರೆ. ಎಸ್‌ಪಿ ಉಮೇದುವಾರರು 24ರಲ್ಲಿ ಜಯಿಸಿದ್ದಾರೆ.

ಕೇಂದ್ರದ ಕೃಷಿ ಕಾನೂನುಗಳನ್ನು ವಿರೋಧಿಸಿ ಕಳೆದ ಹಲವು ತಿಂಗಳುಗಳಿಂದ ಉತ್ತರ ಪ್ರದೇಶ-ದೆಹಲಿ ಗಡಿಯಲ್ಲಿ ಧರಣಿ ನಡೆಸುತ್ತಿರುವ ರೈತರ ವಿರೋಧದಿಂದಾಗಿ, ರಾಜ್ಯದ ಪಶ್ಚಿಮ ಭಾಗದಲ್ಲಿ ಬಿಜೆಪಿ ಪ್ರದರ್ಶನ ಕಳಪೆಯಾಗಿದೆ ಎಂದು ವರದಿಗಳು ಹೇಳಿವೆ.

ಎಸ್‌ಪಿ ಬೆಂಬಲಿತ ಅಭ್ಯರ್ಥಿಗಳು ಮೈನ್‌ಪುರಿ ಮತ್ತು ಇಟವಾ ಜಿಲ್ಲೆಗಳಲ್ಲಿ ಬಹುಪಾಲು ಜಿಲ್ಲಾ ಪಂಚಾಯತ್ ಸ್ಥಾನಗಳನ್ನು ಪಡೆದಿದ್ದಾರೆ ಎಂದು ವರದಿಗಳು ತಿಳಿಸಿವೆ. ರಾಜ್ಯದ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಎಎಪಿ ಬೆಂಬಲಿತ 70 ಅಭ್ಯರ್ಥಿಗಳು ಗೆದ್ದಿದ್ದಾರೆ ಎಂದು ಪಕ್ಷ ಹೇಳಿದೆ. ಮತಗಳ ಎಣಿಕೆ ಇನ್ನೂ ಮುಂದುವರಿದಿದ್ದು, ಬುಧವಾರದ ವೇಳೆಗೆ ಅಂತಿಮ ಫಲಿತಾಂಶ ನಿರೀಕ್ಷಿಸಲಾಗಿದೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮುಖಕ್ಕೆ ಧರಿಸುವ ಮಾಸ್ಕ್‌ಗಳು ಬರಿಗಣ್ಣಿಗೆ ಕಾಣದ ಬ್ಯಾಕ್ಟೀರಿಯಾಗಳನ್ನು ಹೊಂದಿವೆ. ಇಂತಹ ಮಾಸ್ಕ್ ಧರಿಸಿದರೆ ಕೋವಿಡ್ ಬರುತ್ತದೆ ಎಂಬುದಾಗಿ ವ್ಯಕ್ತಿಯೊಬ್ಬರು ಹೇಳುತ್ತಿರುವ ವಿಡಿಯೊ ವೈರಲ್ ಆಗಿದೆ. ಮಾಸ್ಕ್ ಅನ್ನು ಕೊಂಚ ಬಿಸಿ ಮಾಡಿದರೆ ಕೀಟಗಳು ಕಾಣುತ್ತವೆ. ಸೂಕ್ಷ್ಮದರ್ಶಕದಲ್ಲಿ ಗಮನಿಸಿದರೆ ಗೋಚರಿಸುತ್ತವೆ. ಹೀಗಾಗಿ ಮನೆಯಲ್ಲಿ ಬಟ್ಟೆ ಬಳಸಿ ತಯಾರಿಸಿದ ಮಾಸ್ಕ್ ಧರಿಸುವಂತೆ ಆ ವ್ಯಕ್ತಿ ಸಲಹೆ ನೀಡಿದ್ದಾರೆ.



ಸೂಕ್ಷ್ಮದರ್ಶಕದಲ್ಲಿ ಕಾಣುವವು ಕೀಟಗಳಲ್ಲ. ಅವು ನಿರುಪದ್ರವಿ ಮೈಕ್ರೋಫೈಬರ್ ಎಳೆಗಳು ಎಂಬುದಾಗಿ ವಿಜ್ಞಾನಿ ಸ್ಪಷ್ಟಪಡಿಸಿದ್ದಾರೆ. ಬಿಸಿ ಮಾಡಿದಾಗ ಈ ಎಳೆಗಳು ಚಲಿಸಿದಂತೆ ಕಾಣುತ್ತವೆ. ವಿಡಿಯೊದಲ್ಲಿರುವ ವ್ಯಕ್ತಿ ತಿಳಿಸುವಂತೆ ಇವುಗಳಿಂದ ಕೋವಿಡ್ ಬರುವುದಿಲ್ಲ. ವಿಶ್ವ ಆರೋಗ್ಯ ಸಂಸ್ಥೆ ಮತ್ತು ಕೇಂದ್ರ ಆರೋಗ್ಯ ಸಚಿವಾಲಯ ಸಹ ಮಾಸ್ಕ್ ಬಳಕೆಯನ್ನು ಶಿಫಾರಸು ಮಾಡಿವೆ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಭಯಂಕರ ಸಂಚು

ನಮ್ಮಿಂದ ಸೋತು ಓಡಿಹೋದ ಬ್ರಹ್ಮದತ್ತ ರಾಜ ತನ್ನ ಮಗಳನ್ನು ವಿದೇಹ ರಾಜನಿಗೆ ಯಾಕೆ ಕೊಡಬಯಸುತ್ತಾನೆ? ತನ್ನಿಂದ ಅಪಮಾನಿತನಾದ ಕೇವಟ್ಟನಿಗೆ ಈ ಸಂಬಂಧದಿಂದ ಏನು ಲಾಭ? ಎಂದೆಲ್ಲ ಮಹೋಷಧಕುಮಾರ ಚಿಂತಿಸಿದ. ಅವನ ಚಾಣಾಕ್ಷ ದೂತರೂ ಈ ಯೋಜನೆಯನ್ನು ಮಾಡಿದ್ದು ಯಾರು ಎಂಬುದನ್ನು ಹೇಳಲಿಲ್ಲ. ಆದರೆ ಒಂದು ವಿಷಯ ಮಾತ್ರ ತಿಳಿಯಿತು. ಈ ಯೋಜನೆಯನ್ನು ಮಾಡಿದ್ದು ಅರಮನೆಯ ಮೇಲಂತಸ್ತಿನಲ್ಲಿ ಮತ್ತು ಕೇವಲ ರಾಜ ಮತ್ತು ಮಂತ್ರಿ ಕೇವಟ್ಟರಿಬ್ಬರೇ ಇದ್ದರು. ಇವರೊಂದಿಗೆ ಇದ್ದದ್ದು ರಾಜನ ಪ್ರೀತಿಯ ಮೈನಾ ಪಕ್ಷಿ. ಇಷ್ಟು ವಿಷಯ ಸಾಕಾಯಿತು ಮಹೋಷಧಕುಮಾರನಿಗೆ.

ತಕ್ಷಣವೇ ತಾನು ಸಾಕಿದ ಅತ್ಯಂತ ಬುದ್ಧಿವಂತನಾದ ಮಾಢವನೆಂಬ ಗಿಳಿಮರಿಯನ್ನು ಕರೆದು ಹೇಳಿದ, 'ನನ್ನ ಪ್ರೀತಿಯ ಗಿಳಿಮರಿ, ನೀನು ಈಗ ಒಂದು ಮುಖ್ಯ ಕೆಲಸವನ್ನು ಮಾಡಬೇಕು. ರಾಜ ಬ್ರಹ್ಮದತ್ತನ ಅರಮನೆಗೆ ಹೋಗಿ ಮೇಲಿನ ಅಂತಸ್ತಿನಲ್ಲಿರುವ ಹೆಣ್ಣು ಮೈನಾದೊಂದಿಗೆ ಸ್ನೇಹ ಮಾಡಿಕೊಂಡು, ಅಂದು ರಾಜ ಮತ್ತು ಮಂತ್ರಿಗಳ ನಡುವೆ ಆದ ಚರ್ಚೆಯ ವಿಷಯವನ್ನು ತಿಳಿದು ಬಾ'. ಗಿಳಿಮರಿ ಹಾರಿ ಬ್ರಹ್ಮದತ್ತನ ಅರಮನೆ ಸೇರಿತು. ಅತ್ಯಂತ ಮೃದು-ಮಧುರ ಮಾತುಗಳಿಂದ ಮೈನಾದ ಪ್ರೀತಿಯನ್ನು ಒಂದೇ ದಿನದಲ್ಲಿ ಸಂಪಾದಿಸಿತು. ಮೈನಾ ಗಿಳಿಯಿಂದ ಆಕರ್ಷಿತವಾಗಿ ತನಗೆ ದೊರೆತ ರುಚಿಯಾದ ಪಾಯಸವನ್ನು, ಹಣ್ಣುಗಳನ್ನು ಗಿಳಿಗೆ ನೀಡಿತು. ಮೈನಾ ಒಲವಿನಿಂದ ಕೇಳಿತು, 'ಗಿಳಿಯೇ ನೀನು ಯಾರು? ಎಲ್ಲಿಂದ ಬಂದೆ? ಏನು ನಿನ್ನ ಕಥೆ?'. ಬುದ್ಧಿವಂತ ಗಿಳಿ ಒಂದು ಮನೋವೇದಕವಾದ ಕಥೆಯನ್ನೇ ಕಟ್ಟಿತು. 'ನಾನು ಮತ್ತು ನನ್ನ ಹೆಂಡತಿ ತುಂಬ ಸಂತೋಷವಾಗಿ ಒಬ್ಬ ರಾಜನ ಅರಮನೆಯಲ್ಲಿದ್ದೆವು. ನನ್ನ ಅತ್ಯಂತ ಸುಂದರಳಾದ ಪತ್ನಿ ಗರ್ಭಿಣಿಯಾಗಿದ್ದಳು. ಒಂದು ದಿನ ರಾಜನ ಈಜುಕೊಳದಲ್ಲಿ ನಾವಿಬ್ಬರೂ ಮನಸಾರೆ ಕ್ರೀಡಿಸಿ ಹೊರಬಂದು ಕುಳಿತಾಗ ಒಂದು ರಣಹದ್ದು ಹಾರಿಬಂದು ಆಕೆಯನ್ನು ಹಿಡಿದುಕೊಂಡು ಹೋಗಿಬಿಟ್ಟಿತು. ನಾನು ಎಷ್ಟೇ ಆರ್ತತೆಯಿಂದ ಅತ್ತು, ಕಾಡಿ, ಬೇಡಿದರೂ ಅದು ಕರುಣೆ ತೋರದೆ ಕತ್ತು ಕತ್ತರಿಸಿ ಕೊಂದು ಹಾಕಿತು. ಅದನ್ನು ಕಂಡ ರಾಜ, ಮತ್ತೊಬ್ಬಳನ್ನು ಮದುವೆಯಾಗು ಎಂದು ಎಷ್ಟೋ ಹಕ್ಕಿಗಳನ್ನು ತಂದರೂ ನನ್ನ ಮನಸ್ಸಿಗೆ ಸಮಾಧಾನವಾಗದೆ, ಒದ್ದಾಡುತ್ತ, ಹಾರಿ ಇಲ್ಲಿಗೆ ಬಂದಿದ್ದೇನೆ. ನಿನ್ನನ್ನು ನೋಡಿ, ಮನಸ್ಸಿಗೆ ಎಷ್ಟೋ ಹಾಯೆನ್ನಿಸಿದೆ' ಎಂದು ನಿಟ್ಟುಸಿರುಬಿಟ್ಟಿತು. ಮೈನಾ ಕರುಣೆಯಿಂದ ಗಿಳಿಯನ್ನು ಸಂತೈಸಿತು. ಎರಡೂ ಬೇರೆ ಜಾತಿಯ ಪಕ್ಷಿಗಳಾದರೂ ಅವು ಅತ್ಯಂತ ಪ್ರಿಯವಾಗಿಬಿಟ್ಟವು. ಗಿಳಿ, ಮೈನಾಕ್ಕೆ ಹೇಳಿತು, 'ನಿನಗಿಂತ ಸುಂದರವಾದ, ಮೃದುಭಾಷಿಯಾದ ಹೆಂಡತಿಯನ್ನು ನಾನು ಪಡೆಯುವುದು ಸಾಧ್ಯವಿಲ್ಲ. ಆದ್ದರಿಂದ ನನ್ನ, ನಿನ್ನ ನಡುವೆ ಯಾವ ರಹಸ್ಯಗಳೂ ಇರಲಾರವು. ಈ ಅರಮನೆಯ ಸಂಭ್ರಮವನ್ನು ಕಂಡರೆ, ಏನೋ ದೊಡ್ಡ ಉತ್ಸವ ನಡೆಯುವಂತಿದೆ'. ಆಗ ಮೈನಾ, 'ಹೌದು, ಸಂಭ್ರಮ ನಡೆಯುತ್ತದೆ. ನಡೆಯದಿದ್ದರೆ ಚೆನ್ನಾಗಿತ್ತು' ಎಂದಿತು. ಯಾಕೆ ಎಂದು ಕೇಳಿದಾಗ, 'ಮದುವೆಯ ಯೋಜನೆ ಹೊರಗೆ ತೋರುತ್ತದೆ. ಆದರೆ ಒಳಗೆ ಮಾತ್ರ ಭಾರೀ ಅನಾಹುತವಿದೆ. ನಮ್ಮ ರಾಜ ಮತ್ತು ಕುಹಕಿ ಮಂತ್ರಿ ಕೇವಟ್ಟ ರಾಜಕುಮಾರಿಯ ಮದುವೆಯ ನೆವಮಾಡಿ ವಿದೇಹರಾಜ ಮತ್ತು ಮಹೋಷಧಕುಮಾರರನ್ನು ಇಲ್ಲಿಗೆ ನಿಶ್ಚಯ ಕಾರ್ಯಕ್ಕೆ ಕರೆಸಿ ಕೊಲ್ಲುವ ಹೊಂಚು ಹಾಕಿದ್ದಾರೆ' ಎಂದಿತು. ವಿಷಯವನ್ನು ತಿಳಿದ ಗಿಳಿ, 'ನಾನು ನಮ್ಮ ರಾಜನಿಗೆ ಹೇಳಿ ಬಂದು ನಿನ್ನನ್ನು ಮದುವೆಯಾಗಿ ಕರೆದುಕೊಂಡು ಹೋಗುತ್ತೇನೆ' ಎಂದು ಒಪ್ಪಿಸಿ, ಹಾರಿ ಬಂದು ಮಹೋಷಧಕುಮಾರನಿಗೆ ವಿಷಯ ತಿಳಿಸಿತು. ಇದರ ಸಂಶಯವಿದ್ದ ಕುಮಾರ, ಈ ಹೊಂಚಿನಿಂದ ರಾಜನನ್ನು ಪಾರು ಮಾಡಲು ಹೊಸ ಚಿಂತನೆಯನ್ನು ಮಾಡಿದ. ❖

ದಿನ ಭವಿಷ್ಯ

ಬುಧವಾರ 5 ಮೇ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಭರಣಿ ನವಮಿ ಗಂ. 27-19 (ಸಾ. 5-01) ಬುಧವಾರ ನಿತ್ಯ ನಕ್ಷತ್ರ ಧನಿಷ್ಠ ಗಂ. 16-57 (ಹ. 12-52) ಬ್ರಹ್ಮ ನಾಮ ಯೋಗ ಗಂ 42-9 ಗರಜ ಕರಣ ಗಂ. 27-19 ವಿಷ ಗಂ. 35-17 ಅಮೃತ ಗಂ. 59-44 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 6-02 ಸೂರ್ಯಾಸ್ತ: 6-31 ಅದೃಷ್ಟ ಸಂಖ್ಯೆ 2, 3

ಮೇಷ: ಉದ್ಯೋಗಾಕಾಂಕ್ಷಿಗಳಿಗೆ ಅನಿರೀಕ್ಷಿತವಾಗಿ ಉದ್ಯೋಗಾವಕಾಶ ದೊರಕಲಿದೆ. ವಿದೇಶಿ ವ್ಯವಹಾರಸ್ಥರೊಂದಿಗಿನ ಸಂಪರ್ಕದಿಂದಾಗಿ ವ್ಯವಹಾರಕ್ಕೊಂದು ತಿರುವು. ಅತಿಯಾದ ಆಯಾಸ. ವೈದ್ಯರ ಸಲಹೆ ಪಡೆಯಬೇಕಾದೀತು.

ವೃಷಭ: ಸರ್ಕಾರಿ ಅಧಿಕಾರಿಗಳಿಗೆ ಸ್ಥಾನ ಬದಲಾವಣೆಯ ಸಾಧ್ಯತೆ. ನೌಕರ ವರ್ಗಕ್ಕೆ ಕೆಲಸಗಳಿಂದ ವಿರಾಮ ದೊರೆಯುವ ಸಾಧ್ಯತೆ ಕಂಡುಬರುತ್ತಿದೆ. ಆರೋಗ್ಯದ ಬಗ್ಗೆ ವಿಶೇಷ ಗಮನ ಹರಿಸುವುದು ಒಳ್ಳೆಯದು.

ಮಿಥುನ: ದೇವತಾನುಗ್ರಹದಿಂದ ಶುಭಕಾರ್ಯಗಳು ನಿಮ್ಮ ಮನದಿಚ್ಛೆಯಂತೆ ನೆರವೇರುವುದರಿಂದ ನೆಮ್ಮದಿ. ಧೈರ್ಯ ಆತ್ಮವಿಶ್ವಾಸ ಮತ್ತು ಪ್ರಯತ್ನ ಬಲದಿಂದಾಗಿ ಕಾರ್ಯಾನುಕೂಲ. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಯ.

ಕರ್ಕಾಟಕ: ಸರ್ಕಾರಿ ಕೆಲಸದಲ್ಲಿರುವವರಿಗೆ ಬಿಡುವಿಲ್ಲದ ಕೆಲಸ ಕಾರ್ಯಗಳಿಂದಾಗಿ ಸಂಗಾತಿಯ ಕೋಪ ಎದುರಿಸಬೇಕಾದೀತು. ಮನೆಯವರ ಪ್ರಯಾಣಕ್ಕಾಗಿ ವಿಶೇಷ ವೆಚ್ಚ.

ಸಿಂಹ: ನ್ಯಾಯಾಲಯದಲ್ಲಿನ ಕಟ್ಲೆಗಳಿಗೆ ಚಾಲನೆ ದೊರಕಲಿದೆ. ರೈತರಿಗೆ ಉತ್ತಮವಾದ ದಿನ. ಖರೀದಿ ಮಾರಾಟ ವ್ಯವಹಾರಗಳಲ್ಲಿ ಉತ್ತಮ ಲಾಭ. ಸಾಹಿತಿ, ಬುದ್ಧಿಜೀವಿಗಳಿಗೆ ಗೌರವ ಪ್ರಾಪ್ತವಾಗುವ ಲಕ್ಷಣಗಳು ಕಂಡುಬರುತ್ತಿವೆ.

ಕನ್ಯಾ: ಕೆಲಸ ಕಾರ್ಯಗಳಲ್ಲಿ ಅನುಕೂಲ. ಉದ್ಯೋಗ ಕ್ಷೇತ್ರದಲ್ಲಿ ಮೇಲಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ವಿಶ್ವಾಸದಿಂದ ಉದ್ಯೋಗ ವ್ಯಾಪಾರಗಳಲ್ಲಿ ತೊಡಗಿಕೊಳ್ಳುವುದರಿಂದ ಹೆಚ್ಚಿನ ಲಾಭ. ಮಾನಸಿಕ ನೆಮ್ಮದಿ.

ತುಲಾ: ಸಾರಾಸಾರ ವಿವೇಚನೆಯಿಂದ ವೈವಾಹಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಹಿರಿಯರ ಆರೋಗ್ಯ ಹದಗೆಡುವ ಸಾಧ್ಯತೆ. ವಿಶೇಷ ಭೋಜನ ಕೂಟದಲ್ಲಿ ಭಾಗಿಯಾಗುವ ಸಾಧ್ಯತೆ.

ವೃಶ್ಚಿಕ: ನಿಮ್ಮ ಒಳ್ಳೆಯತನದ ದುರುಪಯೋಗವಾಗದಂತೆ ಎಚ್ಚರಿಕೆ ವಹಿಸಿ. ಅವಶ್ಯಕತೆಗಿಂತ ಹೆಚ್ಚಾಗಿ ಹಣಕಾಸಿನ ನೆರವು ದೊರೆಯಲಿದೆ. ಶೀಘ್ರದಲ್ಲೇ ಸಂತೋಷಕರ ಸುದ್ದಿಯೊಂದನ್ನು ಆಲಿಸಲಿದ್ದೀರಿ.

ಧನು: ಆರ್ಥಿಕ ಅಡಚಣೆಗಳು ಹಂತ ಹಂತವಾಗಿ ನಿವಾರಣೆಯಾಗಲಿವೆ. ಅತಿಥಿಗಳ ಆಗಮನದಿಂದ ಸಂತಸ. ಶಾರೀರಿಕ ಆಯಾಸ ತೋರಿಬಂದರೂ ದಿನದ ಅಂತ್ಯದಲ್ಲಿ ಕೆಲಸದಲ್ಲಿ ಪ್ರಗತಿ. ದೂರದ ಪ್ರಯಾಣ ಬೇಡ.

ಮಕರ: ಉನ್ನತಾಧಿಕಾರಿಗಳ ಅನುಗ್ರಹದಿಂದಾಗಿ ನೌಕರಿಯಲ್ಲಿ ಅನುಕೂಲತೆ. ಸಾಮಾಜಿಕ ಸೇವೆಯಲ್ಲಿ ದಿನವಿಡೀ ತೊಡಗಿಕೊಂಡು ಸಂತಸ. ಮಕ್ಕಳಿಂದ ಆರ್ಥಿಕ ಸಹಕಾರ ದೊರೆಯುವ ಸಾಧ್ಯತೆ.

ಕುಂಭ: ಗೃಹನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಉತ್ತಮವಾದ ಕಾಲ. ಮನಸ್ಸಿಟ್ಟು ಕೆಲಸವನ್ನು ಮಾಡಿದಲ್ಲಿ ವಿದೇಶಿ ವ್ಯವಹಾರದಲ್ಲಿ ಹೆಚ್ಚಿನ ಲಾಭ. ಭೂ ಖರೀದಿ ವ್ಯವಹಾರಕ್ಕೆ ಸಕಾಲ. ಆರೋಗ್ಯದ ಬಗ್ಗೆ ಗಮನವಿರಲಿ.

ಮೀನ: ಆರ್ಥಿಕವಾಗಿ ನಾನಾ ರೀತಿಯಲ್ಲಿ ಧನ ಸಂಗ್ರಹವಾಗಿ ಹಮ್ಮಿಕೊಂಡಿರುವ ಯೋಜನೆಗಳನ್ನು ಪೂರೈಸಲು ಅನುಕೂಲ. ಕೃಷಿ ಕೈಗಾರಿಕಾ ಕ್ಷೇತ್ರದಲ್ಲಿ ಲಾಭಾಂಶ. ರಾಜಕೀಯದಲ್ಲಿ ಸೂಕ್ತ ಸ್ಥಾನ ದೊರಕುವ ಸಾಧ್ಯತೆ.

ನಿಮ್ಮ ಜನ್ಮದಿನ 5-ಮೇ ಈ ದಿನ ಅತ್ಯಂತ ಶುಭಕರ. ನಿಮ್ಮ ಮೇಲೆ ಬೇರೆಯವರ ಪ್ರಭಾವವು ಅತ್ಯಂತ ಪ್ರಭಾವಶಾಲಿಯಾಗಿರುವುದು. ಸ್ವತಂತ್ರ ಯೋಚನೆಗೆ ಧಕ್ಕೆಯುಂಟಾಗಿ ನಿಮ್ಮನ್ನೇ ಕಳೆದುಕೊಳ್ಳುವ ಭಯ ಆವರಿಸಬಹುದು. ಸಾಂಸಾರಿಕ ಜೀವನದಲ್ಲಿ ಅನೇಕ ಏರುಪೇರುಗಳು ಉಂಟಾಗುವ ಸಾಧ್ಯತೆ ಕಂಡುಬರುವುದು.


ಪದಬಂಧ 4587 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಾತಾಡದಿರುವಿಕೆ (2)
3.ಬೆಲ್ಲವಾಗುವ ಮೊದಲು ತೆಗೆದ ಕಬ್ಬಿನ ಹಾಲಿನ ಪಾಕ (3)
5.ರೀತಿ ಅಥವಾ ಮಾದರಿ (3)
7.ವಿರುದ್ಧ ರಸಗಳು ಕೂಡಿಕೊಳ್ಳುವುದು (4)
9.ಪ್ರತೀ ಕತೆಯಲ್ಲೂಬಂದಿರುವ ಚಿಹ್ನೆ! (3)
10.ಗಣಪತಿ, ತುಸು ಚಿಕ್ಕದಾಗಿ ಒಡಮೂಡಿದೆ (3)
11.ನೆತ್ತರು ಸುರಿಯುವಿಕೆ (4)
13.ಅಳಿವಿನ ವಿರುದ್ಧ ಪದ (3)
15.ಬೆಳಗಿನ ಜಾವವಿದು (3)
16.ಮಾಗಿದ ಫಲ (2)

ಮೇಲಿಂದ ಕೆಳಕ್ಕೆ

2.ತಿರುಗಿಸಿದರೂ ಇದು ಹೊಸತು (3)
3.ರತಿಪತಿಯಿಂದ ಮೂಡಿದ ಆಸೆ (3)
4.ತಂಗುವ ಸ್ಥಳ (3)
6.ಗಣಪತಿಯ ವಾಹನ (3)
8.ಹತ್ತಿರಕ್ಕೊಂದು ಪರ್ಯಾಯ ಪದ (3)
9.ಚಾರನಿದ್ದಾಗಲೇ ಹರಡುವಿಕೆ! (3)
10.ದುಷ್ಟ ಸ್ವಭಾವದ ಹೆಂಗಸು (3)
12.ವನದಲ್ಲಿ ಬೋಳಿಸುವಿಕೆ! (3)
13.ನಸುಕಿನಲ್ಲಿ ಶೇಖರಿಸಿಟ್ಟ ಮರಳು (3)
14.ಧಾನ್ಯವನ್ನು ಶೇಖರಿಸುವ ಕಣಜವಿಲ್ಲಿ ಉಲ್ಟಾ ಆಗಿದೆ (3)



4586ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕರ್ನಾಟಕ 3.ಸಂಪನ್ನ 4.ಸಹವಾಸ 6.ಆಯವ್ಯಯ 7.ಮಸೀದಿ 8.ಗಡಿಬಿಡಿ 11.ನಡುಮನೆ 13.ತಡಿಕೆ 14.ಪರಿಹಾರ

ಮೇಲಿಂದ ಕೆಳಕ್ಕೆ: 1.ಕನ್ನಡಕ 2.ಕಸ 3.ಸಂದೂಕ 5.ಸಮಯ 6.ಆದಿ 7.ಮಡಿ 8.ಗಹನ 9.ಗತ್ಯಂತರ 10.ಹರಕೆ 12.ನೆಪ

ಸುಡೊಕು 4973

	7	6		4				9
5			6		9			2
2				7		3		
7	8						5	
				9		6		7
6		5					2	
		7	2				9	5
	5				7			
9				5		2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4972 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಹೊರಗೆ ಹೋಗುವಾಗ ಮುಖಗವಸು ಧರಿಸಿ

ರಾಜ್ಯ ಕೋವಿಡ್ ಅಂಕಿ-ಅಂಶ

16,90,934 ▲ ಒಟ್ಟು ಸೋಂಕಿತರು
(16,46,303 ನಿನ್ನೆಯ ವಿವರ)

4,64,363 ▲ ಸಕ್ರಿಯ ಪ್ರಕರಣಗಳು

12,10,013 ▲ ಗುಣಮುಖರಾದವರು

16,538 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	44,631	▲
ಗುಣಮುಖ	24,714	▲
ಸಾವು	292	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೇಂದ್ರ ಧೋರಣೆಗೆ ಖಂಡನೆ: 'ಪ್ರಜಾವಾಣಿ' ವರದಿಗೆ ಮೆಚ್ಚುಗೆ

ಆಮ್ಲಜನಕ ಬೇರೆಡೆ ಹಂಚಿಕೆ: ಆಕ್ರೋಶ

ಪ್ರಜಾವಾಣಿ ವಾರ್ತೆ



ಪೀಣ್ಯಾ ಆಮ್ಲಜನಕ ಉತ್ಪಾದನ ಘಟಕದ ಎದುರು ಜನರು ಆಮ್ಲಜನಕ ಸಿಲಿಂಡರ್‌ಗಾಗಿ ಕಾಯುತ್ತಿರುವುದು– ಪ್ರಜಾವಾಣಿ ಚಿತ್ರ

ಪ್ರಜಾವಾಣಿ ಫಲಶ್ರುತಿ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ತೀವ್ರಗತಿಯಲ್ಲಿ ಏರುತ್ತಿರುವ ಸಂದರ್ಭದಲ್ಲಿ ಇಲ್ಲಿ ಉತ್ಪಾದನೆಯಾಗುವ ಆಮ್ಲಜನಕವನ್ನು ಪೂರ್ಣ ಪ್ರಮಾಣದಲ್ಲಿ ರಾಜ್ಯದಲ್ಲೇ ಬಳಸಿಕೊಳ್ಳಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡದಿರುವುದಕ್ಕೆ ಆಕ್ರೋಶ ವ್ಯಕ್ತವಾಗಿದೆ.

ರಾಜ್ಯದಲ್ಲಿ ನಿತ್ಯವೂ 1,043 ಟನ್ ಆಮ್ಲಜನಕ ಉತ್ಪಾದನೆಯಾಗುತ್ತಿದೆ. ಅದರಲ್ಲಿ 865 ಟನ್ ರಾಜ್ಯಕ್ಕೆ ಹಂಚಿಕೆ ಮಾಡಿದ್ದು, 675 ಟನ್ ಮಾತ್ರ ಬಳಕೆಗೆ ಲಭ್ಯವಾಗುತ್ತಿದೆ ಎಂಬ ಮಾಹಿತಿಯುಳ್ಳ ವರದಿಯನ್ನು 'ಪ್ರಜಾವಾಣಿ' ಮಂಗಳವಾರ ಪ್ರಕಟಿಸಿತ್ತು. ಸಾಮಾಜಿಕ ಮಾಧ್ಯಮಗಳಲ್ಲಿ ಪತ್ರಿಕೆಯ ವರದಿಯ ತುಣುಕನ್ನು ಹಂಚಿಕೊಂಡಿರುವ ನೂರಾರು ಮಂದಿ, ಕೇಂದ್ರ ಸರ್ಕಾರದ ಧೋರಣೆಯ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ.

ಫೇಸ್ ಬುಕ್, ವಾಟ್ಸ್ ಆ್ಯಪ್, ಟ್ವಿಟರ್, ಇನ್‌ಸ್ಟಾಗ್ರಾಂ ಸೇರಿದಂತೆ ಹಲವು ಸಾಮಾಜಿಕ ಮಾಧ್ಯಮಗಳು, ಜಾಲ ತಾಣಗಳಲ್ಲಿ ರಾಜ್ಯದ ಆಮ್ಲಜನಕದ ಬೇಡಿಕೆ, ಕೇಂದ್ರದಿಂದ ಹಂಚಿಕೆ ಮತ್ತು ಪೂರೈಕೆ ಕುರಿತು ಚರ್ಚೆ ನಡೆದಿದೆ. ರಾಜ್ಯದಲ್ಲಿ ಉತ್ಪಾದನೆಯಾಗುವ ಆಮ್ಲಜನಕವನ್ನು ಬೇರೆ ರಾಜ್ಯಗಳಿಗೆ ಹಂಚಿಕೆ ಮಾಡಿ, ಬೇರೆ ರಾಜ್ಯಗಳಿಂದ ಇಲ್ಲಿಗೆ ಆಮ್ಲಜನಕ ತರಿಸಿಕೊಳ್ಳಬೇಕೆಂಬ ಕೇಂದ್ರ ಸರ್ಕಾರದ ಆದೇಶವನ್ನು ಹಲವರು ವಿರೋಧಿಸಿದ್ದಾರೆ. ಕೇಂದ್ರ ಸರ್ಕಾರದ ನಿಲುವಿನಿಂದಾಗಿಯೇ ರಾಜ್ಯದಲ್ಲಿ ಆಮ್ಲಜನಕ ಪೂರೈಕೆಯಲ್ಲಿ ಬಿಕ್ಕಟ್ಟು ಸೃಷ್ಟಿಯಾಗಿದೆ ಎಂದು ಆರೋಪಿಸಿದ್ದಾರೆ.

ಹೊಣೆ ಯಾರು?: 'ರಾಜ್ಯದಲ್ಲಿ ಉತ್ಪಾದನೆಯಾಗುವ ಆಮ್ಲಜನಕವನ್ನು ನೆರೆಯ ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳಿಗೆ ಕೊಡಬೇಕಂತೆ. ಒಡಿಶಾದಿಂದ ಇಲ್ಲಿಗೆ 48 ಗಂಟೆಗಳ ಪ್ರಯಾಣ ಮಾಡಿ ಆಮ್ಲಜನಕ ತರಬೇಕು. ಈ ಅವಧಿಯಲ್ಲಿ ಆಮ್ಲಜನಕದ ಕೊರತೆಯಾಗಿ ಯಾರಿಗಾದರೂ ತೊಂದರೆ ಆದರೆ ಅದಕ್ಕೆ ಯಾರೂ ಹೊಣೆ ಇಲ್ಲ. ಕೇಂದ್ರೀಕೃತ ವ್ಯವಸ್ಥೆ ಹೇಗೆ ತೊಂದರೆ ಮಾಡುತ್ತದೆ ಎಂಬುದಕ್ಕೆ ಒಂದು ತಾಜಾ ಉದಾಹರಣೆ' ಎಂದು ಮುನ್ನೋಟ ಬಳಗದ ವಸಂತ್ ಶೆಟ್ಟಿ ಫೇಸ್‌ಬುಕ್‌ನಲ್ಲಿ ಪ್ರತಿಕ್ರಿಯಿಸಿದ್ದಾರೆ.

ಒಂದು ದೇಶ- ಒಂದು ಚುನಾವಣೆ, ಒಂದು ತೆರಿಗೆ, ಒಂದು ಪಡಿತರ ಚೀಟಿ, ಒಂದು ಭಾಷೆ ಎಂದು ಎಲ್ಲವನ್ನೂ ಕೇಂದ್ರೀಕರಿಸುವುದನ್ನು ಸಮರ್ಥಿಸುವವರು ಇದೇ ಬಗೆಯ ಕೇಂದ್ರೀಕೃತ ವ್ಯವಸ್ಥೆ ರಷ್ಯಾದಲ್ಲಿ ಏಕೆ ಸೋತಿತು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ.

'ಕೇಂದ್ರ ಸರ್ಕಾರವು ಒಕ್ಕೂಟ ವ್ಯವಸ್ಥೆಯಲ್ಲಿನ ತನ್ನ ಕರ್ತವ್ಯಗಳನ್ನು ಸರಿಯಾಗಿ ಪಾಲಿಸದೇ ಇದ್ದರೆ ಮುಂದಿನ ದಿನಗಳಲ್ಲಿ ವಿರೋಧ ದಾಖಲಿಸುವುದೊಂದೇ ರಾಜ್ಯಗಳ ಮುಂದಿರುವ ದಾರಿ' ಎಂದು ಐ.ಟಿ ತಂತ್ರಜ್ಞ ನಿತೇಶ್ ಕುಂಟಾಡಿ ಫೇಸ್ ಬುಕ್‌ನಲ್ಲಿ ಎಚ್ಚರಿಸಿದ್ದಾರೆ.

ತರ್ಕ ಇದೆಯಾ?: 'ರಾಜ್ಯದಲ್ಲಿ ಉತ್ಪಾದನೆಯಾಗುವ ಆಮ್ಲಜನಕದಲ್ಲಿ ಕಟಾವು ಮಾಡಿ, ರಾಜ್ಯಕ್ಕೆ ಒಡಿಶಾ ಮತ್ತು ಆಂಧ್ರದಿಂದ ಹೆಚ್ಚುವರಿ ಆಮ್ಲಜನಕ ಹಂಚಿಕೆ ಮಾಡಲಾಗಿದೆ. ಇದಕ್ಕೇನಾದರೂ ತರ್ಕ ಇದೆಯಾ? ಮೋದಿಯ ತಲೆ ಒಳಗೆ ಮೆದುಳು ಇದೆಯಾ?' ಎಂದು ಬರಹಗಾರ ಸುರೇಶ ಕಂಜರ್ಪಣೆ ಪ್ರಶ್ನಿಸಿದ್ದಾರೆ.

ಎಲ್ಲದರಲ್ಲೂ ತಾರತಮ್ಯ: ಟ್ವಿಟರ್‌ನಲ್ಲಿ ಈ ಸುದ್ದಿಯನ್ನು ಹಂಚಿಕೊಂಡಿರುವ ಕಾಂಗ್ರೆಸ್ ಮುಖಂಡ ರಕ್ಷಿತ್ ಶಿವರಾಂ, 'ಕೇಂದ್ರ, ಕರ್ನಾಟಕವನ್ನು ಎಲ್ಲ ವಿಷಯಗಳಲ್ಲೂ ಏಕೆ ಕಡೆಗಣಿಸುತ್ತಿದೆ? ಜಿಎಸ್‌ಟಿ ಪಾಲು ಹಂಚಿಕೆ, ಕೋವಿಡ್ ಅನುದಾನ ಆಯಿತು, ಈಗ ಆಮ್ಲಜನಕ ಹಂಚಿಕೆಯಲ್ಲೂ ತಾರತಮ್ಯ ಮಾಡಲಾಗಿದೆ. ರಾಜ್ಯದಲ್ಲಿ ಉತ್ಪಾದನೆಯಾಗುವ ಅಷ್ಟೂ ಆಮ್ಲಜನಕವನ್ನು ಇಲ್ಲೇ ಬಳಸಿಕೊಳ್ಳಲು ಅವಕಾಶ ನೀಡಿದರೆ ಸಮಸ್ಯೆ ತಪ್ಪಿಸಬಹುದು' ಎಂದು ಹೇಳಿದ್ದಾರೆ.

'ಬಿಜೆಪಿ ಸರ್ಕಾರಕ್ಕೆ ಧೈರ್ಯವಿಲ್ಲ'

ಬೆಂಗಳೂರು: ರಾಜ್ಯದಲ್ಲಿ ಆಮ್ಲಜನಕದ ಕೊರತೆ ಇದ್ದರೂ, ಇಲ್ಲಿಂದ ಗುಜರಾತ್ ಮತ್ತು ಉತ್ತರ ಪ್ರದೇಶಕ್ಕೆ ಪೂರೈಕೆ ಮಾಡಲಾಗುತ್ತಿದೆ. ರಾಜ್ಯದಿಂದ ಆಮ್ಲಜನಕ ಕಳಿಸಲು ಸಾಧ್ಯವಿಲ್ಲ ಎಂಬುದಾಗಿ ಹೇಳಲು ಬಿಜೆಪಿನ ಸರ್ಕಾರಕ್ಕೆ ಧೈರ್ಯವಿಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.

'ರಾಜ್ಯದಲ್ಲಿ ಆಮ್ಲಜನಕದ ಕೊರತೆಯಿಂದ ಕೋವಿಡ್ ರೋಗಿಗಳು ಸಾಯುತ್ತಿದ್ದಾರೆ. ಇಂತಹ ಸಮಯದಲ್ಲಿ ಇಲ್ಲಿ ಉತ್ಪಾದನೆಯಾಗುವ ಆಮ್ಲಜನಕವನ್ನು ಬೇರೆ ರಾಜ್ಯಗಳಿಗೆ ಕಳುಹಿಸಲಾಗುತ್ತಿದೆ. ರಾಜ್ಯದ ಪರಿಸ್ಥಿತಿ ಇನ್ನೂ ಕೈ ಮೀರಿ ಹೋಗಿಲ್ಲ. ಪರಿಸ್ಥಿತಿ ನಿರ್ವಹಣೆ ಸರ್ಕಾರಕ್ಕೆ ಗೊತ್ತಿಲ್ಲ. ನಿರ್ವಹಣೆಯಲ್ಲಿನ ವೈಫಲ್ಯದಿಂದ ಸಮಸ್ಯೆ ಸೃಷ್ಟಿಯಾಗಿದೆ' ಎಂದು ಮಂಗಳವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

ಆಮ್ಲಜನಕ, ಸೌಲಭ್ಯ ಕೊರತೆ

ನವದೆಹಲಿ (ಪಿಟಿಐ): ಕೋವಿಡ್ ಪ್ರಕರಣಗಳನ್ನು ನಿಭಾಯಿಸಲು ವಾರದ ಹಿಂದೆ ಇಂಡೊ-ಟಿಬೆಟನ್ ಬಾರ್ಡರ್ ಪೊಲೀಸ್ (ಐಟಿಬಿಪಿ) ಇಲ್ಲಿ ಆರಂಭಿಸಿದ್ದ 500 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರದಲ್ಲಿಯೂ ಆಮ್ಲಜನಕ ಮತ್ತು ಔಷಧಗಳ ಕೊರತೆ ಎದುರಾಗಿದೆ. ಕೇವಲ 350 ಹಾಸಿಗೆಗಳಷ್ಟೇ ಬಳಕೆಯಾಗುತ್ತಿವೆ.

ರಾಜಧಾನಿಯಲ್ಲಿ ಎದುರಾಗಿರುವ ಕೊರೊನಾ ಎರಡನೇ ಅಲೆಯು ದೇಶದ ಆರೋಗ್ಯ ವ್ಯವಸ್ಥೆಯ ಮೇಲೆ ಹೆಚ್ಚಿನ ಒತ್ತಡ ಬೀರಿದ್ದು, ಅನೇಕ ರಾಜ್ಯಗಳಲ್ಲಿ ಆಮ್ಲಜನಕ, ಔಷಧ, ಚಿಕಿತ್ಸಾ ಪರಿಕರಗಳ ಕೊರತೆ ಎದುರಾಗಿದೆ.

ಇಲ್ಲಿನ ಸರ್ದಾರ್ ಪಟೇಲ್ ಕೋವಿಡ್ ಆರೈಕೆ ಕೇಂದ್ರದಲ್ಲಿ 500 ಹಾಸಿಗೆಗಳ ಪೈಕಿ ಆಮ್ಲಜನಕ ಸೌಲಭ್ಯವುಳ್ಳ 350 ಹಾಸಿಗೆಗಳು ಬಳಕೆ ಆಗುತ್ತಿವೆ.ದಕ್ಷಿಣ ದೆಹಲಿಯ ಚತ್ತಾಪುರ ವಲಯಕ್ಕೆ 6.5 ಮೆಟ್ರಿಕ್ ಟನ್ ಮಂಜೂರಾಗಿದ್ದರೆ, ಕೇವಲ 2.99 ಮೆಟ್ರಿಕ್ ಟನ್ ಆಮ್ಲಜನಕವಷ್ಟೇ ಪೂರೈಕೆ ಆಗುತ್ತಿದೆ. ಐಟಿಬಿಪಿ ನಿರ್ವಹಣೆ ಮಾಡುತ್ತಿದ್ದು, ರಾಧಾಸೊಯಾಮಿ ಬೀಸ್‌ನಲ್ಲಿ ದೆಹಲಿ ಸರ್ಕಾರದ ಮನವಿ ಮೇರೆಗೆ ಆರಂಭಿಸಿತ್ತು.

ಕೇಂದ್ರಕ್ಕೆ ಮಂಜೂರಾದ ಆಮ್ಲಜನಕವನ್ನು ಒದಗಿಸಿದರೆ ಎಲ್ಲ 500 ಹಾಸಿಗೆಗಳನ್ನು ಬಳಸುವುದು ಶಕ್ತವಾಗಲಿದೆ ಎಂದು ನಾವು ಆಗಲೇ ದೆಹಲಿ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ ಎಂದು ಕೇಂದ್ರದ ಅಧಿಕಾರಿಯೊಬ್ಬರು ತಿಳಿಸಿದರು.

ದ್ವಿತೀಯ ಪಿಯು ಪರೀಕ್ಷೆ ಮುಂದೂಡಿಕೆ

ಒಂದನೇ ಪುಟದಿಂದ

'ದ್ವಿತೀಯ ಪಿಯು ಪರೀಕ್ಷೆಗೆ ಈಗಾಗಲೇ ಸಜ್ಜಾಗಿದ್ದ ವಿದ್ಯಾರ್ಥಿಗಳು ಪರೀಕ್ಷೆ ಮುಂದೂಡಿರುವುದರಿಂದ ವಿಚಲಿತರಾಗಬೇಕಿಲ್ಲ. ಶ್ರದ್ಧೆಯಿಂದ ತಮ್ಮ ವಿದ್ಯಾಭ್ಯಾಸವನ್ನು ಎಂದಿನಂತೆ ಮುಂದುವರಿಸಬೇಕು' ಎಂದೂ ಅವರು ಮನವಿ ಮಾಡಿದ್ದಾರೆ.

'ಪ್ರಥಮ ಪಿಯು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವರ್ಷದ ಆರಂಭಕ್ಕೂ ಮೊದಲು ಬ್ರಿಡ್ಜ್ ಕೋರ್ಸ್ (ಸೇತು ಬಂಧ) ಇರಲಿದೆ. ಇಲಾಖೆಯ ಯೂಟ್ಯೂಬ್ ಚಾನೆಲ್‌ಗಳ ಮೂಲಕವೂ ಸೇತು ಬಂಧ ಪಠ್ಯ ಲಭ್ಯವಾಗುವಂತೆ ಮಾಡಲಾಗುವುದು' ಎಂದರು.

ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಗೆ ಈ ಬಾರಿ 5,92,816 ಹೊಸ ವಿದ್ಯಾರ್ಥಿಗಳು ಮತ್ತು 76,422 ಪುನರಾವರ್ತಿತರು ಹಾಗೂ 17,470 ಖಾಸಗಿ ಅಭ್ಯರ್ಥಿಗಳು ಸೇರಿ 6,86,708 ಅಭ್ಯರ್ಥಿಗಳು ನೋಂದಣಿ ಆಗಿದ್ದರು. ವೇಳಾಪಟ್ಟಿಯಂತೆ ಮೇ 24ರಿಂದ ಜೂನ್ 16ರವರೆಗೆ ಪರೀಕ್ಷೆಗಳು ನಡೆಯಬೇಕಿತ್ತು. ರಾಜ್ಯದಾದ್ಯಂತ 1,047 ಕೇಂದ್ರಗಳಲ್ಲಿನ 5,562 ಕಾಲೇಜುಗಳಲ್ಲಿ ಪರೀಕ್ಷೆಗಳನ್ನು ನಡೆಸಲು ಇಲಾಖೆ ಸಿದ್ಧತೆ ಮಾಡಿಕೊಂಡಿತ್ತು.

'ದ್ವಿತೀಯ ಪಿಯು ವಿಜ್ಞಾನ ವಿದ್ಯಾರ್ಥಿಗಳ ಪ್ರಾಯೋಗಿಕ ಪರೀಕ್ಷೆಗಳನ್ನು ಈಗಾಗಲೇ ಮುಂದೂಡಲಾಗಿದೆ. ಪರೀಕ್ಷೆ ನಡೆಸಲು ಸಹಕಾರ ನೀಡಬೇಕಿದ್ದ ಇಲಾಖೆಗಳ ಸಿಬ್ಬಂದಿ ಕೋವಿಡ್ ಕರ್ತವ್ಯದಲ್ಲಿ ತೊಡಗಿಸಿಕೊಂಡಿದ್ದಾರೆ, ವಿದ್ಯಾರ್ಥಿಗಳ ಮತ್ತು ಪೋಷಕರ ಮಾನಸಿಕ ಒತ್ತಡಗಳು ಸೇರಿದಂತೆ ಎಲ್ಲ ಆಯಾಮಗಳ ಬಗ್ಗೆ ಚರ್ಚಿಸಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ' ಎಂದು ಸುರೇಶ್‌ಕುಮಾರ್ ತಿಳಿಸಿದರು.

ಸಿಬಿಎಸ್‌ಇ ಸೇರಿದಂತೆ ಕೇಂದ್ರ ಮಂಡಳಿ, ಮಧ್ಯಪ್ರದೇಶ, ಜಾರ್ಖಂಡ್, ಮಹಾರಾಷ್ಟ್ರ, ತಮಿಳುನಾಡು, ಹಿಮಾಚಲ ಪ್ರದೇಶ, ಛತ್ತೀಸ್‌ಗಡ, ರಾಜಸ್ಥಾನ, ಪಂಜಾಬ್ ಮತ್ತು ತೆಲಂಗಾಣ ರಾಜ್ಯಗಳಲ್ಲಿ 12ನೇ ತರಗತಿಯ ಮಂಡಳಿಗಳು ಈಗಾಗಲೇ ಪರೀಕ್ಷೆಗಳನ್ನು ಮುಂದೂಡಿವೆ.

5 ಲಕ್ಷ ರೆಮ್‌ಡಿಸಿವಿರ್ ಖರೀದಿ: ಕೋವಿಡ್ ಕಾರ್ಯಪಡೆ ಸಭೆಯಲ್ಲಿ ತೀರ್ಮಾನ

ಖಾಸಗಿ ಆಸ್ಪತ್ರೆ: ಹಾಸಿಗೆ ದರ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ



ಅಶ್ವತ್ಥನಾರಾಯಣ

ಬೆಂಗಳೂರು: ಕೋವಿಡ್ ರೋಗಿಗಳಿಗೆ ಖಾಸಗಿ ಆಸ್ಪತ್ರೆಗಳು ಮೀಸಲಿಟ್ಟಿರುವ ಹಾಸಿಗೆಗಳ ದರ ಪರಿಷ್ಕರಿಸಲು ಮತ್ತು ತಕ್ಷಣ 5 ಲಕ್ಷ ರೆಮ್‌ಡಿಸಿವಿರ್ ಚುಚ್ಚುಮದ್ದು ಖರೀದಿಸಲು ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ನೇತೃತ್ವದ ಕೋವಿಡ್ ಕಾರ್ಯಪಡೆ ನಿರ್ಧರಿಸಿದೆ.

ಕಾರ್ಯಪಡೆಯ ಅಧ್ಯಕ್ಷರಾಗಿ ನೇಮಕಗೊಂಡ ಬಳಿಕ ಮಂಗಳವಾರ ಮೊದಲ ಸಭೆ ನಡೆಸಿದ ಅಶ್ವತ್ಥನಾರಾಯಣ, ರೆಮ್‌ಡಿಸಿವಿರ್ ಖರೀದಿಗೆ ತಕ್ಷಣವೇ ಜಾಗತಿಕ ಟೆಂಡರ್ ಕರೆಯುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಗಂಭೀರವಲ್ಲದ ಕೋವಿಡ್ ಸೋಂಕಿತರಿಗಾಗಿ ಖಾಸಗಿ ಆಸ್ಪತ್ರೆಗಳಿಂದ ಪಡೆದ ಪ್ರತಿ ಹಾಸಿಗೆಗೆ ದಿನಕ್ಕೆ ಈಗ ₹ 5,200ರಂತೆ ಸರ್ಕಾರ ಪಾವತಿಸುತ್ತಿದ್ದು, ಅದರಲ್ಲಿ ಹೆಚ್ಚಳ ಮಾಡಿಲ್ಲ. ಆಕ್ಸಿಜನ್ ಸೌಲಭ್ಯ ಇರುವ ಹಾಸಿಗೆ ದರವನ್ನು ದಿನಕ್ಕೆ ₹ 7 ಸಾವಿರದಿಂದ ₹ 8 ಸಾವಿರ, ವೆಂಟಿಲೇಟರ್ ಇಲ್ಲದ ಐಸಿಯು ಹಾಸಿಗೆ ದರ ₹ 8,500ರಿಂದ ₹ 9,750, ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ ದರ 10 ಸಾವಿರದಿಂದ ₹ 11,500ಕ್ಕೆ ಹೆಚ್ಚಿಸಲು ಸಭೆಯಲ್ಲಿ ನಿರ್ಧರಿಸಲಾಗಿದೆ. ಸರ್ಕಾರ ಆದೇಶ ಹೊರಡಿಸಿದ ದಿನದಿಂದ ಪರಿಷ್ಕೃತ ದರ ಜಾರಿಗೆ ಬರಲಿದೆ ಎಂದು ಅಶ್ವತ್ಥನಾರಾಯಣ ತಿಳಿಸಿದರು.

'ಖಾಸಗಿ ಆಸ್ಪತ್ರೆಗಳ ಬಿಲ್ ಬಾಕಿ ಇದ್ದರೆ ತಕ್ಷಣವೇ ಪಾವತಿಸಬೇಕು. ಜೊತೆಗೆ, ಕೋವಿಡ್ ಯೋಧರಾಗಿ ಕೆಲಸ ಮಾಡುತ್ತಿರುವವರ ವೇತನ ವಿಳಂಬ ಆಗಬಾರದು' ಎಂದು ಮುಖ್ಯ ಕಾರ್ಯದರ್ಶಿಗೆ ಅವರು ಸೂಚಿಸಿದರು.

'ಯಾವುದೇ ಕಾರಣಕ್ಕೂ ರಾಜ್ಯದಲ್ಲಿ ರೆಮ್‌ಡಿಸಿವಿರ್ ಕೊರತೆ ಆಗಬಾರದು. ದೇಶಿಯ ಕಂಪನಿ ಅಥವಾ ವಿದೇಶದಿಂದ ಆಮದು ಮಾಡಿಕೊಂಡರೂ ಸರಿ, ರೆಮ್‌ಡಿಸಿವಿರ್ ಸಿಗದೆ ಜೀವ ಹೋಯಿತು ಎಂಬ ಮಾತು ಬರಬಾರದು' ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಗೂಂಡಾ ಕಾಯ್ದೆ: 'ಖಾಸಗಿ ಆಸ್ಪತ್ರೆಗಳು ಹಾಸಿಗೆ, ಔಷಧಿ, ಆಮ್ಲಜನಕ, ರೆಮ್‌ಡಿಸಿವಿರ್‌ಗೆ ಸರ್ಕಾರ ನಿಗದಿ ಮಾಡಿದ ದರಕ್ಕಿಂತ ಹೆಚ್ಚು ಹಣ ಸುಲಿಗೆ ಮಾಡಿದರೆ ಗೂಂಡಾ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು' ಎಂದೂ ಅವರು ಎಚ್ಚರಿಕೆ ನೀಡಿದರು.

'ಹೆಚ್ಚು ಶುಲ್ಕ ವಸೂಲಿ ಮಾಡಿದರೆ 112 ಸಹಾಯವಾಣಿಗೆ ಕರೆ ಮಾಡಿದರೆ ಕ್ರಮ ಕೈಗೊಳ್ಳಲಾಗುವುದು. ಖಾಸಗಿ ಆಸ್ಪತ್ರೆಗಳು ತಮ್ಮಲ್ಲಿ ಲಭ್ಯವಿರುವ ತಮ್ಮ ಹಾಗೂ ಸರ್ಕಾರಕ್ಕೆ ನೀಡಿದ ಹಾಸಿಗೆಗಳ ಮಾಹಿತಿಯನ್ನು ಸುವರ್ಣ ಆರೋಗ್ಯ ಟ್ರಸ್ಟ್ ಪೋರ್ಟಲ್‌ನಲ್ಲಿ ಅಪ್‌ಡೇಟ್ ಮಾಡಬೇಕು. ಇದರ ಮೇಲೆ ಅಧಿಕಾರಿಗಳು ನಿಗಾ ವಹಿಸಬೇಕು' ಎಂದು ನಿರ್ದೇಶನ ನೀಡಿದರು.

ರಾಟ್ ಕಿಟ್ ಖರೀದಿಸಲು ಸೂಚನೆ

ವ್ಯಕ್ತಿಯ ಸ್ಯಾಂಪಲ್ ಸ್ವೀಕರಿಸಿದ ಐದು ನಿಮಿಷಗಳಲ್ಲಿ ಫಲಿತಾಂಶ ಕೊಡುವ ರಾಟ್ ಕಿಟ್‌ಗಳನ್ನು ಅಗತ್ಯವಿರುವಷ್ಟು ಖರೀದಿಸಲು ಅಧಿಕಾರಿಗಳಿಗೆ ಅಶ್ವತ್ಥನಾರಾಯಣ ಸೂಚಿಸಿದರು. ಈ ಕಿಟ್‌ಗೆ ಐಸಿಎಂಆರ್ ಮಾನ್ಯತೆ ನೀಡಿದೆ. ರೋಗಲಕ್ಷಣಗಳಿದ್ದರೆ ಎಲ್ಲರನ್ನೂ ಪರೀಕ್ಷೆಗೆ ಒಳಪಡಿಸಬೇಕು ಎಂದೂ ಅವರು ಸೂಚಿಸಿದರು.

ರಾಜ್ಯದ ಪಾಲು ಹೆಚ್ಚಿಸಿ

ಒಂದನೇ ಪುಟದಿಂದ

ರಾಜ್ಯದಲ್ಲಿನ ಪರಿಸ್ಥಿತಿಯ ಕುರಿತು ವಿಚಾರಣೆ ವೇಳೆ ನ್ಯಾಯಾಲಯಕ್ಕೆ ಮಾಹಿತಿ ನೀಡಿದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವಡಗಿ, 'ಸಕ್ರಿಯ ಸೋಂಕು ಪ್ರಕರಣಗಳ ಪೈಕಿ ಶೇಕಡ 17ರಷ್ಟು ಮಂದಿಗೆ ಆಮ್ಲಜನಕ ಪೂರೈಕೆಯ ಹಾಸಿಗೆ ಮತ್ತು ಶೇ 3ರಷ್ಟು ಜನರಿಗೆ ತೀವ್ರ ನಿಗಾ ಘಟಕ (ಐಸಿಯು) ಅಗತ್ಯವಿದೆ ಎಂದು ಅಂದಾಜಿಸಲಾಗಿದೆ. ಮೇ 5ರ ವೇಳೆಗೆ ಸಕ್ರಿಯ ಪ್ರಕರಣಗಳ ಸಂಖ್ಯೆ 3.95 ಲಕ್ಷ ತಲುಪುವ ಸಾಧ್ಯತೆ ಇದೆ' ಎಂದರು.

ಬುಧವಾರದ ವೇಳೆಗೆ ನಿತ್ಯವೂ 1,792 ಟನ್ ಆಮ್ಲಜನಕದ ಅಗತ್ಯವಿದೆ ಎಂದು ಅಂದಾಜು ಮಾಡಲಾಗಿದೆ. ರಾಜ್ಯಕ್ಕೆ ನಿತ್ಯವೂ 1,162 ಟನ್ ಆಮ್ಲಜನಕ ಅಗತ್ಯವಿದೆ ಎಂಬ ಬೇಡಿಕೆಯುಳ್ಳ ಪತ್ರವನ್ನು ಏಪ್ರಿಲ್ 30ರಂದೇ ಕೇಂದ್ರ ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿಗೆ ಬರೆಯಲಾಗಿತ್ತು ಎಂದು ವಿವರಿಸಿದರು.

ಪ್ರಕ್ರಿಯೆಗಳನ್ನು ಬದಿಗಿಟ್ಟು ಯೋಚಿಸಿ: ಈ ವಿಷಯದಲ್ಲಿ ಒಂದಕ್ಕಿಂತ ಹೆಚ್ಚು ಸಚಿವಾಲಯಗಳಿಗೆ ಸಂಬಂಧಿಸಿದೆ. ಆದ್ದರಿಂದ, ನಿಗದಿತ ಪ್ರಕ್ರಿಯೆಯನ್ನು ಅನುಸರಿಸಿದ ಬಳಿಕವೇ ನಿರ್ಧಾರಕ್ಕೆ ಬರಬೇಕಾಗುತ್ತದೆ ಎಂದು ಕೇಂದ್ರ ಸರ್ಕಾರದ ಪರ ವಕೀಲರು ಹೇಳಿದರು.

'ಜನರು ಸಾಯುತ್ತಿದ್ದಾರೆ. ನಿಮ್ಮ ಎಲ್ಲ ಪ್ರಕ್ರಿಯೆಗಳನ್ನೂ ಬದಿಗಿಡಿ. ಆಮ್ಲಜನಕದ ಹಂಚಿಕೆಯ ಪಾಲನ್ನು ಯಾವಾಗಿನಿಂದ ಹೆಚ್ಚಿಸಲು ಸಾಧ್ಯ' ಎಂದು ನ್ಯಾಯಪೀಠ ಪ್ರಶ್ನಿಸಿತು.

'ಕರ್ನಾಟಕಕ್ಕೆ ಆಮ್ಲಜನಕದ ಹಂಚಿಕೆಯ ಪಾಲನ್ನು ಹೆಚ್ಚಿಸುವಂತೆ ನಿರ್ದೇಶನ ನೀಡಲು ಕೋರಿ ಸಲ್ಲಿಸಿರುವ ಮನವಿಯನ್ನು ನಾವು ಕೇಂದ್ರ ಸರ್ಕಾರದ ಮುಂದಿಡುತ್ತಿದ್ದೇವೆ. ಈ ಕುರಿತು ಬುಧವಾರ ಬೆಳಿಗ್ಗೆ 10.30ಕ್ಕೆ ವಿಚಾರಣೆ ನಡೆಸಲಾಗುವುದು' ಎಂದು ವಿಭಾಗೀಯ ಪೀಠ ಹೇಳಿತು.

'ಕರ್ನಾಟಕಕ್ಕಿಂತ ಕಡಿಮೆ ಸಂಖ್ಯೆಯ ಕೋವಿಡ್ ಪ್ರಕರಣಗಳಿರುವ ಕೆಲವು ರಾಜ್ಯಗಳಿಗೆ ಇಲ್ಲಿಗಿಂತಲೂ ಹೆಚ್ಚು ಪ್ರಮಾಣದ ಆಮ್ಲಜನಕ ಹಂಚಿಕೆ ಮಾಡಲಾಗಿದೆ' ಎಂದು ಹಲವು ವಕೀಲರು ದೂರಿದರು.

'ಕಡಿಮೆ ಕೋವಿಡ್ ಪ್ರಕರಣಗಳಿರುವ ರಾಜ್ಯಗಳಿಗೆ ಹೆಚ್ಚಿನ ಆಮ್ಲಜನಕ ಹಂಚಿಕೆ ಮಾಡಿರುವುದಕ್ಕೆ ಸಮರ್ಥನೆಗಳಿವೆಯೇ' ಎಂದು ಕೇಂದ್ರವನ್ನು ನ್ಯಾಯಾಲಯ ಪ್ರಶ್ನಿಸಿತು.

ದುಡ್ಡು ಕೊಟ್ಟರೆ ಸಿಗುತ್ತೆ ಹಾಸಿಗೆ...

ಒಂದನೇ ಪುಟದಿಂದ

'ಮನೆಯಲ್ಲೇ ಆರೈಕೆಗೆ ಒಳಗಾಗುತ್ತಿರುವ ಕೋವಿಡ್ ಸೋಂಕಿತರ ಹೆಸರಿನಲ್ಲೂ ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಕಾಯ್ದಿರಿಸಲಾಗಿದೆ. ಒಬ್ಬನೇ ವ್ಯಕ್ತಿಯ ಹೆಸರಿನಲ್ಲಿ 12 ಆಸ್ಪತ್ರೆಗಳಲ್ಲಿ ಹಾಸಿಗೆ ಕಾಯ್ದಿರಿಸಲಾಗಿದೆ. ಇನ್ನು ಕೆಲವರ ಹೆಸರಿನಲ್ಲಿ ಮೂರು- ನಾಲ್ಕು ಆಸ್ಪತ್ರೆಗಳಲ್ಲಿ ಹಾಸಿಗೆ ಕಾಯ್ದಿರಿಸಲಾಗಿದೆ. ಜನ ಹಾಸಿಗೆ ಸಿಗದೇ ಸಾಯುತ್ತಿರುವ ದಾರುಣ ಸಂದರ್ಭದಲ್ಲೂ ಹೀಗೇ ಭ್ರಷ್ಟಾಚಾರ ನಡೆಸಿರುವುದು ಅಕ್ಷಮ್ಯ' ಎಂದು ಕಿಡಿಕಾರಿದರು.

'ಬಿಬಿಎಂಪಿಗೆ ಕಾಯ್ದಿರಿಸಿರುವ ಹಾಸಿಗೆಗಳನ್ನು ದುಡ್ಡು ಕೊಟ್ಟು ಬುಕ್ ಮಾಡಿಸಿದವರು ನೇರವಾಗಿ ನಮ್ಮನ್ನು ಸಂಪರ್ಕಿಸಿ ಮಾಹಿತಿ ನೀಡಿ. ಅಂಥ ಭ್ರಷ್ಟ ಅಧಿಕಾರಿಗಳ ಬೆಂಡೆತ್ತಿ ಒಳಗಡೆ ಹಾಕಿಸುತ್ತೇವೆ. ಇವತ್ತಿನಿಂದ ಈ ಭ್ರಷ್ಟಾಚಾರ ಮುಂದುವರಿದರೆ ನಾನು ಸಂಸದನಾಗಿ ಮುಂದುವರಿಯುವುದಕ್ಕೆ ಯೋಗ್ಯತೆ ಇಲ್ಲ ಎಂದೇ ಅರ್ಥ. ಅದಕ್ಕಿಂತ ನಾನು ರಾಜೀನಾಮೆ ನೀಡುವುದು ಒಳ್ಳೆಯದು' ಎಂದರು.

ನಮ್ಮದೇ ಸರ್ಕಾರವಿದ್ದರೂ ಹೋರಾಟ ಅನಿವಾರ್ಯ: ಸತೀಶ ರೆಡ್ಡಿ, 'ಶಾಸಕನಾಗಿ ನಾನು ಶಿಫಾರಸು ಮಾಡಿದರೂ ತುರ್ತು ಅಗತ್ಯ ಇರುವವರಿಗೆ ಬಿಬಿಎಂಪಿ ಅಧಿಕಾರಿಗಳು ಹಾಸಿಗೆ ಕೊಡಿಸುವುದಿಲ್ಲ. ಹಾಸಿಗೆಗಳನ್ನು ಅಕ್ರಮವಾಗಿ ಬ್ಲಾಕ್ ಮಾಡುವ ದಂಧೆಯಲ್ಲಿ ತೊಡಗಿದವರನ್ನು ಜೈಲಿಗೆ ಅಟ್ಟಬೇಕು. ಅಲ್ಲಿಯವರೆಗೆ ನಾವು ಹೋರಾಟ ಮುಂದುವರಿಸುತ್ತೇವೆ. ನಮ್ಮದೇ ಸರ್ಕಾರ ಇದ್ದರೂ ನಾವು ಹಿಂಜರಿಯುವುದಿಲ್ಲ' ಎಂದರು.

'ಕೇಂದ್ರ ಸರ್ಕಾರ 780 ವೆಂಟಿಲೇಟರ್‌ಗಳನ್ನು ಕಳುಹಿಸಿಕೊಟ್ಟಿದ್ದರೂ ಅದನ್ನು ಅಳವಡಿಸಿಲ್ಲ. ವೆಂಟಿಲೇಟರ್ ಕೊಟ್ಟರೆ ಅಪೋಲೊ, ಫೋರ್ಟಿಸ್‌ನಂತಹ ಆಸ್ಪತ್ರೆಗಳು ಐಸಿಯು ಹಾಸಿಗೆಗಳ ಸಂಖ್ಯೆ ಹೆಚ್ಚಿಸಿ ಬಿಬಿಎಂಪಿಗೆ ಒದಗಿಸುತ್ತೇವೆ ಎಂದು ಹೇಳಿವೆ. ಆದರೂ ಅಧಿಕಾರಿಗಳು ಅವುಗಳಿಗೆ ವೆಂಟಿಲೇಟರ್ ನೀಡಿಲ್ಲ. ಇನ್ನಷ್ಟು ವೆಂಟಿಲೇಟರ್‌ಗಳು ಬರಲಿದ್ದು, ನಂತರ ಹಂಚಿಕೆ ಮಾಡುತ್ತೇವೆ ಎನ್ನುತ್ತಾರೆ. ನಮ್ಮ ಬೊಮ್ಮನಹಳ್ಳಿ ವಲಯದ ಕಡೆಗಂತೂ ಯಾವುದೇ ಐಎಎಸ್ ಅಧಿಕಾರಿ ನಾಲ್ಕು ದಿನಗಳಿಂದ ತಲೆ ಹಾಕಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಎಲ್.ಎ.ರವಿ ಸುಬ್ರಹ್ಮಣ್ಯ, 'ಹಾಸಿಗೆ ಕೊಡಿಸಿ ಎಂದು ನಾವು ಅಂಗಲಾಚಿದರೂ ಅಧಿಕಾರಿಗಳು ಕಿವಿಗೊಡುತ್ತಿಲ್ಲ. ನಮ್ಮ ಕರೆಯನ್ನೂ ಸ್ವೀಕರಿಸುತ್ತಿಲ್ಲ. ಅಧಿಕಾರಿಗಳು ಷಡ್ಯಂತ್ರದಿಂದಾಗಿಯೇ ರೆಮ್‌ಡಿಸಿವಿರ್ ಔಷಧ ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆ' ಎಂದು ಆರೋಪಿಸಿದರು.

ಶಾಸಕ ಉದಯ್ ಗರುಡಾಚಾರ್, 'ದಾಖಲೆಗಳ ಪ್ರಕಾರ 11,314 ಹಾಸಿಗೆಗಳು ಬಿಬಿಎಂಪಿ ವತಿಯಿಂದ ಚಿಕಿತ್ಸೆ ಪಡೆಯುವವರಿಗಾಗಿ ಲಭ್ಯ ಇವೆ. ಅವುಗಳಲ್ಲಿ 9,690 ಹಾಸಿಗೆಗಳನ್ನು ಮಾತ್ರ ಹಂಚಿಕೆ ಮಾಡಲಾಗಿದೆ. ಹಾಗಾದರೆ 1,624 ಹಾಸಿಗೆಗಳು ಎಲ್ಲಿ ಹೋದವು' ಎಂದು ಪ್ರಶ್ನಿಸಿದರು.

'4,065 ಹಾಸಿಗೆ ಕಾಯ್ದಿರಿಸುವಿಕೆ ರದ್ದು'

'ಬಿಬಿಎಂಪಿಯ ಹಾಸಿಗೆ ಕಾಯ್ದಿರಿಸುವ ಕೇಂದ್ರೀಕೃತ ವ್ಯವಸ್ಥೆಯ ತಂತ್ರಾಂಶದ ಮೂಲಕ ಒಮ್ಮೆ ಹಾಸಿಗೆ ಕಾಯ್ದಿರಿಸಿದ 12ಗಂಟೆಯಲ್ಲಿ ರೋಗಿಯನ್ನು ಆ ಆಸ್ಪತ್ರೆಗೆ ದಾಖಲಿಸಲಿದ್ದರೆ, ಕಾಯ್ದಿರಿಸುವಿಕೆ ಸ್ವಯಂ ರದ್ದಾಗುತ್ತದೆ. ಈ ಅವಧಿ ಬಳಸಿ ಅವ್ಯವಹಾರ ನಡೆಸಲಾಗುತ್ತಿದೆ' ಎಂದು ತೇಜಸ್ವಿಸೂರ್ಯ ಆರೋಪಿಸಿದರು.

'ರೋಗಿಗಳ ಕಡೆಯವರು ಕರೆ ಮಾಡಿದಾಗ ಅವರ ವಿವರ ವಾರ್ ರೂಂ ಸಿಬ್ಬಂದಿಗೆ ಸಿಗುತ್ತದೆ. ವಾರ್ ರೂಂ ಸಿಬ್ಬಂದಿ ಮನೆಯಲ್ಲೇ ಆರೈಕೆಗೆ ಒಳಗಾಗುವ ರೋಗಿಗಳ ಹೆಸರಲ್ಲಿ ಹಾಸಿಗೆ ಬ್ಲಾಕ್ ಮಾಡುತ್ತಾರೆ. ಜನರಿಗೆ ಆ ಹಾಸಿಗೆ ಬುಕ್ ಆಗಿದೆ ಎಂದು ತೋರಿಸುತ್ತದೆ. 12 ಗಂಟೆಗಳಲ್ಲಿ ಈ ಹಾಸಿಗೆಯನ್ನು ಮಾರಾಟ ಮಾಡಲು ಏಜೆಂಟ್‌ಗಳು ಇದ್ದಾರೆ. ದಕ್ಷಿಣ ವಲಯದ ವಾರ್‌ರೂಂನಲ್ಲಿ ಏ. 20ರಿಂದ ಮೇ 1ರವರೆಗೆ ಕಾಯ್ದಿರಿಸಿದ ಹಾಸಿಗೆಗಳನ್ನು ರೋಗಿಗಳು ಬಳಸಿಕೊಂಡ ಸಂಖ್ಯೆ 5,488. ಆದರೆ, ಇದೇ ಅವಧಿಯಲ್ಲಿ 4,065 ಹಾಸಿಗೆಗಳ ಕಾಯ್ದಿರಿಸುವಿಕೆ ತನ್ನಿಂದತಾನೆ ರದ್ದಾಗಿದೆ. ರೋಗಿ 12 ಗಂಟೆಯಲ್ಲಿ ಆಸ್ಪತ್ರೆ ಹೋಗಿಲ್ಲ ಎಂದರೆ ಅವರಿಗೆ ಅವಶ್ಯಕತೆ ಇಲ್ಲ ಎಂದರ್ಥ. ಇದರ ಹಿಂದೆ ಅವ್ಯವಹಾರ ನಡೆದಿದೆ' ಎಂದರು.

ಕಾಳಸಂತೆಯಲ್ಲಿ ರೆಮ್‌ಡಿಸಿವರ್: ಯಡಿಯೂರಪ್ಪ ಗರಂ

ಬೆಂಗಳೂರು: 'ರಾಜ್ಯದಲ್ಲಿ ರೆಮ್‌ಡಿಸಿವಿರ್ ಚುಚ್ಚುಮದ್ದು ಕೊರತೆ ಇರುವ ಸಂದರ್ಭದಲ್ಲಿ ಕಾಳಸಂತೆಯಲ್ಲಿ ಮಾರಾಟ ಆಗುತ್ತಿದೆ ಎಂದರೆ ಏನರ್ಥ? ಈ ಬಗ್ಗೆ ತನಿಖೆ ಮಾಡಿಸುತ್ತೇನೆ. ಅದರ ಪರಿಣಾಮವನ್ನು ನೀವೆಲ್ಲರೂ ಎದುರಿಸಬೇಕಾಗುತ್ತದೆ' ಎಂದು ಅಧಿಕಾರಿಗಳ ಮೇಲೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕಿಡಿಕಾರಿದರು.

ರೆಮ್‌ಡಿಸಿವಿರ್ ಕೊರತೆ ಸಂಬಂಧಿಸಿದಂತೆ ಅಧಿಕಾರಿಗಳ ಜೊತೆ ಮಂಗಳವಾರ ತುರ್ತು ಸಭೆ ನಡೆಸಿದ ಅವರು, 'ರೆಮ್‌ಡಿಸಿವಿರ್ ಕಾಳಸಂತೆಯಲ್ಲಿ ಮಾರಾಟ ಆಗುತ್ತಿರುವ ಬಗ್ಗೆ ದೂರುಗಳು ಬರುತ್ತಿವೆ. ಈ ದಂಧೆಯಲ್ಲಿ ಶಾಮೀಲಾಗಿರುವ ಯಾರನ್ನೂ ಸುಮ್ಮನೆ ಬಿಡುವುದಿಲ್ಲ' ಎಂದೂ ಎಚ್ಚರಿಕೆ ನೀಡಿದರು.

'ವಿಜಯಪುರದಲ್ಲಿ ರೆಮ್‌ಡಿಸಿವಿರ್ ಸಂಗ್ರಹ ಇಟ್ಟುಕೊಂಡ ಮತ್ತು ಆಮ್ಲಜನಕ ಸಿಲಿಂಡರ್‌ಗೆ ಹೆಚ್ಚು ದರ ವಸೂಲಿ ಮಾಡಿದ ಆಸ್ಪತ್ರೆಯ ಮೇಲೆ ಎಫ್‌ಐಆರ್ ಮಾಡಿದ್ದೇವೆ' ಎಂದು ಅಧಿಕಾರಿಯೊಬ್ಬರು ಹೇಳಿದಾಗ ಕೋಪಗೊಂಡ ಮುಖ್ಯಮಂತ್ರಿ, 'ಕಾಳಸಂತೆಯಲ್ಲಿ ಬಹಳ ದುರುಪಯೋಗ ಆಗುತ್ತಿದೆ. ಹೊರರಾಜ್ಯಗಳಿಗೂ ಮಾರಾಟ ಮಾಡುತ್ತಿದ್ದಾರೆಂಬ ವರದಿ ಬಂದಿದೆ. ಎಲ್ಲವನ್ನೂ ಮುಚ್ಚಿಟ್ಟುಕೊಂಡು ಯಾರೂ ಮಾತನಾಡಬೇಡಿ. ಇಂಥ ಕಷ್ಟ ಕಾಲದಲ್ಲಿ ಕಾಳಸಂತೆಯಲ್ಲಿ ಮಾರಾಟ ಮಾಡಿ ದುರ್ಬಳಕೆ ಮಾಡಿಕೊಂಡು ಕುಳಿತಿದ್ದರೆ ನಾನು ಸಹಿಸಲ್ಲ' ಎಂದರು.

'ಎಲ್ಲ ಅಧಿಕಾರಿಗಳು ಹಗಲು ರಾತ್ರಿ ಕೆಲಸ ಮಾಡುತ್ತಿದ್ದಾರೆ' ಎಂದು ಅಧಿಕಾರಿ ಸಮಜಾಯಿಷಿ ನೀಡಿದಾಗ ಮತ್ತೆ ಗರಂ ಆದ ಮುಖ್ಯಮಂತ್ರಿ, 'ಕೆಲಸ ಮಾಡುವುದು ಮುಖ್ಯ ಅಲ್ಲ... ಕಾಳಸಂತೆಯಲ್ಲಿ ಮಾರಾಟ ಮಾಡುವುದಕ್ಕೆ ಏನು ಹೇಳುತ್ತೀರಿ. ಕೆಲಸ ಮಾಡುವುದಿಲ್ಲ ಎಂದು ನಾನು ಹೇಳಿದ್ದೇನೆಯೇ' ಎಂದು ಪ್ರಶ್ನಿಸಿದರು.

'ರೆಮ್‌ಡಿಸಿವಿರ್ ನಮಗೆ ಕೊರತೆ ಇರುವ ಸಂದರ್ಭದಲ್ಲಿ ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವ ಬಗ್ಗೆ ತನಿಖೆ ಮಾಡಿಸುತ್ತೇನೆ. ಅದರ ಪರಿಣಾಮ ಎದುರಿಸಿ' ಎಂದು ಮತ್ತೆ ಕಟುವಾಗಿ ಹೇಳಿದರು.

ಮೃಗಾಲಯದ 8 ಸಿಂಹಗಳಲ್ಲಿ ಕೋವಿಡ್

ಹೈದರಾಬಾದ್: ನಗರದ ನೆಹರೂ ಮೃಗಾಲಯದಲ್ಲಿರುವ 8 ಏಷ್ಯಾಟಿಕ್ ಸಿಂಹಗಳಲ್ಲಿ ಕೋವಿಡ್-19 ದೃಢಪಟ್ಟಿದೆ.

'ಸಿಂಹಗಳಲ್ಲಿ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತು. ಅವುಗಳ ಮೂಗು, ಬಾಯಿಯ ದ್ರವಗಳ ಮಾದರಿಗಳನ್ನು ಸಂಗ್ರಹಿಸಲಾಯಿತು. ನಗರದಲ್ಲಿರುವ ಸೆಂಟರ್ ಫಾರ್ ಸೆಲ್ಯುಲಾರ್ ಆ್ಯಂಡ್ ಮಾಲೆಕ್ಯುಲರ್ ಬಯೋಲಜಿಯ (ಸಿಸಿಎಂಬಿ) ಪ್ರಯೋಗಾಲಯದಲ್ಲಿ ಆರ್‌ಟಿ-ಪಿಸಿಆರ್ ಪರೀಕ್ಷೆ ನಡೆಸಿದಾಗ, 8 ಸಿಂಹಗಳಲ್ಲಿ ಕೋವಿಡ್ ಇರುವುದು ದೃಢಪಟ್ಟಿತು' ಎಂದು ಮೃಗಾಲಯ ಅಧಿಕಾರಿಗಳು ಹೇಳಿದ್ದಾರೆ.

ರೋಗ ಲಕ್ಷಣಗಳಿದ್ದರೆ ಮಾತ್ರ ಸಿ.ಟಿ. ಸ್ಕ್ಯಾನ್‌ಗೆ ವಿಕಿರಣ ತಜ್ಞರ ಸಲಹೆ

ನಿರಂತರ ಸಿ.ಟಿ. ಸ್ಕ್ಯಾನ್: ಅಪಾಯ

ಬೆಂಗಳೂರು: 'ಕೋವಿಡ್ ಕಾಯಿಲೆಯ ಲಕ್ಷಣಗಳಿದ್ದು, ಆರ್‌ಟಿ-ಪಿಸಿಆರ್ ಪರೀಕ್ಷೆಯಲ್ಲಿ ಸೋಂಕಿತರಾಗಿಲ್ಲ (ನೆಗೆಟಿವ್ ವರದಿ) ಎಂಬ ಫಲಿತಾಂಶ ಬಂದಲ್ಲಿ ಸಿ.ಟಿ. ಸ್ಕ್ಯಾನ್‌ಗೆ ಒಳಗಾಗಬೇಕು. ಕಾಯಿಲೆ ಖಚಿತಪಡಿಸಿಕೊಳ್ಳಲು ಒಮ್ಮೆ ಸಿ.ಟಿ. ಸ್ಕ್ಯಾನ್ ಮಾಡಿಸಿಕೊಳ್ಳುವುದರಿಂದ ಕ್ಯಾನ್ಸರ್‌ನಂತಹ ಕಾಯಿಲೆಗಳು ಕಾಣಿಸಿಕೊಳ್ಳುವುದಿಲ್ಲ' ಎನ್ನುತ್ತಾರೆ ವಿಕಿರಣ ತಜ್ಞರು.

ಕೊರೊನಾ ರೂಪಾಂತರ ವೈರಾಣು ಕೆಲ ಪ್ರಕರಣಗಳಲ್ಲಿ ಆರ್‌ಟಿ-ಪಿಸಿಆರ್ ಪರೀಕ್ಷೆಯಲ್ಲಿ ಕೂಡ ಪತ್ತೆಯಾಗುತ್ತಿಲ್ಲ. ಹೀಗಾಗಿ, ಸೋಂಕಿನ ಲಕ್ಷಣಗಳಿದ್ದು, ಆರ್‌ಟಿ-ಪಿಸಿಆರ್ ಪರೀಕ್ಷೆಯಲ್ಲಿ ನೆಗೆಟಿವ್ ಫಲಿತಾಂಶ ಬಂದಲ್ಲಿ ವೈದ್ಯರು ಸಿ.ಟಿ. ಸ್ಕ್ಯಾನ್‌ಗೆ ಶಿಫಾರಸು ಮಾಡುತ್ತಿದ್ದಾರೆ. ಇದರಿಂದಾಗಿ ಕೆಲವರು ಆಸ್ಪತ್ರೆಗಳಿಗೆ ತೆರಳಿ, ಸಿ.ಟಿ. ಸ್ಕ್ಯಾನ್ ಮಾಡಿಸಿಕೊಳ್ಳಲಾರಂಭಿಸಿದ್ದಾರೆ.

'ಒಂದು ಸಿ.ಟಿ ಸ್ಕ್ಯಾನ್ 300 ಎದೆ ಎಕ್ಸ್‌-ರೇಗೆ ಸಮ. ಅತಿಯಾಗಿ ಮಾಡಿಸಿದಲ್ಲಿ ಕ್ಯಾನ್ಸರ್ ಆಹ್ವಾನಿಸಿದಂತೆ' ಎಂದು ಏಮ್ಸ್ ನಿರ್ದೇಶಕ ಡಾ.ರಣದೀಪ್ ಗುಲೇರಿಯಾ ಎಚ್ಚರಿಸಿದ್ದರು.

'ಕೊರೊನಾ ರೂಪಾಂತರ ವೈರಾಣು ಪತ್ತೆಗೆ ಸಿ.ಟಿ. ಸ್ಕ್ಯಾನ್ ನಡೆಸಲಾಗುತ್ತಿದೆ. ಅದಕ್ಕೂ ಮೊದಲು ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಪಡುವುದು ಉತ್ತಮ. ಸಿ.ಟಿ. ಸ್ಕ್ಯಾನ್ ಸೆಂಟರ್‌ಗಳಲ್ಲಿ ಕಾರ್ಯನಿರ್ವಹಿಸುವ ತಂತ್ರಜ್ಞರು ಸುರಕ್ಷಾ ಸಾಧನಗಳನ್ನು ಧರಿಸದಿದ್ದಲ್ಲಿ ವಿಕಿರಣಗಳ ಪ್ರಭಾವದಿಂದ ಭವಿಷ್ಯದಲ್ಲಿ ಕ್ಯಾನ್ಸರ್ ಬರುವ ಸಾಧ್ಯತೆ ಇರುತ್ತದೆ' ಎಂದು ವಿಕಿರಣ ತಜ್ಞರು ತಿಳಿಸಿದ್ದಾರೆ.

'ರಕ್ತದಲ್ಲಿನ ಆಮ್ಲಜನಕ ಪ್ರಮಾಣ 94ಕ್ಕಿಂತ ಕಡಿಮೆ ಇದ್ದಾಗ ಅಥವಾ ರೋಗಲಕ್ಷಣಗಳು ತೀವ್ರ ಸ್ವರೂಪ ಪಡೆದಾಗ ಈ ವಿಧಾನಕ್ಕೆ ಒಳಪಡಬಹುದು. ಮೊದಲು ಎದೆ ಎಕ್ಸ್‌-ರೇ ಮಾಡಿಸಬೇಕು. ಅದರಲ್ಲಿಯೇ ಶೇ 80ರಷ್ಟು ಮಾಹಿತಿ ದೊರೆಯಲಿದೆ' ಎಂದು ವಿಕ್ಟೋರಿಯಾದ ವಿಕಿರಣ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ರವಿ ಎನ್. ತಿಳಿಸಿದರು.

'ರೋಗಿ ಉಳಿಸಲು ಸಿ.ಟಿ. ಸ್ಕ್ಯಾನ್ ಅಗತ್ಯ'

'ನಿರಂತರವಾಗಿ ವಿಕಿರಣಗಳ ಪ್ರಭಾವಕ್ಕೆ ಒಳಗಾದಲ್ಲಿ ಮಾತ್ರ ದೇಹದ ಮೇಲೆ ಅದರ ನಕಾರಾತ್ಮಕ ಪರಿಣಾಮ ಉಂಟಾಗುತ್ತದೆ. ಸಿ.ಟಿ.ಸ್ಕ್ಯಾನ್‌ಗೆ ಒಳಗಾಗಿ ಕ್ಯಾನ್ಸರ್ ಪೀಡಿತರಾದ ಪ್ರಕರಣಗಳು ನನ್ನ ಗಮನಕ್ಕೆ ಈವರೆಗೂ ಬಂದಿಲ್ಲ. ಕೊರೊನಾ ರೂಪಾಂತರ ವೈರಾಣು ಕೆಲವು ಪ್ರಕರಣಗಳಲ್ಲಿ ಆರ್‌ಟಿ-ಪಿಸಿಆರ್ ಪರೀಕ್ಷೆಯಲ್ಲಿ ಕೂಡ ಪತ್ತೆಯಾಗುತ್ತಿಲ್ಲ. ಹಾಗಾಗಿ, ಲಕ್ಷಣಗಳಿದ್ದಲ್ಲಿ ಸಿ.ಟಿ. ಸ್ಕ್ಯಾನ್ ಮಾಡಿಕೊಳ್ಳುವುದು ಉತ್ತಮ' ಎಂದು ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ವಿಕಿರಣ ವಿಭಾಗದ ಮುಖ್ಯಸ್ಥ ಡಾ. ವಿಜಯ್ ಕುಮಾರ್ ಕೆ.ಆರ್. ತಿಳಿಸಿದರು.

ಚುನಾವಣಾ ಫಲಿತಾಂಶದ ಬಳಿಕ ದಾಂದಲೆ: ಟಿಎಂಸಿ, ಬಿಜೆಪಿ ಆರೋಪ–ಪ್ರತ್ಯಾರೋಪ

ಪಶ್ಚಿಮ ಬಂಗಾಳ: ಹಿಂಸಾಚಾರಕ್ಕೆ 12 ಬಲಿ

ಕೋಲ್ಕತ್ತ (ಪಿಟಿಐ): ತೀವ್ರ ಜಿದ್ದಾಜಿದ್ದಿನ ವಿಧಾನಸಭೆ ಚುನಾವಣೆಯ ಮತಎಣಿಕೆಯ ಬಳಿಕ ಪಶ್ಚಿಮ ಬಂಗಾಳದ ವಿವಿಧೆಡೆ ಭಾರಿ ಹಿಂಸಾಚಾರ ನಡೆದಿದೆ. ಭಾನುವಾರದಿಂದ ಮಂಗಳವಾರ ಸಂಜೆಯವರೆಗೆ ಕನಿಷ್ಠ 12 ಮಂದಿ ಮೃತಪಟ್ಟಿದ್ದಾರೆ ಎಂದು ಹೇಳಲಾಗಿದೆ. ಟಿಎಂಸಿ ಮತ್ತು ಬಿಜೆಪಿ ಪರಸ್ಪರರ ಮೇಲೆ ಆರೋಪ ಹೊರಿಸಿವೆ.

ಪೂರ್ವ ವರ್ಧಮಾನ್ ಜಿಲ್ಲೆಯಲ್ಲಿ ಟಿಎಂಸಿ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ನಡೆದ ಸಂಘರ್ಷದಲ್ಲಿ ನಾಲ್ವರು ಬಲಿಯಾಗಿದ್ದಾರೆ. ಬಿಜೆಪಿ ಕಾರ್ಯಕರ್ತರು ತನ್ನ ಮೂವರು ಕಾರ್ಯಕರ್ತರ ಹತ್ಯೆ ನಡೆಸಿದೆ ಎಂದು ಟಿಎಂಸಿ ಆರೋಪಿಸಿದೆ. ಆದರೆ, ಇದು ಸ್ಥಳೀಯರ ಪ್ರತಿರೋಧದಿಂದ ಆಗಿದೆ ಎಂದು ಬಿಜೆಪಿ ಸಮಜಾಯಿಷಿ ನೀಡಿದೆ. ಮೃತಪಟ್ಟವರಲ್ಲಿ ಒಬ್ಬ ಮಹಿಳೆಯೂ ಇದ್ದಾರೆ.

‘ಖೇಲಾ ಹೋಬೆ ಘೋಷಣೆ ಕೂಗಿಕೊಂಡು ಬಂದ ಗುಂಪು ಹಲ್ಲೆಗೆ ಮುಂದಾಯಿತು. ನಾವು ಪ್ರತಿರೋಧ ಒಡ್ಡಿದಾಗ ಅವರು ಪರಾರಿಯಾದರು. ಆದರೆ ಅದಕ್ಕೆ ಮುನ್ನ ಅವರು ನನ್ನ ಮನೆಗೆ ನುಗ್ಗಿ ಕುಟುಂಬದ ಸದಸ್ಯರ ಮೇಲೆ ಹಲ್ಲೆ ನಡೆಸಿದ್ದಾರೆ. ನನ್ನ ತಾಯಿ ಮೃತಪಟ್ಟಿದ್ದಾರೆ’ ಎಂದು ಬಿಜೆಪಿಯ ಸ್ಥಳೀಯ ಮುಖಂಡ ಅಶೀಶ್ ಕ್ಷೇತ್ರಪಾಲ್ ಹೇಳಿದ್ದಾರೆ.

ಈ ಘಟನೆಗೆ ಸಂಬಂಧಿಸಿ 23 ಜನರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಸಮಸ್‌ಪುರ ಎಂಬಲ್ಲಿ ನಡೆದ ಘರ್ಷಣೆಯಲ್ಲಿ 55 ವರ್ಷ ವಯಸ್ಸಿನ ಗಣೇಶ್ ಮಲಿಕ್ ಎಂಬ ಟಿಎಂಸಿ ಬೆಂಬಲಿಗ ಮೃತಪಟ್ಟಿದ್ದಾರೆ. ಆದರೆ, ಸಾವಿಗೆ ಕುಟುಂಬದೊಳಗಿನ ದ್ವೇಷ ಕಾರಣ ಎಂದು ಬಿಜೆಪಿ ಹೇಳಿದೆ. ಕಂಕುರ್‌ಗಾಚಿ ಎಂಬಲ್ಲಿ ಟಿಎಂಸಿ ಕಾರ್ಯಕರ್ತರು ನಡೆಸಿದ ಹಲ್ಲೆಗೆ ವ್ಯಕ್ತಿಯೊಬ್ಬ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಾಧವಪುರ, ಗಲ್ಸಿ ಎಂಬಲ್ಲಿ ಬಿಜೆಪಿ ಬೆಂಬಲಿಗರ ಮನೆ ಮತ್ತು ಅಂಗಡಿಗಳ ಮೇಲೆ ದಾಳಿ ನಡೆಸಲಾಗಿದೆ. ಜಲ್‌ಪೈಗುರಿ ಮತ್ತು ಉತ್ತರ ಬಂಗಾಳದಲ್ಲಿಯೂ ಹಿಂಸಾಚಾರ ವರದಿಯಾಗಿದೆ.

ಕೋಲ್ಕತ್ತದ ಬೆಲೆಘಟ ಪ್ರದೇಶದಲ್ಲಿ ಬಿಜೆಪಿ ಕಾರ್ಯಕರ್ತನೊಬ್ಬನ ಹತ್ಯೆಯಾಗಿದೆ. ಇದೇ ರೀತಿಯಲ್ಲಿ ನಾದಿಯಾ ಜಿಲ್ಲೆಯ ರಣಘಾಟ್ ಮತ್ತು ಸೀತಾಲ್‌ಕುಚಿಯಲ್ಲಿ ಇಬ್ಬರು ಇಬ್ಬರು ಕಾರ್ಯಕರ್ತರ ಹತ್ಯೆಯಾಗಿದೆ ಎಂದು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ದಿಲೀಪ್ ಘೋಷ್ ಹೇಳಿದ್ದಾರೆ.

24 ಪರಗಣ ಜಿಲ್ಲೆಯಲ್ಲಿ ಐಎಸ್‌ಎಫ್ ಕಾರ್ಯಕರ್ತನೊಬ್ಬನ ಹತ್ಯೆಯಾಗಿದೆ ಎಂದು ಘೋಷ್ ತಿಳಿಸಿದ್ದಾರೆ.

ತಮ್ಮ ಮನೆ ಮೇಲೆ ದುಷ್ಕರ್ಮಿಗಳು ದಾಳಿ ನಡೆಸಿದ್ದಾರೆ ಎಂದು ದಬ್‌ಗ್ರಾಮ್–ಫೂಲ್‌ಬರಿ ಕ್ಷೇತ್ರದಿಂದ ಆಯ್ಕೆಯಾಗಿರುವ ಬಿಜೆಪಿಯ ಶಿಖಾ ಚಟರ್ಜಿ ಆರೋಪಿಸಿದ್ದಾರೆ. ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಬಿಜೆಪಿ ಕಾರ್ಯಕರ್ತರ ಮನೆಗಳಲ್ಲಿಯೂ ದಾಂದಲೆ ನಡೆಸಲಾಗಿದೆ ಎಂದು ಶಿಖಾ ಆಪಾದಿಸಿದ್ದಾರೆ.

ಹಲವೆಡೆ ಪೊಲೀಸರನ್ನು ನಿಯೋಜಿಸಲಾಗಿದೆ. ಆದರೆ, ಮಾಹಿತಿ ನೀಡಿದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕೆಲವೆಡೆ ಸ್ಥಳೀಯರು ದೂರಿದ್ದಾರೆ.



ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಚುನಾವಣೋತ್ತರ ಹಿಂಸೆಗೆ ಒಳಗಾದ ಸಂತ್ರಸ್ತರನ್ನು ಸೋನಾಪುರದಲ್ಲಿ ಮಂಗಳವಾರ ಭೇಟಿಯಾದರು —ಪಿಟಿಐ ಚಿತ್ರ



ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಟಿಎಂಸಿ ನಡೆಸಿರುವ ಹಿಂಸಾಚಾರ ಸ್ವೀಕಾರಾರ್ಹವಲ್ಲ. ಮಹಿಳೆಯರು, ಮಕ್ಕಳನ್ನೂ ಬಿಟ್ಟಿಲ್ಲ. ಜನ ಮತ ನೀಡಿರುವುದು ಇಂತಹ ಅರಾಜಕತೆಗೆ ಅಲ್ಲ

ಜಿತಿನ್ ಪ್ರಸಾದ
ಪಶ್ಚಿಮ ಬಂಗಾಳದ ಕಾಂಗ್ರೆಸ್ ಉಸ್ತುವಾರಿ



ದೇಶವಿಭಜನೆ ಸಂದರ್ಭದಲ್ಲಿ ಭಾರಿ ಹಿಂಸಾಚಾರ ನಡೆದಿತ್ತು ಎಂಬುದನ್ನು ಕೇಳಿದ್ದೇನೆ. ಆದರೆ, ಪಶ್ಚಿಮ ಬಂಗಾಳದಲ್ಲಿ ಆಗಿರುವಂತಹ ಚುನಾವಣೋತ್ತರ ಹಿಂಸೆಯನ್ನು ಎಂದೂ ಕಂಡಿಲ್ಲ

ಜೆ.ಪಿ.ನಡ್ಡಾ
ಬಿಜೆಪಿ ಅಧ್ಯಕ್ಷ



ಈ ಹಿಂಸಾಚಾರದ ವರದಿಗಳು ಟಿಎಂಸಿಯ ವಿಜಯೋತ್ಸವವೇ? ಸಾಂಕ್ರಾಮಿಕವನ್ನು ಎದುರಿಸುವುದಕ್ಕೆ ಗಮನ ಹರಿಸುವ ಬದಲು ಟಿಎಂಸಿ ಇಂತಹ ಹಿಂಸಾಚಾರಕ್ಕೆ ಇಳಿದಿದೆ

ಸೀತಾರಾಂ ಯೆಚೂರಿ
ಸಿಪಿಎಂ ಪ್ರಧಾನ ಕಾರ್ಯದರ್ಶಿ

ಪ್ರಧಾನಿ ನರೇಂದ್ರ ಮೋದಿ ಕಳವಳ

ಹಲವು ಜಿಲ್ಲೆಗಳಲ್ಲಿ ನಡೆದ ಹಿಂಸಾಚಾರದ ವರದಿಗಳು ಬಂದ ಹಿನ್ನೆಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸ್ಥಿತಿಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ತಮಗೆ ಕರೆ ಮಾಡಿ ಕಳವಳ ವ್ಯಕ್ತಪಡಿಸಿದ್ದಾರೆ ಎಂದು ಪಶ್ಚಿಮ ಬಂಗಾಳ ರಾಜ್ಯಪಾಲ ಜಗದೀಪ್ ಧನಕರ್ ಹೇಳಿದ್ದಾರೆ. ‘ಪರಿಸ್ಥಿತಿ ಘೋರವಾಗಿದೆ ಎಂಬುದು ವರದಿಗಳಿಂದ ತಿಳಿಯುತ್ತಿದೆ. ಭಯಭೀತ ಜನರು ಜೀವ ಉಳಿಸಿಕೊಳ್ಳಲು ಪರಾರಿಯಾಗುತ್ತಿದ್ದಾರೆ’ ಎಂದು ಧನಕರ್ ಅವರು ಟ್ವೀಟ್ ಮಾಡಿದ್ದಾರೆ.

ಮಹಿಳಾ ಆಯೋಗದ ಪತ್ರ

ನಂದಿಗ್ರಾಮದಲ್ಲಿ ಚುನಾವಣಾ ಫಲಿತಾಂಶದ ಬಳಿಕ ಮಹಿಳೆಯರನ್ನು ಥಳಿಸಲಾಗಿದೆ ಎಂಬ ಪ್ರಕರಣಕ್ಕೆ ಸಂಬಂಧಿಸಿ ಪಶ್ಚಿಮ ಬಂಗಾಳದ ಪೊಲೀಸ್ ಮಹಾ ನಿರ್ದೇಶಕರಿಗೆ ರಾಷ್ಟ್ರೀಯ ಮಹಿಳಾ ಆಯೋಗವು ಪತ್ರ ಬರೆದಿದೆ. ತಪ್ಪಿತಸ್ಥರ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದೆ. ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ನೇತೃತ್ವದ ತಂಡವೊಂದು ಪಶ್ಚಿಮ ಬಂಗಾಳಕ್ಕೆ ಭೇಟಿ ನೀಡಿ ತನಿಖೆ ನಡೆಸಲಿದೆ ಎಂದೂ ಆಯೋಗವು ತಿಳಿಸಿದೆ.

ಸುಪ್ರೀಂ ಕೋರ್ಟ್‌ಗೆ ಅರ್ಜಿ

ಪಶ್ಚಿಮ ಬಂಗಾಳದಲ್ಲಿ ಚುನಾವಣೋತ್ತರ ಹಿಂಸಾಚಾರ ತೀವ್ರವಾಗಿದೆ. ಹಾಗಾಗಿ ಅಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕು. ಕೇಂದ್ರೀಯ ಪಡೆಗಳನ್ನು ನಿಯೋಜಿಸಬೇಕು. ‘ಗುರಿಯಿಟ್ಟು ನಡೆಯುತ್ತಿರುವ ನರಮೇಧ’ದ ಬಗ್ಗೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿಯಿಂದ ತನಿಖೆ ನಡೆಸಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ. ಹಿಂಸಾಚಾರದ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ಬಿಜೆಪಿ ವಕ್ತಾರ ಗೌರವ್ ಭಾಟಿಯಾ ಅವರೂ ಸುಪ್ರೀಂ ಕೋರ್ಟ್‌ಗೆ ಅರ್ಜಿ ಹಾಕಿದ್ದಾರೆ.

ಮಮತಾ ಬ್ಯಾನರ್ಜಿ ಸಭೆ

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಚುನಾವಣೋತ್ತರ ಹಿಂಸೆಗೆ ಸಂಬಂಧಿಸಿ ಉನ್ನತ ಅಧಿಕಾರಿಗಳ ಜತೆಗೆ ಸೋಮವಾರ ಸಭೆ ನಡೆಸಿದ್ದಾರೆ. ಮಮತಾ ನಿವಾಸದಲ್ಲಿ ನಡೆದ ಸಭೆಯಲ್ಲಿ ಮುಖ್ಯ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ, ಪೊಲೀಸ್ ಮಹಾ ನಿರ್ದೇಶಕ ಮತ್ತು ಕೋಲ್ಕತ್ತದ ಪೊಲೀಸ್ ಆಯುಕ್ತರು ಭಾಗಿಯಾಗಿದ್ದರು. ಮಮತಾ ಅವರು ಹಿಂಸಾಚಾರದ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ಯಾವುದೇ ರೀತಿಯ ಹಿಂಸೆಗೆ ಇಳಿಯಬಾರದು ಎಂದು ಅವರು ಜನರಿಗೆ ಭಾನುವಾರವೇ ಕರೆ ನೀಡಿದ್ದರು.

ಎರಡು ದಶಕದ ಬಳಿಕ ಬಿಜೆಪಿ ಸದನ ಪ್ರವೇಶ

ಪ್ರಜಾವಾಣಿ ವಾರ್ತೆ

ಚೆನ್ನೈ: ಎರಡು ದಶಕಗಳ ನಂತರ ತಮಿಳುನಾಡು ವಿಧಾನಸಭೆಯಲ್ಲಿ ಬಿಜೆಪಿಯ ಧ್ವನಿ ಕೇಳಲಿದೆ. ಪಕ್ಷದ ನಾಲ್ವರು ಅಭ್ಯರ್ಥಿಗಳು ಚುನಾವಣೆಯಲ್ಲಿ ಗೆದ್ದು ಈ ಬಾರಿ ವಿಧಾನಸಭೆಯನ್ನು ಪ್ರವೇಶಿಸಿದ್ದಾರೆ.

ಎಂ.ಆರ್. ಗಾಂಧಿ (ನಾಗರ ಕೊಯಿಲ್), ನಾಯನಾರ್ ನಾಗೇಂದ್ರನ್ (ತಿರುನಲ್ವೇಲಿ), ಸಿ. ಸರಸ್ವತಿ (ಮೊಡಕು ರುಚ್ಚಿ) ಹಾಗೂ ಬಿಜೆಪಿಯ ಮಹಿಳಾ ಮೋರ್ಚಾದ ಅಧ್ಯಕ್ಷೆ ವಸಂತಿ ಶ್ರೀನಿವಾಸನ್ (ಕೊಯಮತ್ತೂರು ದಕ್ಷಿಣ) ಈ ಬಾರಿ ಬಿಜೆಪಿಯಿಂದ ಗೆದ್ದು ವಿಧಾನಸಭೆಯನ್ನು ಪ್ರವೇಶಿಸಿದ್ದಾರೆ.

ತಮಿಳುನಾಡಿನಲ್ಲಿ ನೆಲೆ ಕಂಡುಕೊಳ್ಳಲು ಸತತ ಪ್ರಯತ್ನದಲ್ಲಿದ್ದ ಬಿಜೆಪಿಗೆ ಈ ಸಾಧನೆಯು ತೃಪ್ತಿ ಮೂಡಿಸಿದೆ. ರಾಜ್ಯದಲ್ಲಿ ತನ್ನ ಅಸ್ತಿತ್ವವನ್ನು ಗಟ್ಟಿಗೊಳಿಸಲು' ಇದು ಸಹಾಯಕವಾಗಲಿದೆ ಎಂದು ಪಕ್ಷ ನಂಬಿದೆ. ಬಿಜೆಪಿ ರಾಜ್ಯದಲ್ಲಿ ಖಾತೆಯನ್ನೇ ತೆರೆಯಲಾರದು ಎಂದು ವಿರೋಧಪಕ್ಷಗಳು ಹೇಳುತ್ತಿದ್ದರೂ ಪಕ್ಷ ಈ ಸಾಧನೆ ಮಾಡಿದೆ.

‘ಎಐಎಡಿಎಂಕೆ ಜತೆಗಿನ ಮೈತ್ರಿಯು ಬಿಜೆಪಿಗೆ ಸಹಕಾರಿಯಾದಂತೆ ಕಾಣಿಸುತ್ತಿದೆ. ತಮಿಳುನಾಡಿನಲ್ಲಿ ಬಿಜೆಪಿಯು ಖಾತೆ ಯನ್ನೇ ತೆರೆಯಲಾರದು ಎಂಬ ಭಾವನೆ ತಮಿಳುನಾಡಿನ ಜನರಲ್ಲಿತ್ತು. ಅದು ಈಗ ಸುಳ್ಳಾಗಿದೆ. ಆದರೆ, ಈ ಯಶಸ್ಸಿಗೆ ‘ವೇಲ್ ಯಾತ್ರಾ’ ಅಥವಾ ಧಾರ್ಮಿಕ ಧ್ರುವೀಕರಣ ಕಾರಣವಲ್ಲ ಎಂಬುದನ್ನು ಬಿಜೆಪಿ ಅರ್ಥಮಾಡಿಕೊಳ್ಳಬೇಕು. ಸ್ಥಳೀಯ ವಿಚಾರಗಳು ಹಾಗೂ ಎಐಎಡಿಎಂಕೆ ಜತೆಗಿನ ಮೈತ್ರಿಯು ಬಿಜೆಪಿ ಪರವಾಗಿ ಕೆಲಸ ಮಾಡಿದೆ’ ಎಂದು ರಾಜಕೀಯ ವಿಶ್ಲೇಷಕ ಮಾಲನ್ ನಾರಾಯಣನ್ ಅವರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ತಮಿಳುನಾಡು ವಿಧಾನಸಭೆಯ ಒಟ್ಟು ಸದಸ್ಯಬಲ 234. ಡಿಎಂಕೆ 133 ಕ್ಷೇತ್ರಗಳಲ್ಲಿ ಗೆದ್ದರೆ, ಮಿತ್ರ ಪಕ್ಷಗಳಾದ ಕಾಂಗ್ರೆಸ್ 18, ಸಿಪಿಐ ಮತ್ತು ಸಿಪಿಎಂ ತಲಾ 2 ಮತ್ತು ವಿಸಿಕೆ 4 ಕ್ಷೇತ್ರಗಳಲ್ಲಿ ಗೆದ್ದಿವೆ. ಎಐಎಡಿಎಂಕೆ 66 ಕ್ಷೇತ್ರಗಳಲ್ಲಿ ಗೆದ್ದರೆ ಮಿತ್ರ ಪಕ್ಷಗಳಾದ ಬಿಜೆಪಿ 4 ಮತ್ತು ಪಿಎಂಕೆ 5 ಕ್ಷೇತ್ರಗಳಲ್ಲಿ ಗೆದ್ದಿವೆ.

ನಂದಿಗ್ರಾಮ: ಚುನಾವಣಾಧಿಕಾರಿ ನಿರ್ಧಾರಕ್ಕೆ ಆಯೋಗದ ಸಮರ್ಥನೆ

ನವದೆಹಲಿ: ಪಶ್ಚಿಮ ಬಂಗಾಳದ ನಂದಿಗ್ರಾಮ ವಿಧಾನಸಭಾ ಕ್ಷೇತ್ರದ ಮತ ಎಣಿಕೆಯಲ್ಲಿ ‘ಯಾವುದೇ ಅಕ್ರಮ’ ನಡೆದಿಲ್ಲ ಎಂದು ಚುನಾವಣಾ ಆಯೋಗ ಮಂಗಳವಾರ ಹೇಳಿದೆ.

ಮತಗಳ ಮರು ಎಣಿಕೆಗೆ ಟಿಎಂಸಿ ಮುಂದಿಟ್ಟ ಬೇಡಿಕೆಯನ್ನು ಚುನಾವಣಾಧಿಕಾರಿ ಕಿಶೋರ್ ಕುಮಾರ್ ಬಿಸ್ವಾಸ್ ತಿರಸ್ಕರಿಸಿದ್ದನ್ನು ಆಯೋಗವು ಸಮರ್ಥಿಸಿಕೊಂಡಿದೆ. ಬಿಸ್ವಾಸ್ ಅವರಿಗೆ ಅಗತ್ಯ ಭದ್ರತೆ ಒದಗಿಸಬೇಕು ಎಂದು ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿಗೆ ಆಯೋಗವು ಆದೇಶ ನೀಡಿದೆ.

ಚುನಾವಣಾಧಿಕಾರಿಯ ನಿರ್ಧಾರವನ್ನು ನ್ಯಾಯಾಲಯದಲ್ಲಿ ಮಾತ್ರ ಪ್ರಶ್ನಿಸಲು ಸಾಧ್ಯ ಎಂದು ಆಯೋಗ ತಿಳಿಸಿದೆ.

ಈ ಕ್ಷೇತ್ರದಲ್ಲಿ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮತ್ತು ಬಿಜೆಪಿಯ ಸುವೇಂದು ಅಧಿಕಾರಿಯ ನಡುವೆ ನೇರ ಸ್ಪರ್ಧೆ ಇತ್ತು. ಮಮತಾ ಅಲ್ಲಿ ಸೋತಿದ್ದಾರೆ. ಮರು ಎಣಿಕೆಗೆ ಟಿಎಂಸಿ ಒತ್ತಾಯಿಸಿತ್ತು. ಆದರೆ, ಚುನಾವಣಾಧಿಕಾರಿ ಅದಕ್ಕೆ ಒಪ್ಪಿರಲಿಲ್ಲ.

ಒತ್ತಡದಿಂದಾಗಿ ಅವರು ಈ ನಿರ್ಧಾರ ಕೈಗೊಂಡರು ಎಂದು ಮಮತಾ ಬ್ಯಾನರ್ಜಿ ಅವರು ಆರೋಪಿಸಿದ್ದಾರೆ.

ಮೇ 7ರಂದು ಸ್ಟಾಲಿನ್ ಪ್ರಮಾಣ

ಪ್ರಜಾವಾಣಿ ವಾರ್ತೆ



ಎಂ.ಕೆ. ಸ್ಟಾಲಿನ್

ಚೆನ್ನೈ: ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರು ಶುಕ್ರವಾರ (ಮೇ 7) ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ.

‘ಕೋವಿಡ್ ಪಿಡುಗು ತೀವ್ರವಾಗಿರುವುದರಿಂದ ಸ್ಟಾಲಿನ್ ಅವರು ರಾಜಭವನದಲ್ಲಿ ಸರಳ ಸಮಾರಂಭದಲ್ಲಿ ಪ್ರಮಾಣವಚನ ಸ್ವೀಕರಿಸುವರು’ ಎಂದು ಪಕ್ಷದ ಮುಖಂಡರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಮಂಗಳವಾರ ನಡೆದ ಪಕ್ಷದ ಶಾಸಕರ ಸಭೆಯಲ್ಲಿ ಸ್ಟಾಲಿನ್ ಅವರನ್ನು ಶಾಸಕಾಂಗಪಕ್ಷದ ನಾಯಕನನ್ನಾಗಿ ಆಯ್ಕೆ ಮಾಡಲಾಗಿದೆ. ಸ್ಟಾಲಿನ್, ಪಕ್ಷದ ಕಾರ್ಯದರ್ಶಿ ದೊರೆ ಮುರುಗನ್ ಹಾಗೂ ಇತರ ನಾಯಕರು ಬುಧವಾರ ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ಅವರನ್ನು ಭೇಟಿ ಮಾಡಿ ಸರ್ಕಾರ ರಚನೆಯ ಹಕ್ಕು ಮಂಡಿಸಲಿದ್ದಾರೆ.

‘ಗುರುವಾರದೊಳಗೆ ಸ್ಟಾಲಿನ್ ಅವರು ತಮ್ಮ ಸಂಪುಟದ ಸಹೋದ್ಯೋಗಿಗಳ ಹೆಸರುಗಳನ್ನು ಅಂತಿಮಗೊಳಿಸುವರು. ಸಂಪುಟದಲ್ಲಿ ಅನುಭವಿಗಳು ಹಾಗೂ ಯುವ ಜನರಿಗೆ ಸಮಪಾಲು ನೀಡಲಾಗುತ್ತದೆ’ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಕೇರಳ: 18ರ ಬಳಿಕ ಹೊಸ ಸರ್ಕಾರ

ಪ್ರಜಾವಾಣಿ ವಾರ್ತೆ

ತಿರುವನಂತಪಪುರ: ಕೇರಳದಲ್ಲಿ ಎಲ್‌ಡಿಎಫ್‌ನ ಹೊಸ ಸರ್ಕಾರ ಇದೇ 18ರಂದು ಅಥವಾ ಅದಕ್ಕೂ ನಂತರ ಅಧಿಕಾರಕ್ಕೆ ಬರಬಹುದು ಎನ್ನಲಾಗಿದೆ. ಹೊಸ ಸಚಿವರು ಯಾರಾಗಬೇಕು ಎಂಬ ಬಗ್ಗೆ ಮೈತ್ರಿಕೂಟದ ಪಕ್ಷಗಳ ಜತೆಗೆ ಮಾತುಕತೆ ಈಗಷ್ಟೇ ಆರಂಭ ಆಗಿದೆ.

ಈ ಬಾರಿ ಸಂಪುಟದಲ್ಲಿ ಯುವ ಜನರು ಮತ್ತು ಮಹಿಳೆಯರಿಗೆ ಆದ್ಯತೆ ನೀಡಲು ನಿರ್ಧರಿಸಲಾಗಿದೆ ಎಂದು ತಿಳಿದು ಬಂದಿದೆ. ತಿರುವನಂತಪುರ ನಗರದ ಮೇಯರ್ ಆಗಿ ಯುವತಿಯೊಬ್ಬರನ್ನು ಆಯ್ಕೆ ಮಾಡಿದ ನಿರ್ಧಾರಕ್ಕೆ ಭಾರಿ ಶ್ಲಾಘನೆ ವ್ಯಕ್ತವಾಗಿತ್ತು. ಜತೆಗೆ, ಯುವ ಜನರು ಸಂಪುಟದಲ್ಲಿ ಇದ್ದರೆ ಉತ್ತಮ ಆಳ್ವಿಕೆ ಸಾಧ್ಯ ಎಂಬುದು ಪಕ್ಷದ ನಾಯಕತ್ವದ ನಿಲುವಾಗಿದೆ ಎಂದು ಮೂಲಗಳು ಹೇಳಿವೆ. ಸಂಪುಟದಲ್ಲಿ ಯಾರಿರಬೇಕು ಎಂಬುದು ಇದೇ 17 ಮತ್ತು 18ರಂದು ನಡೆಯುವ ಎಲ್‌ಡಿಎಫ್‌ನ ಸಭೆಯಲ್ಲಿ ನಿರ್ಧಾರ ಆಗಲಿದೆ.

ಮೇ 12 ರ ಬಳಿಕವೂ ಕಠಿಣ ಕರ್ಫ್ಯೂ?

ಒಂದನೇ ಪುಟದಿಂದ

ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಜತೆ ಮಾತುಕತೆ ನಡೆಸಿ ಈಗಷ್ಟೇ ಪದವಿ ಮುಗಿಸಿರುವ ಮತ್ತು ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವೈದ್ಯಕೀಯ ಮತ್ತು ನರ್ಸಿಂಗ್ ವಿದ್ಯಾರ್ಥಿಗಳನ್ನು ಕೋವಿಡ್ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ತೀರ್ಮಾನಿಸಲಾಗಿದೆ. ಅಲ್ಲದೆ, ವೈದ್ಯರು ಮತ್ತು ನರ್ಸಿಂಗ್ ಸಿಬ್ಬಂದಿ ನೇಮಕಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ಪತ್ರಕರ್ತರು ಕೋವಿಡ್ ಯೋಧರು: ಪತ್ರಕರ್ತರನ್ನು ಕೋವಿಡ್ ಸಮರದ ಮುಂಚೂಣಿ ಯೋಧರು ಎಂದು ಸರ್ಕಾರ ಪರಿಗಣಿಸಿದ್ದು, ಅವರಿಗೆ ಆದ್ಯತೆಯ ಮೇರೆಗೆ ಕೋವಿಡ್ ಲಸಿಕೆ ನೀಡಲು ತೀರ್ಮಾನಿಸಲಾಗಿದೆ ಎಂದರು.

ಚಾಮರಾಜನಗರ ಘಟನೆಗೆ ವಿಷಾದ: ‘ಚಾಮರಾಜನಗರದಲ್ಲಿ ನಡೆದ ಘಟನೆ ವಿಷಾದನೀಯ. ಘಟನೆಯ ಬಗ್ಗೆ ಮೂರು ದಿನಗಳಲ್ಲಿ ವರದಿ ಬರಲಿದ್ದು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಯಡಿಯೂರಪ್ಪ ತಿಳಿಸಿದರು.

ಅಲ್ಲದೆ, ಎಲ್ಲ ಜಿಲ್ಲೆಗಳಲ್ಲೂ ಆಮ್ಲಜನಕದ ಕೊರತೆ ಆಗದಂತೆ ಎಚ್ಚರಿಕೆ ವಹಿಸಬೇಕು. ಇದಕ್ಕಾಗಿ ಉಸ್ತುವಾರಿ ಸಚಿವರು ಹೆಚ್ಚಿನ ಶ್ರಮವಹಿಸಬೇಕು ಎಂದರು ಹೇಳಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಮ್ಮ ರಾಜೀನಾಮೆ ಕೇಳಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಸಿದ್ದರಾಮಯ್ಯ ಯಾವಾಗಲೂ ರಾಜೀನಾಮೆ ಕೇಳುತ್ತಾರೆ. ಅದು ಅವರ ಕೆಲಸ. ರಾಜಿನಾಮೆ ಕೊಟ್ಟ ತಕ್ಷಣ ಸಮಸ್ಯೆ ಬಗೆಹರಿಯುತ್ತದೆಯೇ. ಈ ಸಂದರ್ಭದಲ್ಲಿ ರಚನಾತ್ಮಕ ಸಲಹೆಗಳನ್ನು ಕೊಟ್ಟರೆ ಕೋವಿಡ್ ನಿರ್ವಹಣೆಗೆ ಸಹಾಯಕವಾಗುತ್ತದೆ’ ಎಂದು ತಿಳಿಸಿದರು.

ಪಕ್ಷಾಂತರಿಗಳಿಗೆ ಸೋಲು: ಬಿಜೆಪಿ ನಡೆ ಏನು?

ವಲಸೆ ಬಂದು ನಿರೀಕ್ಷಿತ ಫಲಿತಾಂಶ ನೀಡದ ಅಭ್ಯರ್ಥಿಗಳು

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಇತರ ಪಕ್ಷಗಳ ಮುಖಂಡರನ್ನು ಪಕ್ಷಾಂತರ ತಂತ್ರಗಾರಿಕೆ ಮೂಲಕ ಸೆಳೆದು, ಕಣಕ್ಕಿಳಿಸಿದ್ದ ಬಿಜೆಪಿಗೆ ವಿಧಾನಸಭಾ ಚುನಾವಣೆಯಲ್ಲಿ ಹಿನ್ನಡೆಯಾಗಿದೆ. ಪಕ್ಷಾಂತರ ಮಾಡಿ ಬಿಜೆಪಿಗೆ ಜಿಗಿದಿದ್ದ 107 ಮಂದಿಯಲ್ಲಿ 76 ಮಂದಿ ಚುನಾವಣೆಯಲ್ಲಿ ಸೋತಿದ್ದಾರೆ ಎಂದು ರಾಜ್ಯ ಬಿಜೆಪಿ ಮೂಲಗಳು ತಿಳಿಸಿವೆ. ಅಂದರೆ ಟಿಎಂಸಿ ಸೇರಿದಂತೆ ವಿವಿಧ ಪಕ್ಷಗಳಿಂದ ವಲಸೆ ಬಂದಿದ್ದ ಶೇ 71ರಷ್ಟು ಮುಖಂಡರು ಸೋಲುಂಡಿರುವುದರಿಂದ ಬಿಜೆಪಿಗೆ ಹಿನ್ನಡೆಯಾಗಿದೆ.

ಪಕ್ಷಾಂತರಿಗಳನ್ನು ವಿಧಾನಸಭಾ ಚುನಾವಣೆಯಲ್ಲಿ ಕಣಕ್ಕಿಳಿಸುವುದರ ಬಗ್ಗೆ ಬಿಜೆಪಿಯ ಮೂಲ ಸದಸ್ಯರಲ್ಲಿ ಅಸಮಾಧಾನವಿತ್ತು. ಇವರ ಸೋಲಿನ ನಂತರ ಅಸಮಾಧಾನ ಇನ್ನಷ್ಟು ಹೆಚ್ಚುವ ಸಾಧ್ಯತೆಯಿದೆ ಎನ್ನಲಾಗಿದೆ.

‘ರಾಜ್ಯ ನಾಯಕರ ಮೇಲೆ ನಂಬಿಕೆಯಿರಿಸದೇ, ನಮ್ಮ ಕೇಂದ್ರ ನಾಯಕತ್ವವು ವಿಧಾನಸಭಾ ಚುನಾವಣೆಗೆ ಸಂಬಂಧಿಸಿದ ಎಲ್ಲಾ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿರುವುದು ಅಸಮಾಧಾನವನ್ನು ಹೆಚ್ಚಿಸಿದೆ’ ಎಂದು ರಾಜ್ಯದ ಹಿರಿಯ ಬಿಜೆಪಿ ಮುಖಂಡರೊಬ್ಬರು ಹೇಳಿದ್ದಾರೆ.

ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಸುಬ್ರತಾ ಚಟ್ಟೋಪಾಧ್ಯಾಯ ಅವರನ್ನು ಚುನಾವಣೆಗೆ ಮುನ್ನ ಹುದ್ದೆಯಿಂದ ತೆಗೆದುಹಾಕಿದ ಕೇಂದ್ರೀಯ ನಾಯಕತ್ವದ ನಡೆಯೂ ಅಸಮಾಧಾನಕ್ಕೆ ಕಾರಣವಾಗಿತ್ತು. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ದಿಲೀಪ್ ಘೋಷ್ ಅವರ ಜೊತೆಗೂಡಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಗಮನಾರ್ಹ ಸಾಧನೆ ಮಾಡುವಲ್ಲಿ ಚಟ್ಟೋಪಾಧ್ಯಾಯ ಅವರ ಪಾತ್ರ ದೊಡ್ಡದಿತ್ತು.

‘ಪಕ್ಷದ ಗೆಲುವಿನ ಹಿಂದಿದ್ದ ಘೋಷ್–ಚಟ್ಟೋಪಾಧ್ಯಾಯ ಜೋಡಿಯನ್ನು ಬೇರ್ಪಡಿಸಿದ್ದರ ತರ್ಕ ಏನು? ಈಗ ಫಲಿತಾಂಶಗಳು ಎಲ್ಲವನ್ನೂ ಹೇಳುತ್ತಿವೆ’ ಎಂದು ರಾಜ್ಯ ಬಿಜೆಪಿ ಮುಖಂಡರೊಬ್ಬರು ಹೇಳಿದ್ದಾರೆ.

ಚುನಾವಣೆ ಫಲಿತಾಂಶ ನಿರೀಕ್ಷೆಗೆ ತಕ್ಕಂತೆ ಬಂದಿಲ್ಲ ಎಂದು ಒಪ್ಪಿಕೊಂಡ ರಾಜ್ಯ ಬಿಜೆಪಿ ಅಧ್ಯಕ್ಷ ದಿಲೀಪ್ ಘೋಷ್, ‘ಬಂಗಾಳದಲ್ಲಿ ಅಧಿಕಾರಕ್ಕೆ ಬರುವ ಉದ್ದೇಶದಿಂದ ಸ್ಪರ್ಧಿಸಿದ್ದೆವು. ಆದರೆ ಬಹುಮತದಿಂದ ದೂರ ಉಳಿದೆವು. ನಾವು ಜವಾಬ್ದಾರಿಯುತ ಪ್ರತಿಪಕ್ಷವಾಗಿ ಕೆಲಸ ಮಾಡುತ್ತೇವೆ’ ಎಂದು ಹೇಳಿದ್ದಾರೆ.

ಆರ್‌ಎಸ್‌ಎಸ್ ಸಿದ್ಧಾಂತದೊಂದಿಗೆ ಅಭ್ಯರ್ಥಿಗಳ ಆಯ್ಕೆಯ ವಿಷಯದಲ್ಲಿ ಕೆಲವು ರಾಜಿ ಮಾಡಿಕೊಂಡಿದ್ದರೆ, ಪಕ್ಷದ ಕಾರ್ಯಕ್ಷಮತೆ ಸುಧಾರಿಸುತ್ತಿತ್ತು ಎಂದು ರಾಜ್ಯ ನಾಯಕರ ಒಂದು ವಿಭಾಗ ಅಭಿಪ್ರಾಯಪಟ್ಟಿದ್ದಾರೆ ಎಂದು ಬಿಜೆಪಿ ಒಳಗಿನವರು ಹೇಳುತ್ತಾರೆ.

ಪಕ್ಷದ ಕೇಂದ್ರ ನಾಯಕತ್ವವು ಪಕ್ಷಾಂತರಿಗಳ ಬಗ್ಗೆ ಎರಡನೇ ಆಲೋಚನೆ ಹೊಂದಿದೆ ಎಂದು ತಿಳಿಸಿದ್ದಾರೆ. ಇತರ ಪಕ್ಷಗಳಿಂದ ಬಿಜೆಪಿಗೆ ಸೇರುವವರು ಮೊದಲು ಸಾಮಾನ್ಯ ಕಾರ್ಯಕರ್ತರಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಭಾನುವಾರ ಪ್ರಕಟವಾದ ಫಲಿತಾಂಶದ ಪ್ರಕಾರ ಟಿಎಂಸಿ 213, ಬಿಜೆಪಿ 77, ಆರ್‌ಎಸ್‌ಎಂಪಿಯ ಅಭ್ಯರ್ಥಿ ಹಾಗೂ ಪಕ್ಷೇತರ ಒಂದು ಕ್ಷೇತ್ರದಲ್ಲಿ ಗೆದ್ದಿದ್ದಾರೆ. ಎರಡು ಕ್ಷೇತ್ರಗಳಿಗೆ ಚುನಾವಣೆ ನಡೆದಿಲ್ಲ.

ಪಶ್ಚಿಮ ಬಂಗಾಳ ಪ್ರತಿಪಕ್ಷ ನಾಯಕ: ಕಾದು ನೋಡುವ ತಂತ್ರ

ಪಶ್ಚಿಮ ಬಂಗಾಳ ವಿಧಾನಸಭೆಗೆ ಪ್ರತಿಪಕ್ಷದ ನಾಯಕನನ್ನು ಆಯ್ಕೆ ಮಾಡುವಲ್ಲಿ ಬಿಜೆಪಿ ಕಾದು ನೋಡುವ ತಂತ್ರಕ್ಕೆ ಮೊರೆ ಹೋಗಿದೆ. ರಾಜ್ಯ ಬಿಜೆಪಿಯ ಹಳೆಯ ಮುಖಂಡರೆಲ್ಲರೂ ಚುನಾವಣೆಯಲ್ಲಿ ಸೋತಿದ್ದಾರೆ. ಹೀಗಾಗಿ ಪ್ರತಿಪಕ್ಷದ ನಾಯಕನ ಆಯ್ಕೆ ವಿಚಾರದಲ್ಲಿ ಯಾವುದೇ ಅವಸರದ ತೀರ್ಮಾನ ತೆಗೆದುಕೊಂಡರೆ ಪಕ್ಷದಲ್ಲಿನ ಬಣ ರಾಜಕೀಯ ಮತ್ತಷ್ಟು ಹೆಚ್ಚುವ ಆತಂಕವಿದೆ.

ಪಕ್ಷದ ಮೂಲನಿವಾಸಿಗಳು ಸೋತಿದ್ದಾರೆ. ಮುಕುಲ್ ರಾಯ್ ಹಾಗೂ ಸುವೇಂದು ಅಧಿಕಾರಿ ಅವರನ್ನು ಪ್ರತಿಪಕ್ಷ ನಾಯಕನ ಹುದ್ದೆಗೆ ಆರಿಸಬೇಕಿದೆ. ಆದರೆ ಇವರಿಬ್ಬರೂ ವಲಸಿಗರು. ಸಾಕಷ್ಟು ರಾಜಕೀಯ ಅನುಭವ ಇರುವ ರಾಯ್ ಅವರು ಈ ಜವಾಬ್ದಾರಿ ತೆಗೆದುಕೊಳ್ಳಲು ಒಪ್ಪಿದರೂ ರಾಜ್ಯ ನಾಯಕತ್ವ ಸಮ್ಮತಿಸುತ್ತದೆಯೇ ಎಂಬುದು ಅನುಮಾನ.

ಚುನಾವಣೆ ಹೊಸ್ತಿಲಲ್ಲಿ ಟಿಎಂಸಿ ತೊರೆದು ಬಿಜೆಪಿ ಸೇರಿದ್ದ ಸುವೇಂದು ಅಧಿಕಾರಿ ಅವರು ರಾಜ್ಯ ರಾಜಕೀಯದಲ್ಲಿ ಪ್ರಮುಖ ವ್ಯಕ್ತಿ. ಅವರು ಪಕ್ಷದ ಹಳೆಯ ಮುಖಂಡರ ಜೊತೆ ಚೆನ್ನಾಗಿ ಹೊಂದಿಕೊಳ್ಳುವುದು ಕಷ್ಟ ಎಂಬುದು ಪಕ್ಷದ ಒಳಗಿನವರ ಮಾತು. ಮಮತಾ ವಿರುದ್ಧ ಗೆದ್ದಿದ್ದು, ರಾಜ್ಯ ಸಚಿವರಾಗಿ ಅನುಭವ ಹೊಂದಿರುವ ಅವರ ಹೆಸರನ್ನು ಈ ಹುದ್ದೆಗೆ ಅಲ್ಲಗಳೆಯಲಾಗದು ಎಂದು ರಾಜ್ಯ ಬಿಜೆಪಿ ಮುಖಂಡರು ಹೇಳುತ್ತಾರೆ. ಶಾಸಕ ಮನೋಜ್ ಟಿಗ್ಗಾ ಅವರನ್ನು ಈ ಹುದ್ದೆಗೆ ಪರಿಗಣಿಸಬಹುದಾದರೂ, ಅವರು ಅದನ್ನು ನಿಭಾಯಿಸಬಲ್ಲರೇ ಎಂಬ ಬಗ್ಗೆ ಅನುಮಾನಗಳಿವೆ.

ಆಮ್ಲಜನಕ ಕೊರತೆ: ಮತ್ತೆ 9 ಸಾವು

ಒಂದನೇ ಪುಟದಿಂದ

ಬೆಳಗಾವಿ ಜಿಲ್ಲಾಸ್ಪತ್ರೆಯಲ್ಲಿ ಆಮ್ಲಜನಕ ಪೂರೈಕೆ ವ್ಯವಸ್ಥೆ ಹೊಂದಿರುವ ಹಾಸಿಗೆ ಸಿಗದೆ ಸೋಮವಾರ ತಡರಾತ್ರಿಯಿಂದ ಮೂವರು ಸೋಂಕಿತರು ಸಾವಿಗೀಡಾಗಿದ್ದಾರೆ’ ಎಂದು ಆರೋಪ ಕೇಳಿಬಂದಿದೆ.

‘ಖಾಸಗಿ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆ ಉಂಟಾಗಿದ್ದರಿಂದ ಅವರನ್ನು ಈ ಆಸ್ಪತ್ರೆಗೆ ದಾಖಲಿಸಲು ಕರೆತರಲಾಗಿತ್ತು. ಹಾಸಿಗೆ ಲಭ್ಯವಿಲ್ಲ ಎಂದು ಹೇಳಿ ಅಲ್ಲಿನ ಸಿಬ್ಬಂದಿ ದಾಖಲಿಸಿಕೊಂಡಿಲ್ಲ’ ಎಂದು ದೂರಲಾಗಿದೆ.

‘ಆಮ್ಲಜನಕ ಸೌಲಭ್ಯವುಳ್ಳ ಹಾಸಿಗೆ ಸಿಗದೆ ಸೋಮವಾರ ರಾತ್ರಿಯಿಂದ ನನ್ನ ಆಂಬುಲೆನ್ಸ್‌ನಲ್ಲೇ ಮೂವರು ಸತ್ತಿದ್ದಾರೆ’ ಎಂದು ಆಂಬುಲೆನ್ಸ್ ಚಾಲಕ ಶಿವಾನಂದ ಎನ್ನುವವರು ಆಸ್ಪತ್ರೆ ಆವರಣದಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ಮಂಗಳವಾರ ತಿಳಿಸಿದರು.

‘ನಮ್ಮಲ್ಲಿ ಆಮ್ಲಜನಕ ಕೊರತೆಯಿಂದ ಯಾರೂ ಸಾವಿಗೀಡಾಗಿಲ್ಲ. ಆಸ್ಪತ್ರೆ ಭರ್ತಿ ಆಗಿದೆ. ಆಮ್ಲಜನಕ ಕೊರತೆಯಿಂದಾಗಿ ಖಾಸಗಿ ಆಸ್ಪತ್ರೆಗಳಿಂದ ಬಂದ 21 ಮಂದಿಯನ್ನು ಸೋಮವಾರ ಮಧ್ಯರಾತ್ರಿ ದಾಖಲಿಸಿಕೊಂಡಿದ್ದೇವೆ’ ಎಂದು ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಬಿಮ್ಸ್) ನಿರ್ದೇಶಕ ಡಾ.ವಿನಯ ದಾಸ್ತಿಕೊಪ್ಪ ಪ್ರತಿಕ್ರಿಯಿಸಿದರು.

ಬೆಂಗಳೂರಿನಲ್ಲೂ ಇಬ್ಬರ ಸಾವು: ಬೆಂಗಳೂರಿನ ಯಲಹಂಕದ ಅರ್ಕಾ ಆಸ್ಪತ್ರೆಯಲ್ಲಿ ಆಮ್ಲಜನಕದ ಸಿಲಿಂಡರ್ ಕೊರತೆಯಿಂದಾಗಿ ಸೋಮವಾರ ತಡರಾತ್ರಿ ಇಬ್ಬರು ಕೊರೊನಾ ಸೋಂಕಿತರು ಸಾವನ್ನಪ್ಪಿದ್ದಾರೆ.

‘ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ 18 ಸೋಂಕಿತರಿದ್ದರು. ರಾತ್ರಿ ಏಕಾಏಕಿ ಆಮ್ಲಜನಕ ಸಿಲಿಂಡರ್ ಖಾಲಿ ಆಗಿದ್ದವು. ಉಸಿರಾಟ ಸಮಸ್ಯೆಯಿಂದ ಇಬ್ಬರು ಮೃತಪಟ್ಟರು’ ಎಂದು ಮೂಲಗಳು ಹೇಳಿವೆ.

‘ಸಿಲಿಂಡರ್ ಖಾಲಿ ಆಗುವ ಬಗ್ಗೆ ಆಸ್ಪತ್ರೆಯವರು ಗಮನಹರಿಸಿರಲಿಲ್ಲ. ಸಿಲಿಂಡರ್‌ಗಾಗಿ ಬೇಡಿಕೆಯನ್ನೂ ಸಲ್ಲಿಸಿರಲಿಲ್ಲ. ಖಾಲಿಯಾದ ಬಳಿಕವೇ ಹುಡುಕಾಟ ನಡೆಸಿದ್ದರು. ಆದರೆ, ಎಲ್ಲಿಯೂ ಸಿಕ್ಕಿರಲಿಲ್ಲ. 16 ರೋಗಿಗಳು ಜೀವನ್ಮರಣ ಹೋರಾಟ ನಡೆಸಿದ್ದರು.’

‘ವಿಷಯ ಗೊತ್ತಾಗುತ್ತಿದ್ದಂತೆ ಆಸ್ಪತ್ರೆ ಎದುರು ರೋಗಿಗಳ ಸಂಬಂಧಿಕರು ಗಲಾಟೆ ಆರಂಭಿಸಿದರು. ರಾತ್ರಿ ಗಸ್ತಿನಲ್ಲಿದ್ದ ಯಲಹಂಕ ಠಾಣೆ ಇನ್‌ಸ್ಪೆಕ್ಟರ್ ಸತ್ಯನಾರಾಯಣ, ನಟ ಸೋನು ಸೂದ್ ಟ್ರಸ್ಟ್‌ನ ಸದಸ್ಯರನ್ನು ಸಂಪರ್ಕಿಸಿದ್ದರು. ಟ್ರಸ್ಟ್‌ನ ಬೆಂಗಳೂರು ಸಂಚಾಲಕ ಅಶ್ಮದ್, 11 ಆಮ್ಲಜನಕ ಸಿಲಿಂಡರ್‌ಗಳಿಗೆ ವ್ಯವಸ್ಥೆ ಮಾಡಿದ ಬಳಿಕವೇ ರೋಗಿಗಳು ಉಸಿರಾಡಲಾರಂಭಿಸಿದರು’ ಎಂದೂ ಮೂಲಗಳು ತಿಳಿಸಿವೆ.

ಅಶ್ಮದ್ ಅವರು, ‘ಟ್ರಸ್ಟ್ ವತಿಯಿಂದ ಆಮ್ಲಜನಕ ಪೂರೈಕೆ ಮಾಡುತ್ತಿದ್ದೇವೆ. ಇನ್‌ಸ್ಪೆಕ್ಟರ್ ಅವರು ಕರೆ ಮಾಡುತ್ತಿದ್ದಂತೆ ಸಿಲಿಂಡರ್ ತಂದುಕೊಟ್ಟಿದ್ದೇವೆ. ರಾತ್ರಿ ಒಂದೇ ಕಡೆ ಇರಲಿಲ್ಲ. ಟ್ರಸ್ಟ್‌ನ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಸಂದೇಶ ಹಾಕಿ ವಿವಿಧೆಡೆಯಿಂದ ವ್ಯವಸ್ಥೆ ಮಾಡಲಾಯಿತು’ ಎಂದು ತಿಳಿಸಿದರು.

ಮೈಸೂರು ಡಿಸಿ ಆಕ್ಷೇಪ ಬಹಿರಂಗ

ಒಂದನೇ ಪುಟದಿಂದ

ಸದ್ಯಕ್ಕೆ ಕೊರತೆ ಇಲ್ಲ: ‘ಸೋಂಕಿತರ ಅಗತ್ಯಕ್ಕೆ ತಕ್ಕಂತೆ ಘಟಕದಲ್ಲಿನ ಆಮ್ಲಜನಕವನ್ನು ಪೂರೈಕೆ ಮಾಡಲಾಗುತ್ತಿದೆ. ಸದ್ಯಕ್ಕೆ ಕೊರತೆ ಇಲ್ಲ’ ಎಂದು ಚಾಮರಾಜನಗ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಂ.ಸಿ.ರವಿ ತಿಳಿಸಿದರು.

ಮೈಸೂರು ಜಿಲ್ಲಾಡಳಿತದಿಂದ ಸ್ಪಂದನೆ ಸಿಕ್ಕಿಲ್ಲ; ಜಿಲ್ಲಾಧಿಕಾರಿ: ‘ಮೈಸೂರು ಜಿಲ್ಲಾಧಿಕಾರಿಯಿಂದ ಸೂಕ್ತ ಸ್ಪಂದನೆ ಸಿಕ್ಕಿಲ್ಲ. ಜಿಲ್ಲೆಗೆ 250 ಆಮ್ಲಜನಕದ ಸಿಲಿಂಡರ್ ಕಳುಹಿಸಲಾಗಿದೆ ಎಂಬುದು ಸುಳ್ಳು’ ಎಂದು ಚಾಮರಾಜನಗರ ಜಿಲ್ಲಾಡಳಿತದ ಪ್ರಕಟಣೆ ತಿಳಿಸಿದೆ.

‘ತುರ್ತು ಸ್ಥಿತಿ ವೇಳೆ ಸರಿಯಾಗಿ ಮೈಸೂರು ಜಿಲ್ಲಾಡಳಿತ ಸ್ಪಂದಿಸಿಲ್ಲ. ಮೇ 2ರ ರಾತ್ರಿ ನಮ್ಮ ಮನವಿ ಮೇರೆಗೆ ಮೈಸೂರಿನ ಪದಕಿ ಸಂಸ್ಥೆಯಿಂದ 50 ಸಿಲಿಂಡರ್‌ಗಳಷ್ಟೇ ಬಂದಿವೆ’ ಎಂದು ತಿಳಿಸಲಾಗಿದೆ.

ಡೆತ್ ಆಡಿಟ್ ವರದಿ ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ ಅಂತಿಮಗೊಳಿಸಿದ ಡೆತ್ ಆಡಿಟ್ ವರದಿಯಲ್ಲಿ, ಆಮ್ಲಜನಕದ ಕೊರತೆಯಿಂದ ಮೂವರು ಮೃತಪಟ್ಟಿದ್ದಾಗಿ ಹೇಳಲಾಗಿದೆ.

ಸಂಕ್ಷಿಪ್ತ ಸುದ್ದಿ

ಕಂಗನಾ ರಣೌತ್ ಟ್ವಿಟರ್ ಖಾತೆ ಕಾಯಂ ಸ್ಥಗಿತ



ಮುಂಬೈ: ಬಾಲಿವುಡ್ ನಟಿ ಕಂಗನಾ ರಣೌತ್ ಟ್ವಿಟರ್ ಖಾತೆಯನ್ನು ಸ್ಥಗಿತಗೊಳಿಸಲಾಗಿದೆ. ಸದಾ ಒಂದಿಲ್ಲೊಂದು ಪೋಸ್ಟ್ ಮೂಲಕ ಸುದ್ದಿ ಹಾಗೂ ವಿವಾದದಲ್ಲಿರುವ ಕಂಗನಾ ಅವರ ಖಾತೆಯನ್ನು ತನ್ನ ನಿಯಮ ಉಲ್ಲಂಘಿಸಿದ್ದಕ್ಕಾಗಿ ಕಾಯಂ ಆಗಿ ಸ್ಥಗಿತಗೊಳಿಸಲಾಗಿದೆ ಎಂದು ಟ್ವಿಟರ್ ಹೇಳಿದೆ.

ಭಾನುವಾರ ಪಶ್ಚಿಮ ಬಂಗಾಳದ ಚುನಾವಣೆ ಫಲಿತಾಂಶದ ಬಳಿಕ ಹಿಂಸಾಚಾರ ಭುಗಿಲೆದ್ದಿತ್ತು. ತೃಣಮೂಲ ಕಾಂಗ್ರೆಸ್ ಭರ್ಜರಿ ಜಯ ಗಳಿಸಿತ್ತು. ಹಿಂಸಾಚಾರ ಎದ್ದಾಗ ಸರಣಿ ಟ್ವೀಟ್ ಮಾಡಿದ್ದ ಕಂಗನಾ, ಅಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕು ಎಂದೂ ಒತ್ತಾಯಿಸಿದ್ದರು.

ಖಾತೆ ನಿಷ್ಕ್ರಿಯಗೊಳ್ಳುವ ಕೆಲವೇ ನಿಮಿಷಗಳ ಹಿಂದಷ್ಟೇ ಕಂಗನಾ ವಿಡಿಯೋ ಒಂದನ್ನು ಪೋಸ್ಟ್ ಮಾಡಿದ್ದರು. ಈ ವಿಡಿಯೋದಲ್ಲಿ ‘ಪಶ್ಚಿಮ ಬಂಗಾಳದಲ್ಲಿ ಜನರ ಹತ್ಯೆ ನಡೆಯುತ್ತಿದೆ. ಅತ್ಯಾಚಾರ ನಡೆಯುತ್ತಿದೆ. ಮನೆಗಳನ್ನು ಸುಡಲಾಗುತ್ತಿದೆ ಈ ಬಗ್ಗೆ ಯಾರೂ ಮಾತನಾಡುತ್ತಿಲ್ಲ’ ಎಂದು ಆರೋಪಿಸಿದ್ದರು.

ಆಮ್ಲಜನಕ ಸಾಗಿಸುವ ವಾಹನಗಳಿಗೆ ವಿಎಲ್‌ಟಿ ಅಳವಡಿಕೆ ಕಡ್ಡಾಯ

ನವದೆಹಲಿ (ಪಿಟಿಐ): ವೈದ್ಯಕೀಯ ಆಮ್ಲಜನಕ ಕಂಟೇನರ್, ಸಿಲಿಂಡರ್ ಅಥವಾ ಟ್ಯಾಂಕರ್‌ಗಳನ್ನು ಸಾಗಿಸುವ ವಾಹನಗಳಿಗೆ ವಾಹನವಿರುವ ಸ್ಥಳವನ್ನು ಪತ್ತೆ ಮಾಡುವ (ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್–ವಿಎಲ್‌ಟಿ) ಸಾಧನ ಅಳವಡಿಸುವುದನ್ನು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಕಡ್ಡಾಯಗೊಳಿಸಿದೆ.

ಜಿಪಿಎಸ್ ಟ್ರ್ಯಾಕಿಂಗ್ ಉಪಕರಣಗಳು ಈ ಟ್ಯಾಂಕರ್‌ಗಳ ಸಾಗಾಟವನ್ನು ಸರಿಯಾಗಿ ಮೇಲ್ವಿಚಾರಣೆ ಮಾಡುತ್ತವೆ. ಮಾರ್ಗ ಬದಲಾವಣೆ ಅಥವಾ ವಿಳಂಬಕ್ಕೆ ಅವಕಾಶ ಇರುವುದಿಲ್ಲ ಎಂದು ಸಚಿವಾಲಯ ಟ್ವೀಟ್‌ನಲ್ಲಿ ತಿಳಿಸಿದೆ.

ಬಿಲ್ ಗೇಟ್ಸ್ -ಮೆಲಿಂಡಾ ಗೇಟ್ಸ್ ದಂಪತಿ ವಿಚ್ಛೇದನ ಘೋಷಣೆ

ವಾಷಿಂಗ್ಟನ್ (ಎಎಫ್‌ಪಿ): ಮೈಕ್ರೋಸಾಫ್ಟ್ ಸಹ-ಸಂಸ್ಥಾಪಕ ಬಿಲ್ ಗೇಟ್ಸ್ ಮತ್ತು ಮೆಲಿಂಡಾ ಗೇಟ್ಸ್ ದಂಪತಿ ಮದುವೆಯಾಗಿ 27 ವರ್ಷಗಳ ದಾಂಪತ್ಯದ ನಂತರ ವಿಚ್ಛೇದನ ಪಡೆಯುವುದಾಗಿ ಘೋಷಿಸಿದ್ದಾರೆ.

ವಿಶ್ವದ ಶ್ರೀಮಂತ ದಂಪತಿಗಳಲ್ಲಿ ಈ ಜೋಡಿಯೂ ಒಂದು. ಇವರ ಜಂಟಿ ಸಂಪತ್ತು 13,000 ಕೋಟಿ ಡಾಲರ್ ಎಂದು ಅಂದಾಜಿಸಲಾಗಿದೆ. ಬಿಲ್ ಮತ್ತು ಮೆಲಿಂಡಾ ಗೇಟ್ಸ್ ಫೌಂಡೇಷನ್ ಹಲವು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ.

ವಿಚ್ಛೇದನ ನೀಡಿರುವ ಕುರಿತು ಟ್ವೀಟ್ ಮಾಡಿರುವ ಬಿಲ್ ಗೇಟ್ಸ್, ‘27 ವರ್ಷಗಳ ದಾಂಪತ್ಯದ ನಂತರ ನಾವು ವಿಚ್ಛೇದನ ಘೋಷಿಸಿದ್ದೇವೆ. ಜಾಗತಿಕ ಆರೋಗ್ಯ, ಲಿಂಗ ಸಮಾನತೆ, ಶಿಕ್ಷಣ ಸೇರಿದಂತೆ ಹಲವು ಸಮಾಜಮುಖಿ ಕಾರ್ಯಕ್ರಮಗಳಿಗೆ ಧನಸಹಾಯ ನೀಡುವ ಕೆಲಸವನ್ನು ಬಿಲ್ ಮತ್ತು ಮೆಲಿಂಡಾ ಗೇಟ್ಸ್ ಫೌಂಡೇಶನ್‌ನಲ್ಲಿ ನಮ್ಮ ಜಂಟಿ ಸಹಭಾಗಿತ್ವವನ್ನು ಮುಂದುವರಿಸುತ್ತೇವೆ’ ಎಂದು ಅವರು ಹೇಳಿದ್ದಾರೆ.

‘ನಾವು ಮದುವೆ ಸಂಬಂಧವನ್ನು ಕೊನೆಗೊಳಿಸುವ ನಿರ್ಧಾರವನ್ನು ಕೈಗೊಂಡಿದ್ದೇವೆ’ ಎಂದು ಇಬ್ಬರೂ ಜಂಟಿ ಹೇಳಿಕೆ ನೀಡಿರುವ ಪ್ರತಿಯನ್ನು ಅಧಿಕೃತ ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.



ಬಿಲ್ ಗೇಟ್ಸ್, ಮೆಲಿಂಡಾ ಗೇಟ್ಸ್

ನೀರವ್, ಮಲ್ಯ ಶೀಘ್ರ ಹಸ್ತಾಂತರ: ಚರ್ಚೆ

ನವದೆಹಲಿ (ಪಿಟಿಐ): ದೇಶಭ್ರಷ್ಟ ಉದ್ಯಮಿಗಳಾದ ವಿಜಯ್ ಮಲ್ಯ, ನೀರವ್ ಮೋದಿ ಅವರ ಶೀಘ್ರ ಹಸ್ತಾಂತರ, ವಿವಿಧ ಕ್ಷೇತ್ರಗಳಲ್ಲಿ ಉಭಯ ದೇಶಗಳ ನಡುವಿನ ಸಹಕಾರ ಮತ್ತಷ್ಟೂ ಗಟ್ಟಿಗೊಳಿಸುವ ನಿಟ್ಟಿನಲ್ಲಿ ಜಾರಿಗೊಳಿಸಬೇಕಾದ ಕಾರ್ಯಗಳನ್ನು ಒಳಗೊಂಡ ಮುನ್ನೋಟಕ್ಕೆ ಭಾರತ ಹಾಗೂ ಬ್ರಿಟನ್ ಮಂಗಳವಾರ ಸಮ್ಮತಿಸಿದವು.

ಪ್ರಧಾನಿ ನರೇಂದ್ರ ಮೋದಿ ಹಾಗೂ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರ ನಡುವೆ ನಡೆದ ವರ್ಚುವಲ್ ಸಭೆಯಲ್ಲಿ, ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ವೃದ್ಧಿಗಾಗಿ ಮಹತ್ವದ ಚರ್ಚೆ ನಡೆಯಿತು.

ವಿದೇಶಾಂಗ ಸಚಿವಾಲಯದ ಯುರೋಪ್‌ಗೆ ಸಂಬಂಧಿಸಿದ ವ್ಯವಹಾರಗಳ ವಿಭಾಗದ ಜಂಟಿ ಕಾರ್ಯದರ್ಶಿ ಸಂದೀಪ್ ಚಕ್ರವರ್ತಿ ಅವರು ಸಭೆಯ ಕುರಿತು ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

‘ದೇಶದ ಬ್ಯಾಂಕುಗಳಿಗೆ ವಂಚಿಸಿ ತಲೆಮರೆಸಿಕೊಂಡಿರುವ ವಿಜಯ್ ಮಲ್ಯ ಹಾಗೂ ನೀರವ್ ಮೋದಿ ಅವರನ್ನು ಭಾರತಕ್ಕೆ ಹಸ್ತಾಂತರಿಸುವ ಕುರಿತಂತೆಯೂ ಸಭೆಯಲ್ಲಿ ಪ್ರಸ್ತಾಪವಾಯಿತು’ ಎಂದು ತಿಳಿಸಿದರು.


‘ಆರ್ಥಿಕ ಅಪರಾಧಗಳನ್ನು ಮಾಡಿ ಬ್ರಿಟನ್‌ನಲ್ಲಿ ತಲೆಮರೆಸಿಕೊಂಡಿರುವವರನ್ನು ಶೀಘ್ರವೇ ಹಸ್ತಾಂತರಿಸಲು ಕ್ರಮ ಕೈಗೊಳ್ಳುವಂತೆ ಪ್ರಧಾನಿ ಮೋದಿ ಹೇಳಿದರು’ ಎಂದು ಸಂದೀಪ್ ಚಕ್ರವರ್ತಿ ವಿವರಿಸಿದರು.

‘ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಬ್ರಿಟನ್‌ನಲ್ಲಿ ತನ್ನ ಉತ್ಪಾದನಾ ಘಟಕ ಸ್ಥಾಪಿಸಲಿದೆ. ಲಸಿಕೆಯನ್ನು ಉತ್ಪಾದಿಸಲಿದೆ ಎಂಬುದಾಗಿ ಬೋರಿಸ್ ಜಾನ್ಸನ್ ತಿಳಿಸಿದರು’ ಎಂದರು.

‘ಉಭಯ ದೇಶಗಳ ಜನರ ನಡುವೆ ಬಾಂಧವ್ಯ ವೃದ್ಧಿ, ವ್ಯಾಪಾರ, ರಕ್ಷಣೆ, ಭದ್ರತೆ, ಹವಾಮಾನ ಬದಲಾವಣೆ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಸಹಕಾರ ಹೆಚ್ಚಿಸಲು ‘ಮುನ್ನೋಟ–2030’ ಅಡಿ ಕಾರ್ಯಕ್ರಮ ರೂಪಿಸಲು ಉಭಯ ನಾಯಕರು ಸಮ್ಮತಿಸಿದರು’ ಎಂದೂ ಹೇಳಿದರು.

ನಿಧನ ವಾರ್ತೆ

ಜಮ್ಮು ಕಾಶ್ಮೀರದ ಮಾಜಿ ರಾಜ್ಯಪಾಲ ಜಗ್‌ಮೋಹನ್



ನವದೆಹಲಿ (ಪಿಟಿಐ): ಜಮ್ಮು ಕಾಶ್ಮೀರದ ಮಾಜಿ ರಾಜ್ಯಪಾಲ ಹಾಗೂ ಕೇಂದ್ರದ ಮಾಜಿ ಸಚಿವ ಜಗ್‌ಮೋಹನ್ (93) ಅವರು ಅಲ್ಪಕಾಲದ ಅನಾರೋಗ್ಯದಿಂದ ಮಂಗಳವಾರ ಇಲ್ಲಿ ನಿಧನರಾದರು.

ದಕ್ಷ ಆಡಳಿತಗಾರ ಎಂದೇ ಹೆಸರಾದ ಜಗ್‌ಮೋಹನ್ 1984ರಿಂದ 5 ವರ್ಷ ಗಳ ಕಾಲ ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲ ರಾಗಿದ್ದರು. 1996ರಲ್ಲಿ ಮೊದಲ ಸಲ ಸಂಸದರಾಗಿ ಅವರು ಆಯ್ಕೆ ಯಾಗಿದ್ದರು.

ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಲ್ಲಿ ಸಚಿವರಾಗಿದ್ದರು. ಗೋವಾದ ರಾಜ್ಯಪಾಲರಾಗಿ ಮತ್ತು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಆಗಿಯೂ ಕಾರ್ಯನಿರ್ವಹಿಸಿದ್ದರು. ಅವರಿಗೆ ಪದ್ಮಶ್ರೀ (1971), ಪದ್ಮಭೂಷಣ (1977) ಮತ್ತು ಪದ್ಮ ವಿಭೂಷಣ (2016) ಗೌರವಗಳು ಸಂದಿವೆ.

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಗಳ ಮುಂದೂಡಿಕೆ

ಬಿಸಿಸಿಐಗೆ ₹ 2000 ಕೋಟಿ ನಷ್ಟ

ನವದೆಹಲಿ (ಪಿಟಿಐ): ಐಪಿಎಲ್ ಮುಂದೂಡಿಕೆಯಿಂದಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಎರಡು ಸಾವಿರ ಕೋಟಿ ರೂಪಾಯಿ ನಷ್ಟವಾಗಲಿದೆ.

'ಎರಡರಿಂದ ಎರಡೂವರೆ-ಸಾವಿರ ಕೋಟಿಯವರೆಗೂ ನಮಗೆ ನಷ್ಟವಾಗಲಿದೆ. ಪ್ರಾಯೋಜಕತ್ವ ಮತ್ತು ಅಧಿಕೃತ ಪ್ರಸಾರಕರಿಂದ ಬರಬೇಕಾದ ಆದಾಯದಲ್ಲಿ ಖೋತಾ ಆಗಲಿದೆ' ಎಂದು ಬಿಸಿಸಿಐ ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ.



ಬ್ರಿಜೇಶ್ ಪಟೇಲ್

ಈ ಬಾರಿಯ ಟೂರ್ನಿಯ ವೇಳಾ ಪಟ್ಟಿಯ ಪ್ರಕಾರ 52 ದಿನಗಳಲ್ಲಿ 60 ಪಂದ್ಯಗಳನ್ನು ಆಯೋಜಿಸಲಾಗಿತ್ತು. ಆದರೆ, ಈಗ 24 ದಿನಗಳಲ್ಲಿ 29 ಪಂದ್ಯಗಳು ಮಾತ್ರ ಪೂರ್ಣಗೊಂಡಿವೆ.

ಅಧಿಕೃತ ಪ್ರಸಾರಕ ಸಂಸ್ಥೆಯಾದ ಸ್ಟಾರ್ ಸ್ಪೋರ್ಟ್ಸ್ ವಾಹಿನಿಯೊಂದಿಗೆ ಐದು ವರ್ಷಗಳ ಒಪ್ಪಂದ ಮಾಡಿಕೊಂಡಿರುವ ಬಿಸಿಸಿಐ ₹ 16,347 ಕೋಟಿ (ವಾರ್ಷಿಕ ₹ 3269.4ಕೋಟಿ) ಪಡೆಯುತ್ತದೆ. ಆದರೆ 60 ಪಂದ್ಯಗಳಿಗೆ ಈ ಲೆಕ್ಕಾಚಾರ ಇದೆ. ಅಂದರೆ ಪ್ರತಿಯೊಂದು ಪಂದ್ಯಕ್ಕೂ ಅಂದಾಜು ₹54.5 ಕೋಟಿ ನೀಡಲಿದೆ. ಆದರೆ ಈಗ ನಡೆದಿರುವ ಪಂದ್ಯಗಳಿಗೆ ₹ 1580 ಕೋಟಿ ಲಭಿಸಲಿದೆ. ₹1690 ಕೋಟಿ ಕೈಬಿಟ್ಟು ಹೋಗಲಿದೆ.

ಟೈಟಲ್ ಪ್ರಾಯೋಜಕತ್ವ ಹಕ್ಕು ಪಡೆದಿರುವ ವಿವೊ ₹440 ಕೋಟಿಯನ್ನು ಪ್ರತಿ ಆವೃತ್ತಿಗೆ ನೀಡುತ್ತದೆ. ಈಗ ಈ ಮೊತ್ತದಲ್ಲಿ ಅರ್ಧದಷ್ಟು ಮಾತ್ರ ದಕ್ಕಲಿದೆ. ಸಹಪ್ರಾಯೋಜಕತ್ವ ವಹಿಸಿರುವ ಅನ್‌ಅಕಾಡೆಮಿ, ಡ್ರೀಮ್ ಇಲೆವನ್, ಸಿರೆಡ್, ಅಪ್‌ಸ್ಟಾಕ್ಸ್ ಮತ್ತು ಟಾಟಾ ಮೋಟರ್ಸ್ ಕಂಪನಿಗಳು ಅಂದಾಜು ₹ 120 ಕೋಟಿ ನೀಡುತ್ತವೆ. ಈಗ ಅದರಲ್ಲೂ ಅರ್ಧ ಭಾಗವಷ್ಟೇ ಲಭಿಸಬಹುದು.


'2200 ಕೋಟಿ ರೂಪಾಯಿ ನಷ್ಟವೆನ್ನುವುದು ಅಂದಾಜು ಲೆಕ್ಕಾಚಾರವಷ್ಟೇ. ಆದರೆ ಅದಕ್ಕಿಂತಲೂ ಹೆಚ್ಚು ಮೊತ್ತದ ನಷ್ಟವನ್ನೇ ಭರಿಸಬೇಕಾಗುತ್ತದೆ. ಮಂಡಳಿಯು ಬೇರೆ ಬೇರೆ ಖರ್ಚುಗಳಿಗೆ ಹಣ ನೀಡಬೇಕಾಗುತ್ತದೆ. ಫ್ರ್ಯಾಂಚೈಸ್‌ಗಳು ತಮ್ಮ ಆಟಗಾರರೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರಕಾರ ವೇತನವನ್ನು ನೀಡುತ್ತವೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ವಿದೇಶಿ ಆಟಗಾರರನ್ನು ಕಳುಹಿಸಲು ಸೂಕ್ತ ಮಾರ್ಗ': ಟೂರ್ನಿಯಲ್ಲಿ ಭಾಗವಹಿಸಿದ್ದ ವಿದೇಶಿ ಆಟಗಾರರನ್ನು ವಾಪಸು ಕಳುಹಿಸಲು ಸೂಕ್ತ ಮಾರ್ಗ ಕಂಡುಕೊಳ್ಳುತ್ತಿದ್ದೇವೆ ಎಂದು ಐಪಿಎಲ್ ಮುಖ್ಯಸ್ಥ ಬ್ರಿಜೇಶ್ ಪಟೇಲ್ ಮಂಗಳವಾರ ತಿಳಿಸಿದ್ದಾರೆ.

ಭಾರತದಲ್ಲಿ ಕೋವಿಡ್ ತೀವ್ರವಾಗಿ ವ್ಯಾಪಿಸಿರುವುದರಿಂದ ಅನೇಕ ರಾಷ್ಟ್ರಗಳು ಪ್ರಯಾಣ ನಿರ್ಬಂಧ ಹೇರಿವೆ. ಹೀಗಾಗಿ ಆಟಗಾರರನ್ನು ಸುರಕ್ಷಿತವಾಗಿ ಕಳುಹಿಸುವ ಭರವಸೆಯನ್ನು ಬಿಸಿಸಿಐ ನೀಡಿತ್ತು.



ಅಮಿತ್ ಮಿಶ್ರಾ



ವೃದ್ಧಿಮಾನ್ ಸಹಾ

ಸಹಾ, ಮಿಶ್ರಾಗೂ ಕೋವಿಡ್

ಸನ್‌ರೈಸರ್ಸ್ ಹೈದರಾಬಾದ್ ತಂಡದ ವಿಕೆಟ್‌ಕೀಪರ್–ಬ್ಯಾಟ್ಸ್‌ಮನ್ ವೃದ್ಧಿಮಾನ್ ಸಹಾ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಸ್ಪಿನ್ನರ್ ಅಮಿತ್ ಮಿಶ್ರಾ ಅವರಿಗೆ ಕೋವಿಡ್ ಇರುವುದು ಖಚಿತವಾಗಿದೆ.

ಸೋಮವಾರ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬೌಲಿಂಗ್ ಕೋಚ್ ಲಕ್ಷ್ಮೀಪತಿ ಬಾಲಾಜಿ, ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಆಟಗಾರರಾದ ಸಂದೀಪ್ ವಾರಿಯರ್ ಮತ್ತು ವರುಣ್ ಚಕ್ರವರ್ತಿ ಅವರಿಗೆ ಸೋಂಕು ಇರುವುದು ಖಚಿತವಾಗಿತ್ತು. ಅದರಿಂದಾಗಿ ಕೋಲ್ಕತ್ತ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಡುವಣ ಪಂದ್ಯ ಮುಂದೂಡಲಾಗಿತ್ತು. ಮಂಗಳವಾರ ತುರ್ತು ಸಭೆ ನಡೆಸಿದ ಐಪಿಎಲ್ ಮಂಡಳಿ ಮತ್ತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಪದಾಧಿಕಾರಿಗಳು ಟೂರ್ನಿಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಲು ಒಮ್ಮತದ ನಿರ್ಣಯ ಕೈಗೊಂಡರು.

'ಇದೇ ವರ್ಷದಲ್ಲಿ ಸೂಕ್ತವಾಗುವ ಸಮಯದಲ್ಲಿ ಟೂರ್ನಿಯ ಉಳಿದ ಭಾಗವನ್ನು ಆಯೋಜಿಸಲು ಯೋಚಿಸುತ್ತೇವೆ. ಬಹುತೇಕ ಸೆಪ್ಟೆಂಬರ್‌ನಲ್ಲಿ ಈ ಬಗ್ಗೆ ನಿರ್ಧರಿಸಲು ಸಾಧ್ಯವಾಗಬಹುದು. ಅಲ್ಲಿಯವರೆಗೂ ಪಂದ್ಯಗಳ ಆಯೋಜನೆ ಮಾಡುವ ವಿಚಾರವಿಲ್ಲ' ಎಂದು ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ಹೇಳಿದ್ದಾರೆ.

ಕೆಎಸ್‌ಸಿಎ ಸಿದ್ಧತೆಗಳು ವ್ಯರ್ಥ

ಬೆಂಗಳೂರು: ಇನ್ನು ನಾಲ್ಕು ದಿನಗಳು ಕಳೆದಿದ್ದರೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಈ ಋತುವಿನ ಐಪಿಎಲ್ ಟೂರ್ನಿಯ ಮೊದಲ ಪಂದ್ಯ ನಡೆಯಬೇಕಿತ್ತು.

ಅದಕ್ಕಾಗಿ ಕ್ರೀಡಾಂಗಣದಲ್ಲಿ ಜೀವ ಸುರಕ್ಷಾ ವಾತಾವರಣದ ನಿಯಮಗಳನ್ವಯ ಎಲ್ಲ ಸಿದ್ಧತೆಗಳನ್ನೂ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮಾಡಿಕೊಂಡಿತ್ತು. ಆದರೆ ಇದೀಗ ಅದೆಲ್ಲವೂ ವ್ಯರ್ಥವಾಗಿದೆ. ಅದಕ್ಕಾಗಿ ಮಾಡಿದ ಖರ್ಚು ಕೂಡ ನಷ್ಟವಾಗಿದೆ.

'ಜನರು, ಆಟಗಾರರು ಮತ್ತೆಲ್ಲರ ಆರೋಗ್ಯ ಹಾಗೂ ಸುರಕ್ಷತೆಯೇ ಮುಖ್ಯವಾಗುತ್ತದೆ. ಆದ್ದರಿಂದ ಬಿಸಿಸಿಐ ತೆಗೆದುಕೊಂಡಿರುವ ನಿರ್ಧಾರ ಸೂಕ್ತವಾಗಿದೆ. ಪಂದ್ಯಗಳನ್ನು ಆಯೋಜಿಸಲು ನಾವು ಉತ್ಸುಕರಾಗಿದ್ದೆವು. ಅದಕ್ಕಾಗಿ ಅಗತ್ಯವಿದ್ದ ಎಲ್ಲ ತಯಾರಿಗಳನ್ನೂ ಮಾಡಿಕೊಂಡಿದ್ದೆವು. ಎಲ್ಲವೂ ಚೆನ್ನಾಗಿದ್ದು ಪಂದ್ಯಗಳು ನಡೆದಿದ್ದರೆ ಸಂತಸವಾಗುತ್ತಿತ್ತು. ಆರು ಪಿಚ್‌ಗಳು ಸಿದ್ಧವಾಗಿದ್ದವು. ಕ್ರೀಡಾಂಗಣ ಸಿಬ್ಬಂದಿಯನ್ನು ಈಗಾಗಲೇ ಬಯೋಬಬಲ್‌ನಲ್ಲಿ ಇರಲು ಸೂಚಿಸಲಾಗಿತ್ತು. ಅವರಿಗಾಗಿ ಪ್ರತ್ಯೇಕ ವಸತಿ, ಊಟದ ವ್ಯವಸ್ಥೆಗಳನ್ನು ಮಾಡಲಾಗಿತ್ತು. ಕಾಯ್ದಿಟ್ಟ ಸಿಬ್ಬಂದಿಯನ್ನೂ ನೇಮಕ ಮಾಡಲಾಗಿತ್ತು. ಆಟಗಾರರಿಗೆ ಬೇಕಾದ ಸೌಲಭ್ಯಗಳನ್ನು ವೈದ್ಯಕೀಯ ತಂಡದ ಸಲಹೆಯ ಪ್ರಕಾರ ತಯಾರಿ ಮಾಡಲಾಗಿತ್ತು. ಅಂಪೈರ್, ಅಧಿಕಾರಿಗಳು ಮತ್ತು ಆಟಗಾರರಿಗೆ ಪ್ರತ್ಯೇಕ ಕೋಣೆಗಳನ್ನು ಸಿದ್ಧಗೊಳಿಸಲಾಗಿತ್ತು' ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ 'ಪ್ರಜಾವಾಣಿ'ಗೆ ತಿಳಿಸಿದರು.

ಬಿಸಿಸಿಐಗೆ ಸ್ಟಾರ್ ಸ್ಪೋರ್ಟ್ಸ್ ಬೆಂಬಲ

ಮುಂಬೈ (ಪಿಟಿಐ): ಐಪಿಎಲ್ ಟೂರ್ನಿಯ ಪಂದ್ಯಗಳನ್ನು ಅನಿರ್ದಿಷ್ಟಾವಧಿಗೆ ಮುಂದೂಡಿರುವ ಬಿಸಿಸಿಐ ನಿರ್ಧಾರಕ್ಕೆ ಅಧಿಕೃತ ಪ್ರಸಾರ ಸಂಸ್ಥೆಯಾದ ಸ್ಟಾರ್ ಇಂಡಿಯಾ ಸಹಮತ ವ್ಯಕ್ತಪಡಿಸಿದೆ.

'ಬಿಸಿಸಿಐ ನಿರ್ಧಾರವನ್ನು ಸ್ಟಾರ್ ಇಂಡಿಯಾ ಬೆಂಬಲಿಸುತ್ತದೆ. ಆಟಗಾರರು, ಸಿಬ್ಬಂದಿ ಮತ್ತು ಐಪಿಎಲ್‌ನಲ್ಲಿ ತೊಡಗಿಸಿಕೊಂಡಿರುವ ಎಲ್ಲರ ಆರೋಗ್ಯ ಮತ್ತು ಸುರಕ್ಷತೆಗೆ ಆದ್ಯತೆ ಕೊಡಬೇಕು. ಆ ನಿಟ್ಟಿನಲ್ಲಿ ಮುಂದೂಡುವ ನಿರ್ಧಾರವು ಸೂಕ್ತವಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹಸ್ಸಿಗೆ ಕೋವಿಡ್

ನವದೆಹಲಿ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬ್ಯಾಟಿಂಗ್ ಕೋಚ್ ಮೈಕೆಲ್ ಹಸ್ಸಿ ಅವರಿಗೆ ಮಂಗಳವಾರ ಕೋವಿಡ್ ಇರುವುದು ದೃಢಪಟ್ಟಿದೆ.

ಐಪಿಎಲ್ ಮೂಲಗಳು ಈ ವಿಷಯವನ್ನು ಖಚಿತಪಡಿಸಿವೆ.

ಸೋಮವಾರ ಚೆನ್ನೈ ತಂಡದ ಬೌಲಿಂಗ್ ತರಬೇತುದಾರ ಲಕ್ಷ್ಮೀಪತಿ ಬಾಲಾಜಿ ಅವರಲ್ಲಿಯೂ ಸೋಂಕು ಪತ್ತೆಯಾಗಿತ್ತು.

ಟಿ20 ವಿಶ್ವಕಪ್ ಸ್ಥಳಾಂತರಕ್ಕೆ ಸಜ್ಜು?

ನವದೆಹಲಿ (ಪಿಟಿಐ): ಭಾರತದಲ್ಲಿ ಈ ವರ್ಷ ನಿಗದಿಯಾಗಿರುವ ಟ್ವೆಂಟಿ–20 ವಿಶ್ವಕಪ್ ಟೂರ್ನಿಯನ್ನು ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ (ಯುಎಇ) ಸ್ಥಳಾಂತರಿಸುವ ಸಾಧ್ಯತೆ ದಟ್ಟವಾಗಿದೆ. ನವೆಂಬರ್‌ನಲ್ಲಿ ಕೋವಿಡ್‌ನ 3ನೇ ಅಲೆ ಭೀತಿ ಇರುವುದರಿಂದ ಟೂರ್ನಿಯಲ್ಲಿ ಭಾಗವಹಿಸಬೇಕಾಗಿದ್ದ ತಂಡಗಳಿಗೆ ಇಲ್ಲಿಗೆ ಆಗಮಿಸುವುದು ಸೂಕ್ತ ಎನಿಸುವುದಿಲ್ಲ ಎಂಬುದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ನಿಲುವಾಗಿದೆ.

ಈ ಕುರಿತು ಒಂದು ತಿಂಗಳೊಳಗೆ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ. ಆದರೆ, ಕೋವಿಡ್ ಹಿನ್ನೆಲೆಯಲ್ಲಿ ಐಪಿಎಲ್ ಟೂರ್ನಿಯನ್ನು ಸ್ಥಗಿತಗೊಳಿಸಬೇಕಾಗಿ ಬಂದಿದ್ದರಿಂದ, 16 ತಂಡಗಳ ವಿಶ್ವಕಪ್‌ಅನ್ನು ಆಯೋಜಿಸುವ ಕುರಿತು ಬಿಸಿಸಿಐಗೆ ಆತಂಕವಿದೆ.


ಬಿಸಿಸಿಐ ಅಧಿಕಾರಿಗಳು ಈ ಕುರಿತು ಕೇಂದ್ರ ಸರ್ಕಾರದ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು, ಟೂರ್ನಿಯನ್ನು ಯುಎಇಗೆ ಸ್ಥಳಾಂತರಕ್ಕೆ ಹೆಚ್ಚು ಕಡಿಮೆ ಒಪ್ಪಿಗೆ ಸಿಕ್ಕಿದೆ ಎನ್ನಲಾಗಿದೆ. ಆದರೆ ಟೂರ್ನಿ ನಡೆಯುವ ದಿನಾಂಕವನ್ನು ಇನ್ನೂ ನಿಗದಿಪಡಿಸಿಲ್ಲ.

ಸುದ್ದಿ 2 ನಿಮಿಷ

ಕೋವಿಡ್‌ನಿಂದ ಪ್ರಕಾಶ್ ಪಡುಕೋಣೆ ಚೇತರಿಕೆ

ಬೆಂಗಳೂರು : ಕೊರೊನಾ ಸೋಂಕಿತರಾಗಿ ಆಸ್ಪತ್ರೆಗೆ ದಾಖಲಾಗಿದ್ದ ಬ್ಯಾಡ್ಮಿಂಟನ್ ದಿಗ್ಗಜ ಪ್ರಕಾಶ್ ಪಡುಕೋಣೆ ಅವರು ಚೇತರಿಸಿಕೊಳ್ಳುತ್ತಿದ್ದು, ಎರಡು ಅಥವಾ ಮೂರು ದಿನಗಳಲ್ಲಿ ಮನೆಗೆ ಮರಳುವ ನಿರೀಕ್ಷೆಯಿದೆ.

'10 ದಿನಗಳ ಹಿಂದೆ ಪ್ರಕಾಶ್, ಅವರ ಪತ್ನಿ ಉಜ್ವಲಾ ಹಾಗೂ ಪುತ್ರಿ ಅನೀಶಾ ಅವರಲ್ಲಿ ಸೋಂಕಿನ ಲಕ್ಷಣಗಳು ಕಂಡುಬಂದಿದ್ದವು. ಪರೀಕ್ಷೆ ಮಾಡಿಸಿಕೊಂಡಾಗ ಕೋವಿಡ್ ಇರುವುದು ಖಚಿತಪಟ್ಟಿತ್ತು. ಅವರೆಲ್ಲರೂ ಪ್ರತ್ಯೇಕವಾಸದಲ್ಲಿದ್ದರು. ಆದರೆ ಪ್ರಕಾಶ್ ಅವರಿಗೆ ಜ್ವರದ ತೀವ್ರತೆ ಕಡಿಮೆಯಾಗಿರಲಿಲ್ಲ. ಹೀಗಾಗಿ ಅವರು ಶನಿವಾರ ಬೆಂಗಳೂರಿನ ಆಸ್ಪತ್ರೆಗೆ ದಾಖಲಾಗಿದ್ದರು' ಎಂದು ಪ್ರಕಾಶ್ ಅವರ ಮಿತ್ರ ಹಾಗೂ ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿಯ (ಪಿಪಿಬಿಎ) ನಿರ್ದೇಶಕ ವಿಮಲ್ ಕುಮಾರ್ ಹೇಳಿದ್ದಾರೆ.



'ಪ್ರಕಾಶ್ ಈಗ ಆರೋಗ್ಯವಾಗಿದ್ದಾರೆ. ಇನ್ನು ಎರಡು ಅಥವಾ ಮೂರು ದಿನಗಳಲ್ಲಿ ಮನೆಗೆ ಮರಳಲಿದ್ದಾರೆ. ಅವರ ಪತ್ನಿ ಮತ್ತು ಪುತ್ರಿ ಮನೆಯಲ್ಲೇ ಇದ್ದಾರೆ' ಎಂದು ವಿಮಲ್ ಹೇಳಿದರು.

65 ವರ್ಷದ ಪ್ರಕಾಶ್ ಅವರು ಪ್ರತಿಷ್ಠಿತ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್ ಗೆದ್ದ ಭಾರತದ ಮೊದಲ ಆಟಗಾರ ಎನಿಸಿಕೊಂಡವರು. 1980ರಲ್ಲಿ ಅವರು ಈ ಸಾಧನೆ ಮಾಡಿದ್ದರು.

1970–80ರ ದಶಕದಲ್ಲಿ ವಿಶ್ವ ಬ್ಯಾಡ್ಮಿಂಟನ್‌ನಲ್ಲಿ ಪ್ರಕಾಶ್ ಪಡುಕೋಣೆಯವರದು ಪ್ರಮುಖ ಹೆಸರು. ಆ ವೇಳೆ ಅವರು ಭಾರತ ಕ್ರೀಡಾ ಕ್ಷೇತ್ರದಲ್ಲಿ ಮಾದರಿ ಎನಿಸಿದ್ದರು. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪದಕವೊಂದನ್ನು ಗೆದ್ದ ಭಾರತದ ಮೊದಲ ಆಟಗಾರ ಎಂಬ ಶ್ರೇಯವೂ ಪ್ರಕಾಶ್ ಅವರದ್ದು. 1983ರಲ್ಲಿ ಡೆನ್ಮಾರ್ಕ್‌ನಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಅವರು ಕಂಚಿನ ಪದಕ ವಿಜೇತರಾಗಿದ್ದರು.

ಹಾಕಿ: ಎಫ್‌ಐಎಚ್ ಪ್ರೊ ಲೀಗ್ ಪಂದ್ಯಗಳು ಮುಂದಕ್ಕೆ

ಲಾಸನ್ (ಪಿಟಿಐ): ಈ ತಿಂಗಳ ಅಂತ್ಯದಲ್ಲಿ ಭಾರತ ತಂಡವು ಸ್ಪೇನ್ ಹಾಗೂ ಜರ್ಮನಿ ವಿರುದ್ಧ ಆಡಬೇಕಿದ್ದ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಪಂದ್ಯಗಳನ್ನು ಮುಂದೂಡಲಾಗಿದೆ. ಕೋವಿಡ್ ಹಿನ್ನೆಲೆಯಲ್ಲಿ ವಿಧಿಸಿರುವ ಪ್ರಯಾಣ ನಿರ್ಬಂಧಗಳ ಕಾರಣ ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ಈ ನಿರ್ಧಾರಕ್ಕೆ ಬಂದಿದೆ.

ಭಾರತ ಪುರುಷರ ತಂಡವು ಮೇ 15 ಹಾಗೂ 16ರಂದು ಸ್ಪೇನ್ ವಿರುದ್ಧ, ಜರ್ಮನಿ ತಂಡದ ಎದುರು ಮೇ 23 ಮತ್ತು 24ರಂದು ಪಂದ್ಯಗಳನ್ನು ಆಡಬೇಕಿತ್ತು.ಪಂದ್ಯಗಳು ನಡೆಯುವ ಮುಂದಿನ ದಿನಾಂಕಗಳನ್ನು ಇನ್ನೂ ಪ್ರಕಟಿಸಿಲ್ಲ.

ಆರ್‌ಸಿಬಿ ಟ್ರೋಫಿ ಜಯಿಸುವುದು ಕೈತಪ್ಪಿತೆ?

ಬೆಂಗಳೂರು: 'ಈ ಬಾರಿ ಐಪಿಎಲ್‌ನಲ್ಲಿ ಅಮೋಘವಾಗಿ ಆಡುತ್ತಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಕಪ್ ಗೆದ್ದೇ ಗೆಲ್ಲುತ್ತಿತ್ತು. ಆದರೆ ನೋಡಿ ದುರದೃಷ್ಟ ಹೇಗಿದೆ. ಕೋವಿಡ್‌ನಿಂದ ಟೂರ್ನಿಯೇ ತಾತ್ಕಾಲಿಕವಾಗಿ ಸ್ಥಗಿತವಾಯಿತು'–

ಕಳೆದ 14 ವರ್ಷಗಳಿಂದ ಕಪ್ ಗೆಲ್ಲುವಲ್ಲಿ ವಿಫಲವಾಗಿರುವ ಆರ್‌ಸಿಬಿ ಬಗ್ಗೆ ಅಭಿಮಾನಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿರುವ ಸಂದೇಶಗಳ ಸಾರಾಂಶ ಇದು. ವಿರಾಟ್ ಕೊಹ್ಲಿ ನಾಯಕತ್ವದ ಆರ್‌ಸಿಬಿಯು ಈ ಸಲದ ಟೂರ್ನಿಯಲ್ಲಿ ಒಟ್ಟು 10 ಅಂಕ ಗಳಿಸಿ, ಅಗ್ರಸ್ಥಾನಕ್ಕಾಗಿ ಪೈಪೋಟಿಯಲ್ಲಿತ್ತು. ಅದರಿಂದಾಗಿ ಟ್ರೋಫಿ ಜಯಿಸುವ ನಿರೀಕ್ಷೆ ಹೆಚ್ಚಿಸಿತ್ತು. ಮಂಗಳವಾರ ಟೂರ್ನಿ ಸ್ಥಗಿತವಾಗುವುದೇ ತಡ ಟ್ವಿಟರ್‌ನಲ್ಲಿ ಮಿಮ್‌ಗಳು ಮತ್ತು ಹಾಸ್ಯಭರಿತ ಸಂದೇಶಗಳ ಮಹಾಪೂರವೇ ಹರಿಯಿತು. ಅದರಲ್ಲೂ ಕೆಲವರು, 'ಈ ಕೋವಿಡ್ ಕಾಲದಲ್ಲಿ ಇದ್ದ ಒಂದೇ ಒಂದು ಮನರಂಜನೆಗೂ ಕಲ್ಲುಬಿತ್ತು' ಎಂದೂ ಪ್ರತಿಕ್ರಿಯಿಸಿದ್ದಾರೆ.



ವಿರಾಟ್ ಕೊಹ್ಲಿ

'ಟೂರ್ನಿಗೆ ತಡೆಯೊಡ್ಡಿರುವುದು ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ಹೆಚ್ಚು ಸಂತಸ ತಂದಿದೆ' ಎಂದು ಆ ಫ್ರ್ಯಾಂಚೈಸ್‌ನ ಸಹಮಾಲೀಕರಾದ ಕಾವ್ಯಾ ಮಾರನ್ ಅವರ ಚಿತ್ರಗಳನ್ನು ಟ್ಯಾಗ್ ಮಾಡಿದ್ದಾರೆ. ಹೈದರಾಬಾದ್ ಆಡಿರುವ ಏಳು ಪಂದ್ಯಗಳಲ್ಲಿ ಆರರಲ್ಲಿ ಸೋತಿದೆ.

ಪ್ರತಿಕ್ರಿಯೆಗಳು

ಈ ಕಷ್ಟಕಾಲದಲ್ಲಿ ನಾವೆಲ್ಲಾ ಒಗ್ಗಟ್ಟಾಗಿದ್ದೇವೆ. ಬಿಸಿಸಿಐ ನಿರ್ಧಾರಕ್ಕೆ ನಮ್ಮ ಬೆಂಬಲವಿದೆ. ಎಲ್ಲ ಆಟಗಾರರು ಮತ್ತು ಸಿಬ್ಬಂದಿಯು ತಮ್ಮ ಮನೆಗಳಿಗೆ ಸುರಕ್ಷಿತವಾಗಿ ಮರಳುವಂತೆ ಮಾಡಲು ಪ್ರಯತ್ನದಲ್ಲಿ ಬಿಸಿಸಿಐನೊಂದಿಗೆ ಕೈಜೋಡಿಸುತ್ತೇವೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು

ಈ ಸಂದರ್ಭದಲ್ಲಿ ನಮಗೆ ಸಹಾಯ ಮಾಡಿದ ಎಲ್ಲ ಆರೋಗ್ಯ ಕಾರ್ಯಕರ್ತರು, ರಾಜ್ಯ ಸಂಸ್ಥೆಗಳು, ನೆರವು ಸಿಬ್ಬಂದಿ, ತಂಡದ ಆಟಗಾರರು ಮತ್ತು ಬೆಂಬಲಿಗರಿಗೆ ಆಭಾರಿಯಾಗಿದ್ದೇವೆ. ನಾವು ಮತ್ತೆ ಮರಳುತ್ತೇವೆ, ಗರ್ಜಿಸುತ್ತೇವೆ.

ಚೆನ್ನೈ ಸೂಪರ್ ಕಿಂಗ್ಸ್

ಪ್ರತಿಯೊಬ್ಬ ಆಟಗಾರ ಸುರಕ್ಷಿತವಾಗಿ ತಮ್ಮ ಕುಟುಂಬಗಳನ್ನು ಸೇರಿಕೊಳ್ಳಲು ಬಿಸಿಸಿಐ ಜೊತೆಗೂಡಿ ಶ್ರಮಿಸುತ್ತೇವೆ.

ಮುಂಬೈ ಇಂಡಿಯನ್ಸ್

ಆಟಗಾರರಿಗೆ ಕೋವಿಡ್ ಖಚಿತಪಟ್ಟಿದೆ. ಈ ಸಂದರ್ಭದಲ್ಲಿ ಎಲ್ಲರ ಸುರಕ್ಷತೆಗಾಗಿ ಬಿಸಿಸಿಐ ಸರಿಯಾದ ನಿರ್ಧಾರ ಮಾಡಿದೆ. ಮತ್ತೆ ಎಲ್ಲವೂ ಸಹಜ ಸ್ಥಿತಿಗೆ ಬರುವಂತಾಗಲಿ. ಐಪಿಎಲ್ ಟೂರ್ನಿಯನ್ನು ಮತ್ತೊಮ್ಮೆ ನಾವು ನೋಡುವಂತಾಗಲಿ.

ಮೊಹಮ್ಮದ್ ಅಜರುದ್ದೀನ್
ಭಾರತ ತಂಡದ ಮಾಜಿ ನಾಯಕ


ಬಾಕ್ಸಿಂಗ್: ಕೋವಿಡ್‌ನಿಂದ ಸಚೇತಿ ಸಾವು

ನವದೆಹಲಿ (ಪಿಟಿಐ): ಕೋವಿಡ್‌ನಿಂದ ಬಳಲುತ್ತಿದ್ದ, ಭಾರತ ಬಾಕ್ಸಿಂಗ್ ಫೆಡರೇಷನ್‌ನ (ಬಿಎಫ್‌ಐ) ಕಾರ್ಯನಿರ್ವಾಹಕ ನಿರ್ದೇಶಕ ಆರ್.ಕೆ.ಸಚೇತಿ (56) ಮಂಗಳವಾರ ನಿಧನರಾದರು.

ಕಳೆದ ಕೆಲವು ದಿನಗಳ ಹಿಂದೆ ಅವರಿಗೆ ಕೋವಿಡ್ ದೃಢಪಟ್ಟಿದ್ದು, ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೆಂಟಿಲೇಟರ್ ಕೂಡ ಅಳವಡಿಸಲಾಗಿತ್ತು.

'ಫೆಡರೇಷನ್‌ನ ಕಾರ್ಯನಿರ್ವಾಹಕ ನಿರ್ದೇಶಕ ಸಚೇತಿ ನಿಧನರಾದರೆಂದು ತಿಳಿಸಲು ವೇದನೆಯಾಗುತ್ತದೆ. ಮಂಗಳವಾರ ಬೆಳಿಗ್ಗೆ ಅವರು ಸಾವನ್ನಪ್ಪಿದ್ದು, ಕ್ರೀಡಾ ಜಗತ್ತಿನಲ್ಲಿ ದೊಡ್ಡ ನಿರ್ವಾತ ಸೃಷ್ಟಿಯಾಗಿದೆ' ಎಂದು ಬಿಎಫ್‌ಐ ಪ್ರಕಟಣೆಯಲ್ಲಿ ತಿಳಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,634
ಇಂದಿನ ಅಂತ್ಯ	14,496
▼	138
ದಿನದ ಕನಿಷ್ಠ	14,461

ವಿನಿಮಯ ದರ

$ ಡಾಲರ್	73.85
£ ಪೌಂಡ್	102.53
€ ಯುರೊ	88.70
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹425
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹427

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1570)
ಸೋಯಾ (ರಿಫೈನ್ಡ್)	₹1413 (1400)
ಸೂರ್ಯಕಾಂತಿ (ರಿಫೈನ್ಡ್)	₹1730 (1730)
ಪಾಮೋಲಿನ್	₹1345 (1335)

ಅಮೆರಿಕದಲ್ಲಿ ತೈಲೋತ್ಪನ್ನಗಳ ಬೇಡಿಕೆ ಹೆಚ್ಚಳ

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಮಂಗಳವಾರ ಹೆಚ್ಚಿಸಲಾಗಿದೆ.

ದೆಹಲಿಯಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 15 ಪೈಸೆ, ಡೀಸೆಲ್ ಬೆಲೆ 18 ಪೈಸೆ ಹೆಚ್ಚಳ ಆಗಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆ 24 ಪೈಸೆ, ಡೀಸೆಲ್ ಬೆಲೆ 27 ಪೈಸೆ ಏರಿಕೆ ಆಗಿದೆ. ಕಳೆದ 18 ದಿನಗಳಿಂದ ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿ ಬದಲಾವಣೆ ಆಗಿರಲಿಲ್ಲ.

ನಾಲ್ಕು ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಗಳಿಗೆ ಚುನಾವಣೆ ನಡೆದು, ಫಲಿತಾಂಶ ಪ್ರಕಟವಾದ ನಂತರ ತೈಲ ಬೆಲೆಯನ್ನು ಪರಿಷ್ಕರಿಸಲಾಗಿದೆ.



ಭಾರತದಲ್ಲಿ ಹೆಚ್ಚುತ್ತಿರುವ ಕೋವಿಡ್–19 ಪ್ರಕರಣಗಳು ತೈಲ ಬೇಡಿಕೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿವೆ ಎಂಬ ಅಂದಾಜು ಇದ್ದರೂ, ಅಮೆರಿಕದಲ್ಲಿ ತೈಲ ಬೇಡಿಕೆ ಹೆಚ್ಚಳ ಆಗುತ್ತಿರುವ ಕಾರಣದಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚಳವಾಗಿದೆ. ಏಪ್ರಿಲ್ 27ರ ನಂತರ ಕಚ್ಚಾತೈಲದ ಬೆಲೆ ಹೆಚ್ಚಳ ಆಗುತ್ತಲೇ ಇದೆ ಎಂದು ಮೂಲಗಳು ಹೇಳಿವೆ.

ಮಾರ್ಚ್ 24ರಿಂದ ಏಪ್ರಿಲ್ 15ರ ನಡುವಿನ ಅವಧಿಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್‌ನ ದೇಶಿ ಮಾರಾಟ ದರದಲ್ಲಿ ನಾಲ್ಕು ಬಾರಿ ಇಳಿಕೆ ಮಾಡಲಾಯಿತು.

ನಾಲ್ಕು ಬಾರಿ ಕಡಿತ ಮಾಡಿದ ಪರಿಣಾಮವಾಗಿ ಪೆಟ್ರೋಲ್ ಬೆಲೆ ಸರಿಸುಮಾರು 67 ಪೈಸೆ, ಡೀಸೆಲ್ ಬೆಲೆ ಸರಿಸುಮಾರು 74 ಪೈಸೆ ಇಳಿಕೆ ಆಯಿತು.

ಮಾರಾಟದ ಒತ್ತಡ: ಸೆನ್ಸೆಕ್ಸ್ ಇಳಿಕೆ

ಮುಂಬೈ (ಪಿಟಿಐ): ಪ್ರಮುಖ ಕಂಪನಿಗಳ ಷೇರುಗಳು ಮಂಗಳವಾರ ಮಾರಾಟದ ಒತ್ತಡಕ್ಕೆ ಒಳಗಾದವು. ಹೀಗಾಗಿ ದೇಶದ ಷೇರುಪೇಟೆಗಳು ದಿನದ ಆರಂಭದಲ್ಲಿ ಕಂಡುಕೊಂಡಿದ್ದ ಗಳಿಕೆಯನ್ನು ಕಾಯ್ದುಕೊಳ್ಳುವಲ್ಲಿ ವಿಫಲವಾದವು.

ಬಿಎಸ್‌ಇ ಸೆನ್ಸೆಕ್ಸ್ 465 ಅಂಶ ಇಳಿಕೆ ಕಂಡಿತು. ಎನ್‌ಎಸ್‌ಇ ನಿಫ್ಟಿ 138 ಅಂಶ ಇಳಿಕೆ ಕಂಡಿತು.

ಮುಂಬೈ ಧಾರಣೆ

ಶೇಂಗಾ	
4-5-2021	
ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9350-9400
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	9400-9500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1592 (1580)
ಒಂದು ವಾರದ ಡೆಲಿವರಿ	1585 (1575)
ಸೋಯಾ ಕಚ್ಚಾ	1400 (1400)
ಪಾಮ್ ವಾರದ ಡೆಲಿವರಿ	1343 (1333)
ಸೂರ್ಯಕಾಂತಿ ಎಣ್ಣೆ ಕಚ್ಚಾ	1680 (1670)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	46,900 (46,850)
ಬೆಳ್ಳಿ ಕೆ.ಜಿ	70,250 (68,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್–ಹಣಕಾಸು ತಜ್ಞ
uppuranik@gmail.com
ಮೊ: 9448015300

ಚಂದ್ರಮತಿ, ದಾವಣಗೆರೆ

- **ಪ್ರಶ್ನೆ: ನನ್ನ ವಯಸ್ಸು 67 ವರ್ಷ. ಯಜಮಾನರು ಸರ್ಕಾರಿ ನೌಕರಿಯಲ್ಲಿದ್ದು ತೀರಿಕೊಂಡಿದ್ದಾರೆ. ಅವರ ಪಿಂಚಣಿ ನನಗೆ ತಿಂಗಳಿಗೆ ₹ 22 ಸಾವಿರ ಬರುತ್ತದೆ. ವಾಸಕ್ಕೆ ಸ್ವಂತ ಮನೆ ಇದೆ. ಬಾಡಿಗೆ ತಿಂಗಳಿಗೆ ₹ 7 ಸಾವಿರ ಬರುತ್ತದೆ. ನನ್ನ ಯಜಮಾನರು ಕೊಡಿಟ್ಟ ₹ 10 ಲಕ್ಷ ಹಣವಿದೆ. ನಾನು ಈ ಹಣ ಕರ್ಣಾಟಕ ಬ್ಯಾಂಕ್‌ನಲ್ಲಿ ಠೇವಣಿ ಇರಿಸಬಹುದೇ? ಖಾಸಗಿ ಬ್ಯಾಂಕ್ ಆದ್ದರಿಂದ ಭದ್ರತೆ ಇದೆಯೇ? ತೆರಿಗೆ ಹಾಗೂ ಎಲ್ಲಾ ವಿಚಾರದಲ್ಲಿ ವಿವರವಾಗಿ ತಿಳಿಸಿ.**

ಉತ್ತರ: ಕರ್ಣಾಟಕ ಬ್ಯಾಂಕ್ ನಮ್ಮ ರಾಜ್ಯದ ಏಕೈಕ ಹೆಮ್ಮೆಯ ಖಾಸಗಿ ಬ್ಯಾಂಕ್. ಈ ಬ್ಯಾಂಕ್ ಕಳೆದ 97 ವರ್ಷಗಳಿಂದ ಉತ್ತಮ ಪ್ರಗತಿ ಸಾಧಿಸುತ್ತ ಬಂದಿದೆ. ಹೆಸರು ಮಾತ್ರ 'ಕರ್ಣಾಟಕ ಬ್ಯಾಂಕ್' ಎಂದಾಗಿದ್ದರೂ ಭಾರತದಾದ್ಯಂತ 23 ರಾಜ್ಯಗಳಲ್ಲಿ 858 ಶಾಖೆಗಳನ್ನು ಹೊಂದಿದೆ. ಇವೆಲ್ಲವನ್ನೂ ಪರಿಗಣಿಸಿ, ನೀವು ಈ ಬ್ಯಾಂಕ್‌ನಲ್ಲಿ ಧೈರ್ಯವಾಗಿ ₹ 10 ಲಕ್ಷ ಠೇವಣಿ ಇರಿಸಬಹುದು. ಜೊತೆಗೆ ಈ ಬ್ಯಾಂಕು ಹಿರಿಯ ನಾಗರಿಕರಿಗೆ, ನಿಗದಿತ ಬಡ್ಡಿದರದಲ್ಲಿ ಕಡಿತವಿಲ್ಲದೆ ಠೇವಣಿ ಮೇಲೆ ಪ್ರತಿ ತಿಂಗಳೂ ಬಡ್ಡಿ ಕೊಡುತ್ತದೆ.

ಇತ್ತೀಚಿನ ದಿವಸಗಳಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳನ್ನು ಕೂಡಾ ಖಾಸಗೀಕರಣ ಮಾಡುವ ಪ್ರಸ್ತಾವ ಸರ್ಕಾರದ ಮುಂದಿರುವುದನ್ನು ನೀವು ಗಮನಿಸಿರಬಹುದು. ಇನ್ನು ಆದಾಯ ತೆರಿಗೆ ವಿಚಾರ, ಬ್ಯಾಂಕ್ ಠೇವಣಿಯ ಬಡ್ಡಿಯಲ್ಲಿ ಸೆಕ್ಷನ್ 80ಟಿಟಿಬಿ ಅಡಿ ₹ 50 ಸಾವಿರ, ಸ್ಟ್ಯಾಂಡರ್ಡ್ ಡಿಡಕ್ಷನ್16 (1ಎ) ಅಡಿಯಲ್ಲಿ ₹ 50 ಸಾವಿರ, ಬಾಡಿಗೆಯಲ್ಲಿ ಸೆಕ್ಷನ್ 24 (ಎ) ಶೇಕಡ 30, ಹೀಗೆ ಹಲವು ವಿನಾಯಿತಿಗಳಿವೆ. ನಿಮ್ಮ ಒಟ್ಟು ವಾರ್ಷಿಕ ಆದಾಯ ₹ 5 ಲಕ್ಷದೊಳಗೆ ಬರುವುದರಿಂದ ನೀವು ತೆರಿಗೆಗೆ ಒಳಗಾಗುವುದಿಲ್ಲ. ನಿಮ್ಮ ವಾರ್ಷಿಕ ಒಟ್ಟು ಆದಾಯ ₹ 3 ಲಕ್ಷ ದಾಟಿರುವುದರಿಂದ ಐ.ಟಿ. ರಿಟರ್ನ್ಸ್ ತುಂಬಬೇಕಾಗುತ್ತದೆ.

ಅಚ್ಯುತರಾವ್, ಉಡುಪಿ

- **ಪ್ರಶ್ನೆ: ನಾನು ನಿವೃತ್ತ ಸರ್ಕಾರಿ ನೌಕರ. ನನ್ನ ಹೆಂಡತಿ ಗೃಹಿಣಿ. ನಾವಿಬ್ಬರೂ ಹಿರಿಯ ನಾಗರಿಕರು. ನನ್ನ ಮಾಸಿಕ ಪಿಂಚಣಿ ₹ 37,200. ಬ್ಯಾಂಕ್ ಠೇವಣಿಯಿಂದ ವಾರ್ಷಿಕ ₹ 1.20 ಲಕ್ಷ ಬಡ್ಡಿ ಬರುತ್ತದೆ. ಉಳಿಯಲು ಸ್ವಂತ ಮನೆ ಇದೆ. ನನ್ನ ಮೂವರು ಮೊಮ್ಮಕ್ಕಳಿಗೆ ತಲಾ ₹ 1 ಲಕ್ಷ ಭಕ್ಷೀಸು ಕೊಡಬೇಕೆಂದಿದ್ದೇನೆ. ಇದಕ್ಕೆ ತೆರಿಗೆ ಬರುವುದಾದರೆ ಎಷ್ಟು ಬರಬಹುದು? ಹಿರಿಯ ನಾಗರಿಕರಿಗೆ ಠೇವಣಿ ಇರಿಸುವಾಗ ವಿಶೇಷ ಸವಲತ್ತು, ಬಡ್ಡಿ ಇರುವಲ್ಲಿ ತಿಳಿಸಿ. ನನಗೆ ಆದಾಯ ತೆರಿಗೆ ಬರುತ್ತದೆಯೇ, ಐ.ಟಿ. ರಿಟರ್ನ್ಸ್ ತುಂಬಬೇಕೇ?**

ಉತ್ತರ: ನಿಮ್ಮ ವಾರ್ಷಿಕ ಆದಾಯ ಪಿಂಚಣಿ ₹ 4,46,400 ಹಾಗೂ ಬಡ್ಡಿ ಆದಾಯ ₹ 1.20 ಲಕ್ಷ ಈ ಎರಡೂ ಸೇರಿಸಿ ₹ 5,66,400 ಆಗುತ್ತದೆ. ಇದರಲ್ಲಿ ಸ್ಟ್ಯಾಂಡರ್ಡ್ ಡಿಡಕ್ಷನ್ ಸೆಕ್ಷನ್ 16(1ಎ) ಆಧಾರದ ಮೇಲೆ ₹ 50 ಸಾವಿರ, ಬ್ಯಾಂಕ್ ಠೇವಣಿಯಲ್ಲಿ ಸೆಕ್ಷನ್ 80ಟಿಟಿಬಿ ಆಧಾರದ ಮೇಲೆ ₹ 50 ಸಾವಿರ, ಹೀಗೆ ಒಟ್ಟಾರೆ ₹ 1 ಲಕ್ಷ ಕಳೆಯಬಹುದು. ಹೀಗೆ ಮಾಡಿದಾಗ ನಿಮ್ಮ ವಾರ್ಷಿಕ ಆದಾಯ ₹ 4,66,400 ಆಗಲಿದ್ದು ತೆರಿಗೆಗೆ ಒಳಗಾಗುವುದಿಲ್ಲ. ಆದರೆ ಐ.ಟಿ ರಿಟರ್ನ್ಸ್ ತುಂಬಲೇಬೇಕು. ಹಿರಿಯ ನಾಗರಿಕರಿಗೆ ಪ್ರಧಾನ ಮಂತ್ರಿ ವಯೋ ವಂದನಾ ಯೋಜನೆಯಲ್ಲಿ ಗರಿಷ್ಠ ₹ 15 ಲಕ್ಷ ಹಾಗೂ ಹಿರಿಯ ನಾಗರಿಕರ ಠೇವಣಿಯಲ್ಲಿ ₹ 15 ಲಕ್ಷ ಇರಿಸುವ ಸವಲತ್ತು ಇದೆ. ಸದ್ಯದ ಬಡ್ಡಿದರ ಶೇ 7.4. ಎಲ್ಲ ಬ್ಯಾಂಕುಗಳು ಅವಧಿ ಠೇವಣಿಯ ಮೇಲೆ ಹಿರಿಯ ನಾಗರಿಕರಿಗೆ ಶೇ 0.5ರವರೆಗೆ ಹೆಚ್ಚಿನ ಬಡ್ಡಿ ಕೊಡುತ್ತವೆ.

ನೀವು ನಿಮ್ಮ ಮೊಮ್ಮಕ್ಕಳಿಗೆ ಭಕ್ಷೀಸು ಆಗಿ ಕೊಡುವ ₹ 1 ಲಕ್ಷದ ಮೇಲೆ ನಿಮಗಾಗಲಿ, ನಿಮ್ಮ ಮೊಮ್ಮಕ್ಕಳಿಗಾಗಲಿ ಯಾವ ತೆರಿಗೆಯೂ ಬರುವುದಿಲ್ಲ. ರಕ್ತ ಸಂಬಂಧಿಗಳೊಳಗೆ ನಗದು ಅಥವಾ ಆಸ್ತಿ ದಾನವಾಗಿ ಕೊಟ್ಟಾಗ ತೆರಿಗೆ ವಿನಾಯಿತಿ ಇದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	900-9050
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	350
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	22500-40000
ಹಳತು	42500-50000
ಪುತ್ತೂರು	
ಹೊಸತು	28000-39500
ಹಳತು	39500-49500
ಸಿದ್ದಾಪುರ	
ಬಿಳಿಗೋಟು	26869-31699
ಕೋಕ	12699-26869
ಚಾಲಿ	32679-35639
ಕೆಂಪುಗೋಟು	24099-29199
ರಾಶಿ	37699-40509
ತಟ್ಟಿಬೆಟ್ಟೆ	31879-38099
ಶಿರಸಿ	
ಬೆಟ್ಟೆ	38691-40208
ಬಿಳಿಗೋಟು	24309-31209
ಚಾಲಿ	33699-36751
ಯಲ್ಲಾಪುರ	
ಬಿಳಿಗೋಟು	24612-30199
ಕೋಕ	17016-27699
ಚಾಲಿ	30730-36110
ಕೆಂಪುಗೋಟು	25699-31299
ರಾಶಿ	39629-42685
ತಟ್ಟಿಬೆಟ್ಟೆ	33722-38959
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	225-345
ದ್ವಿತಳಿ (ಬಿ.ವಿ)	278-441

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10250	10100	10150	ಸೆಂಟ್ಸ್
ಎಸಿ	4090	3900	3950	140.25
ಆರ್‌ಪಿ	5100	5050	5150	ಲಂಡನ್
ಆರ್‌ಸಿ	3000	2900	2950	1456ಡಾಲರ್ಸ್

ಜೈವಿಕ ಡೀಸೆಲ್ ಮಿಶ್ರಣದ ಡೀಸೆಲ್ ಬಳಕೆ: ಪ್ರಾಯೋಗಿಕ ಚಾಲನೆ

ನವದೆಹಲಿ (ಪಿಟಿಐ): ಅಡುಗೆಗೆ ಬಳಸಿ, ವ್ಯರ್ಥವಾಗುವ ಎಣ್ಣೆಯಿಂದ ತಯಾರಿಸಿದ ಜೈವಿಕ ಡೀಸೆಲ್‌ಅನ್ನು ಮಾಮೂಲಿ ಡೀಸೆಲ್ ಜೊತೆ ಸಣ್ಣ ಪ್ರಮಾಣದಲ್ಲಿ ಬೆರೆಸಿ ಬಳಕೆ ಮಾಡುವ ಪ್ರಕ್ರಿಯೆಯು ದೇಶದಲ್ಲಿ ಪ್ರಾಯೋಗಿಕವಾಗಿ ಜಾರಿಗೆ ಬಂದಿದೆ. ವಿದೇಶಗಳಿಂದ ತೈಲ ಆಮದು ಮಾಡಿಕೊಳ್ಳುವುದನ್ನು ತಗ್ಗಿಸುವುದು ಹಾಗೂ ಇಂಗಾಲ ಹೊರಸೂಸುವಿಕೆ ಕಡಿಮೆ ಮಾಡುವ ಉದ್ದೇಶ ಈ ಪ್ರಯೋಗಕ್ಕೆ ಇದೆ.

ದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗುವ ಇಂಧನ ಡೀಸೆಲ್. ಇದು ಪೆಟ್ರೋಲಿಯಂ ಉತ್ಪನ್ನಗಳಲ್ಲಿ ಒಂದು. ದೇಶವು ತನ್ನ ಅಗತ್ಯದ ಶೇಕಡ 85ರಷ್ಟು ಪೆಟ್ರೋಲಿಯಂ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುತ್ತದೆ.

ಖಾದ್ಯತೈಲ, ಪ್ರಾಣಿಜನ್ಯ ಕೊಬ್ಬು, ಅಡುಗೆಗೆ ಬಳಸಿದ ನಂತರ ವ್ಯರ್ಥವಾಗುವ ಎಣ್ಣೆ ಬಳಸಿ ಜೈವಿಕ ಡೀಸೆಲ್ ತಯಾರಿಸಬಹುದು ಎಂದು ಐಒಸಿ ಅಧ್ಯಕ್ಷ ಎಸ್.ಎ. ವೈದ್ಯ ಅವರು ತಿಳಿಸಿದ್ದಾರೆ. ಬಳಸಿದ ಅಡುಗೆ ಎಣ್ಣೆಯಿಂದ ತಯಾರಿಸಿದ ಜೈವಿಕ ಡೀಸೆಲ್‌ಅನ್ನು ಮಾಮೂಲಿ ಡೀಸೆಲ್‌ನಲ್ಲಿ ಶೇ 7ರಷ್ಟು ಪ್ರಮಾಣದಲ್ಲಿ ಮಿಶ್ರ ಮಾಡಿ, ಅದನ್ನು ವಾಹನಗಳಲ್ಲಿ ಬಳಕೆಗೆ ಒದಗಿಸುವುದು ಮಂಗಳವಾರದಿಂದ ಆರಂಭ ಆಗಿದೆ.

ಜೈವಿಕ ಡೀಸೆಲ್ ಮಿಶ್ರಣ ಇರುವ ಡೀಸೆಲ್ ಪೂರೈಕೆಗೆ ಇಂಧನ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಹಸಿರು ನಿಶಾನೆ ತೋರಿದರು. 'ಜೈವಿಕ ಡೀಸೆಲ್ ಮಿಶ್ರಣದ ಡೀಸೆಲ್ ಬಳಕೆಯು ಪರಿಸರದ ಮೇಲೆ ಪೂರಕ ಪರಿಣಾಮ ಬೀರಲಿದೆ. ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿಸಲಿದೆ' ಎಂದು ಪ್ರಧಾನ್ ಹೇಳಿದ್ದಾರೆ.

ಐಒಸಿ ಕಂಪನಿಯು ಉತ್ತರ ಪ್ರದೇಶ, ಗುಜರಾತ್ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ಒಟ್ಟು ಎಂಟು ಜೈವಿಕ ಡೀಸೆಲ್ ಉತ್ಪಾದನಾ ಘಟಕಗಳ ನಿರ್ಮಾಣ ಆರಂಭಿಸಿದೆ.